ಜೂನ್
2026


ಸಂಪುಟ 41
ಸಂಚಿಕೆ 6

ಪ್ರಸಾದ

ಮಾಸಿಕ



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಜಮ್ಮುವಿನ ವಿಜಯಪುರದ ನಜ್ವಾಲ್‌ನಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ಗಳವರೊಂದಿಗೆ ಮಹಾವಿದ್ಯಾಪೀಠದ ಅಧಿಕಾರಿಗಳು, ಕಾಲೇಜಿನ ಬೋಧಕ–ಬೋಧಕೇತರರು ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರಿದ್ದಾರೆ (13 ಜೂನ್ 2026)

ಪ್ರಸಾದ

ಸಂಪುಟ 41 : ಸಂಚಿಕೆ 6 ಜೂನ್ 2026

ಡಾ. ಎಂ.ಎನ್. ನಂದೀಶ್ ಹಂಚೆ
ಸಂಪಾದಕರು

ಜೆಎಸ್ಎಸ್ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49



ಸಂಸ್ಥಾಪಕರು

ಶ್ರೀಮನ್ಮಹಾರಾಜ ರಾಜಗುರುತಿಲಕ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಅಧ್ಯಕ್ಷರು

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು

ಸಂಪಾದಕ ಸಲಹಾ ಸಮಿತಿ

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

ಸಂಪಾದಕ ಸಮಿತಿ

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಬೆಂಗಳೂರಿನಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರು, ಆದಿಚುಂಚನಗಿರಿ ಜಗದ್ಗುರುಗಳು, ನಂಜಾವಧೂತ ಶ್ರೀಗಳು ಹಾಗೂ ನಿಶ್ಚಲಾನಂದನಾಥ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಉದ್ಘಾಟಿಸಿದರು. ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ ಮೊದಲಾದವರಿದ್ದಾರೆ (27 ಜೂನ್ 2026)

ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-

ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಗುರು 11
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಧರ್ಮಸಮನ್ವಯಿ 17
ಗೊ.ರು. ಚನ್ನಬಸವಪ್ಪ

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ 27
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಜಕ್ಕಣಾರ್ಯ ಸಂಕಲಿತ ಏಕೋತ್ತರ ಶತಸ್ಥಲೀ 32
ಡಾ. ಬಿ. ನಂಜುಂಡಸ್ವಾಮಿ

ನೀತಿಶಾಸ್ತ್ರದ ದೃಷ್ಟಿಯಲ್ಲಿ ಸಾಂಕ್ರಾಮಿಕ ರೋಗದ ಆರೈಕೆ 41
ಸಿ.ಎಂ. ಲಿಂಗರಾಜು

ಕಾಯಕದ ಬೆವರಲ್ಲಿದೆ ಕೈಲಾಸದ ಸಂತೃಪ್ತಿ 46
ವೆಂಕಟೇಶ ಕೆ. ಜನಾದ್ರಿ

ಮಾತೃವಾತ್ಸಲ್ಯದ ಪೂಜ್ಯ ನಿರ್ವಾಣ ಶ್ರೀಗಳು 51
ನಗರ್ಲೆ ಶಿವಕುಮಾರ

ವಾರ್ತಾವಿಹಾರ 57
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ನೀನೆ ಅಕಳಂಕಗುರು

ಕುಸುಮಷಟ್ಪದಿ

ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳಶಾಸ್ತ್ರವು ಪೇಳುತಿರಲರಿದೆನು ॥ ಪ ॥

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ
ವರಷಡಕ್ಷರಿಯ ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ॥ 1 ॥

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ॥ 2 ॥

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ನೀನಲ್ಲದೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವಷಡಕ್ಷರಿಲಿಂಗವೆ ॥ 3 ॥

ಸಂ.: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

(ಕೃತಿ : ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು)

ಗುರುವಾಣಿ

ತಾವತ್ಪ್ರೀತಿ ಭವೇತ್ ಲೋಕೇ ಯಾವದ್ದಾನಂ ಪ್ರದೀಯತೇ ।
ವತ್ಸಃ ಕ್ಷೀರಕ್ಷಯಂ ದೃಷ್ಟ್ವಾ ಪರಿತ್ಯಜತಿ ಮಾತರಂ ॥

ಸಂಸ್ಕೃತದ ಈ ಪ್ರಸಿದ್ಧ ಸುಭಾಷಿತವು ಲೋಕವ್ಯವಹಾರವನ್ನು ಸೂಕ್ಷ್ಮವಾಗಿ ಚಿತ್ರಿಸಿದೆ. ಲೋಕದಲ್ಲಿ ದಾನ ಅಥವಾ ಲಾಭ ಸಿಗುವವರೆಗೆ ಮಾತ್ರ ಪ್ರೀತಿ ಇರುತ್ತದೆ. ಹಾಲನ್ನು ಕೊಡುವುದನ್ನು ನಿಲ್ಲಿಸಿದ ತಕ್ಷಣ ಕರು ತನ್ನ ಹೆತ್ತ ತಾಯಿಯನ್ನೇ ತೊರೆಯುತ್ತದೆ ಎಂಬಂತೆ ಸ್ವಾರ್ಥ ಎಂಬುದು ಮಾನವನಲ್ಲಿರುವ ಸಹಜ ಸ್ವಭಾವ. ಯಾರಿಂದಲಾದರೂ ಪ್ರಯೋಜನವಿದೆ, ಲಾಭವಿದೆ ಎಂದರೆ ಮಾತ್ರ ಅವರನ್ನು ಇಷ್ಟಪಡುತ್ತಾರೆ, ಪ್ರೀತಿಸುತ್ತಾರೆ. ವಾಸ್ತವದಲ್ಲಿ ಪ್ರೀತಿ ಎನ್ನುವುದು ನಿಸ್ವಾರ್ಥವಾದ ಅನುರಾಗವಾಗಬೇಕು. ಅದು ಕೇವಲ ರಾಗವಲ್ಲ, ಅದೊಂದು ಬಗೆಯ ಅನುಭೂತಿ. ಅದರಲ್ಲಿ ಯಾವ ಬಗೆಯ ಕಲ್ಮಷವೂ ಇರುವುದಿಲ್ಲ. ಆದರೆ ಮಾನವನು ಆ ಎತ್ತರಕ್ಕೆ ಏರಲು ವಿಫಲನಾಗಿದ್ದಾನೆ. ಪ್ರೀತಿಯ ವೇಷದಲ್ಲಿ ತನ್ನ ಸ್ವಾರ್ಥವನ್ನೇ ಮೆರೆಯುತ್ತಾನೆ.

ಮನುಷ್ಯನನ್ನು ಪ್ರಾಣಿಗಳಲ್ಲಿ ಶ್ರೇಷ್ಠ ಜೀವಿ ಎನ್ನಲಾಗುತ್ತದೆ. ನಿಜ, ಮಾನವನಿಗೆ ಇರುವ ಅತಿಶಯವಾದ ಶಕ್ತಿಯೆಂದರೆ ಅವನ ಮಾತು. ಆದರೆ ಮಾತು ಆಲೋಚನೆಯಾದಾಗ ಅಷ್ಟೇನೂ ವ್ಯವಸ್ಥಿತವಾಗಿರುವುದಿಲ್ಲ. ಈ 'ವ್ಯವಸ್ಥಿತ' ಎನ್ನುವ ಪರಿಕಲ್ಪನೆಯೇ ಕೃತಕ. ಎಲ್ಲ ಪ್ರಾಣಿಗಳೂ ಪ್ರಕೃತಿದತ್ತವಾದ ರೀತಿಯಲ್ಲಿ ಬದುಕುತ್ತವೆ. ಅವುಗಳೆಲ್ಲ ಮೂಲತಃ ತಮ್ಮ ಕುಟುಂಬ, ಪರಿವಾರ, ಆಹಾರ ಸಂಪಾದನೆ, ರಕ್ಷಣೆ ಇವುಗಳನ್ನು ಜಾಗ್ರತೆಯಿಂದ ಮಾಡಿಕೊಳ್ಳುತ್ತವೆ. ಇವೆಲ್ಲವೂ ಪ್ರಕೃತಿಯಲ್ಲಿ ಬದುಕಲು ಪ್ರತಿ ಪ್ರಾಣಿಯು ಸಹಜವಾಗಿಯೇ ಮಾಡಬೇಕಾದ ಹೋರಾಟ. ಆದರೆ ಮಾನವನು ರೂಪಿಸಿಕೊಂಡಿರುವ ಎಷ್ಟೋ ಸಂಗತಿಗಳು – ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ವ್ಯವಸ್ಥೆಗಳು ಪ್ರಾಕೃತಿಕವಾಗಿ ರೂಪುಗೊಂಡವಲ್ಲ. ಬದುಕಿನ ವ್ಯವಸ್ಥೆಯು ಪ್ರಾಣಿಗಳಲ್ಲೂ ಇದೆ, ಆದರೆ ಅದು ಮಾನವನಷ್ಟು ಸ್ವಾರ್ಥದಿಂದ ಕೂಡಿರುವುದಿಲ್ಲ. ಒಂದು ಇರುವೆ ತಾನು ಸಂಗ್ರಹಿಸುವ ಆಹಾರದ ಒಂದೊಂದು ಕಣವನ್ನೂ ಬಾಯಿಯಲ್ಲಿ ಕಚ್ಚಿಕೊಂಡು ಹೋಗಿ ತನ್ನ ಗೂಡಿನಲ್ಲಿ ಸಂಗ್ರಹಿಸಿ, ಆಹಾರವನ್ನು ಸಂಗ್ರಹಿಸಲಾರದ ಮಿಕ್ಕ ಇರುವೆಗಳೊಡನೆ ಸಮಾನವಾಗಿ ಹಂಚಿಕೊಂಡು ತಿನ್ನುತ್ತದೆ. ಮಂಗವೂ ಅಷ್ಟೆ. ತನ್ನ ಮರಿಯೋ, ಬಂಧುವೋ ಸತ್ತರೆ ಅದನ್ನು ತುಂಬ ದೀರ್ಘಾವಧಿಯವರೆಗೆ

ತಬ್ಬಿಕೊಂಡೇ ಇರುತ್ತದೆ. "ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವ" ಎನ್ನುವುದು ಬಸವಣ್ಣನವರ ಪ್ರಸಿದ್ಧವಾದ ವಚನ. ಆನೆ ತನ್ನ ಹಿಂಡನ್ನು ಅಗಲುವುದೇ ಅಪರೂಪ. ಹೀಗೆ ಎಲ್ಲ ಪ್ರಾಣಿಗಳೂ ತಮ್ಮದೇ ಆದ ವ್ಯವಸ್ಥೆಯನ್ನು ಹೊಂದಿವೆ. ಅವುಗಳ ಬದುಕಿನಲ್ಲಿ ಎಲ್ಲಿಯೂ ಸ್ವಾರ್ಥ ಕಂಡುಬರುವುದಿಲ್ಲ.

ಆದರೆ ಮನುಷ್ಯ ಮಾತ್ರ ಸ್ವಾರ್ಥವಿಲ್ಲದೆ ಏನನ್ನೂ ಮಾಡುವುದಿಲ್ಲ. ಗಮನಾರ್ಹವಾದ ಸಂಗತಿ ಎಂದರೆ ಶ್ಲೋಕದಲ್ಲಿನ ಹಸು ಮತ್ತು ಕರುವಿನ ಉದಾಹರಣೆಯನ್ನು ನೋಡಬಹುದು. ಅದು ಪ್ರಾಣಿ ತಾನೆ ಎನ್ನಬಹುದು. ಆದರೆ ಮನುಷ್ಯನ ಸ್ವಾರ್ಥ, ಹೃದಯಹೀನತೆ, ವಯಸ್ಸಾದ ತಂದೆತಾಯಿಗಳನ್ನು ನಿರ್ದಾಕ್ಷಿಣ್ಯವಾಗಿ ಮನೆಯಿಂದ ಹೊರಹಾಕುವವರೆಗೂ ಆತನ ವರ್ತನೆಯಲ್ಲಿ ದುಷ್ಟತನವನ್ನು ಕಾಣಬಹುದು. ಪ್ರತಿಯೊಬ್ಬರೂ ಮುಂದೊಂದು ದಿನ ಈ ಸ್ಥಾನದಲ್ಲಿರುತ್ತೇವೆ ಎಂಬ ಕಲ್ಪನೆಯು ಯಾರಿಗೂ ಬರುವುದಿಲ್ಲ. ತಂದೆತಾಯಿಯರ ಬಳಿ ಆಸ್ತಿಪಾಸ್ತಿ ಇದ್ದರೆ ಆಗ ತೋರುವ ಆದರ ಬೇರೆಯೇ ತೆರನಾದುದು. ಈ ಎಲ್ಲದರ ನಡುವೆ ತಾಯಿಯ ಪ್ರೀತಿ, ನಿಸ್ವಾರ್ಥತೆ ಲೋಕಕ್ಕೇ ಮಾದರಿ. ಇಂಗ್ಲಿಷ್ ಲೇಖಕನೊಬ್ಬ ಅದನ್ನು "ಮದರ್ ಲವ್" ಎನ್ನುತ್ತಾನೆ. ಮಕ್ಕಳಿಂದ ಯಾವ ನಿರೀಕ್ಷೆಯನ್ನೂ ಇಟ್ಟುಕೊಳ್ಳದೆ ಅವರ ಬೆಳವಣಿಗೆಗಾಗಿ ಕೊನೆಯವರೆಗೂ ತಾಯಿ ತನ್ನನ್ನು ತೇಯ್ದುಕೊಳ್ಳುತ್ತಾಳೆ, ಕೊನೆಗೆ ಮಣ್ಣಾಗುತ್ತಾಳೆ. ಅಂಥ ಬೆಳಕಿಗೆ ಬೆಳಕಾದ ತಾಯಿಯನ್ನೂ ಒಂದು ನಿರುಪಯುಕ್ತ ವಸ್ತುವಾಗಿ ಮನುಷ್ಯ ಪರಿಗಣಿಸುತ್ತಾನೆ. ಇಂದಿನ ದಿನಮಾನಗಳಲ್ಲಿ ಹದಿಹರೆಯದವರ ನಡುವಣ ಪ್ರೀತಿ ಕೂಡ ನಿರ್ಮಲವಾಗಿರದೆ ಸ್ವಾರ್ಥದಿಂದ ಕೂಡಿರುವುದು ಕಂಡುಬರುತ್ತದೆ. ಅವನನ್ನು ಪ್ರೀತಿಸಿದರೆ ಹೇಗಿರಬಹುದು, ಇವಳನ್ನು ಪ್ರೀತಿಸಿದರೆ ಏನು ಸಿಗಬಹುದು ಎಂಬ ಸ್ವಾರ್ಥದ ನೆಲೆಯಲ್ಲಿಯೇ ನಿಲ್ಲುತ್ತವೆ. ಇಂಥ ಆಲೋಚನೆಗಳು ದಾಂಪತ್ಯದಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ ಸಮಾಜದ ಪ್ರಮುಖ ಘಟ್ಟವಾದ ಕೌಟುಂಬಿಕ ಜೀವನವನ್ನು ಹಾಳುಮಾಡುತ್ತಿವೆ.

ಸೂರ್ಯ, ಚಂದ್ರ, ಭೂಮಿ, ಗಾಳಿ, ನೀರು, ಬೆಂಕಿ – ಹೀಗೆ ಎಲ್ಲವೂ ಯಾವುದೇ ಸ್ವಾರ್ಥವಿಲ್ಲದೆ ಎಂದಿನಿಂದಲೂ ಲೋಕವನ್ನು ಪೊರೆಯುತ್ತಿವೆ. ಆದುದರಿಂದಲೇ ಕವಿ ಜಿ.ಎಸ್. ಶಿವರುದ್ರಪ್ಪನವರು "ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ?" ಎನ್ನುತ್ತಾರೆ. ಪ್ರಕೃತಿಯ ಈ ಸಹಜ ನಿಸ್ವಾರ್ಥ ಪ್ರೀತಿಯ ಪರಿಯನ್ನು ನೋಡಿ ಜನರು ಬಾಳನ್ನು ಹಸನುಗೊಳಿಸಿಕೊಳ್ಳುವುದು ಅಗತ್ಯ.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಸಂಪಾದಕೀಯ

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ ।
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದಸಾಧ್ಯವದರಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ ॥

(ಸಭಾಪರ್ವ, 1.64)

ಕುಮಾರವ್ಯಾಸ ಭಾರತದ ಸಭಾಪರ್ವದ ಈ ಪದ್ಯದಲ್ಲಿ ಧರ್ಮರಾಯನಿಗೆ ನಾರದರು ರಾಜಧರ್ಮವನ್ನು ಬೋಧಿಸುವ ಸಂದರ್ಭದಲ್ಲಿ ಕೃಷಿಯ ಮಹತ್ವವನ್ನು ತಿಳಿಸುತ್ತಾರೆ. ಇದರ ತಾತ್ಪರ್ಯವೆಂದರೆ, ಜಗತ್ತಿನ ಎಲ್ಲ ಚಟುವಟಿಕೆಗಳಿಗೂ ಜೀವಕೋಟಿಯ ಅಭ್ಯುದಯಕ್ಕೂ ಕೃಷಿಯೇ ಮೂಲ. ಕೃಷಿಯಿಂದ ದೇಶದಲ್ಲಿ ಸಮೃದ್ಧಿ ಮತ್ತು ಅಭಿವೃದ್ಧಿ ಎರಡೂ ಉಂಟಾಗುವುದು. ಆದುದರಿಂದ ಕೃಷಿ ಕಾಯಕ ಮಾಡುವ ರೈತನನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಕೃಷಿ ಮತ್ತು ಕೃಷಿಕರು ಸಮೃದ್ಧಿಯಿಂದಿರುವ ದೇಶದಲ್ಲಿ ಸಂಪತ್ತು ಹೆಚ್ಚುತ್ತದೆ. ಸಂಪತ್ತೊಂದಿದ್ದರೆ ಮನುಷ್ಯ ಏನನ್ನು ಬೇಕಾದರೂ ಸಾಧಿಸಬಹುದು. ಈ ಎಲ್ಲ ಕಾರಣಗಳಿಂದ ಕೃಷಿಯಿಲ್ಲದ ದೇಶ ದುರ್ದೇಶವಾಗಿರುತ್ತದೆ. ಅದು ಬಹು ಬೇಗನೆ ನಾಶವಾಗುತ್ತದೆ. ಈ ಪದ್ಯದ ಉಲ್ಲೇಖವನ್ನು "ಪ್ರಸಾದ"ದ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಒಬ್ಬ ಶ್ರೇಷ್ಠ ಕವಿಯ ಕಾವ್ಯವಷ್ಟೇ ಅಲ್ಲ, ಒಂದು ಪದ್ಯದ ಉದ್ದೇಶ ಮತ್ತು ಆಶಯಗಳು ಎಲ್ಲ ಕಾಲದಲ್ಲೂ ಪ್ರಸ್ತುತತೆ ಪಡೆದುಕೊಳ್ಳುತ್ತದೆ ಎಂಬುದಕ್ಕೆ ಈ ಪದ್ಯವೇ ಸಾಕ್ಷಿ.

ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಿಗಿಂತಲೂ ಮನುಷ್ಯನನ್ನು ಭಿನ್ನವಾಗಿ ಗುರುತಿಸಿದ್ದು, ಭಿನ್ನತೆಯನ್ನು ಹೊಂದಿದ್ದು ಆತನ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯಿಂದ. ಮುಖ್ಯವಾದ ಸಂಗತಿಯೆಂದರೆ, ಮಾನವನಲ್ಲಿರುವಂತೆ ವ್ಯವಸ್ಥಿತವಾದ ಸಾಮಾಜಿಕ ಸಂರಕ್ಷಣೆ ಬೇರಾವ ಪ್ರಾಣಿಪ್ರಪಂಚದಲ್ಲಿಯೂ ಕಂಡುಬರುವುದಿಲ್ಲ. ಈ ಸಾಮಾಜಿಕ ವ್ಯವಸ್ಥೆಯ ತೋರುಗಂಬವೆಂದರೆ ಆತ 'ಸುಸಂಸ್ಕೃತ' ಎನ್ನುವುದು. 'ಸಂಸ್ಕೃತ' ಎಂಬ ಪದವನ್ನು ಇಂಗ್ಲಿಷ್‌ನಲ್ಲಿ 'ಕಲ್ಚರ್' ಎಂದು ಸಂವಾದಿಯಾಗಿ ಕರೆಯುತ್ತಾರೆ. 'ಕಲ್ಚರ್' ಎಂಬ ಪದಕ್ಕೆ ಮೂಲ ಪ್ರೇರಣೆ 'ಅಗ್ರಿಕಲ್ಚರ್'. 'ಅಗ್ರಿಕಲ್ಚರ್' ಎಂದರೆ ಕೃಷಿಯೆಂಬುದನ್ನು

ಪ್ರತ್ಯೇಕವಾಗಿ ವಿವರಿಸಬೇಕಿಲ್ಲ. ಮನುಷ್ಯ ಮೊದಲಿಗೆ ಕಾಡಿನ ಪ್ರಾಣಿಗಳನ್ನು ಬೇಟೆಯಾಡಿ ಇತರ ಪ್ರಾಣಿಗಳಂತೆಯೇ ತಾನೂ ಹಸಿಹಸಿಯಾಗಿ ಮಾಂಸವನ್ನು ತಿನ್ನುತ್ತಿದ್ದ. ಅಷ್ಟೇ ಏಕೆ, ಮನುಷ್ಯನಾದ ಮೇಲೂ ಬದುಕಿರುವ ಇತರ ಮನುಷ್ಯರನ್ನು ಕೊಂದು ತಿನ್ನುತ್ತಿದ್ದ ಹಲವಾರು ಪ್ರಸಂಗಗಳೂ ಇವೆ. ಪಾಂಡು ಮಹಾರಾಜನ ಶವವನ್ನು ನಕುಲ–ಸಹದೇವರು ತಿಂದ ಮಹಾಭಾರತದ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂತೆಯೇ, ಎಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ'ದ ಮೊದಲನೆಯ ಸಂಪುಟದಲ್ಲಿ ಸತ್ತ ಮತ್ತು ಬದುಕಿದ್ದ ವ್ಯಕ್ತಿಗಳನ್ನು ತಿನ್ನುವ ಇಂಥ ಪ್ರಸಂಗಗಳ ಉಲ್ಲೇಖವಿದೆ. ಬೇಟೆಯಾಡಿದ ಪ್ರಾಣಿಗಳನ್ನು ಸುಟ್ಟು ತಿನ್ನುವ ಕ್ರಮ ಬಹುಶಃ ವೇದಕಾಲದಲ್ಲಿ ಹೆಚ್ಚು ರೂಢಿಗೆ ಬಂದಿರಬಹುದು. ಏಕೆಂದರೆ, ಯಜ್ಞಯಾಗಾದಿಗಳಲ್ಲಿ ಪ್ರಾಣಿಗಳನ್ನು ಬಲಿ ನೀಡಿ ಪ್ರಸಾದವನ್ನು ಸೇವಿಸುವ ಉಲ್ಲೇಖ ಋಗ್ವೇದದಲ್ಲಿ ಬರುತ್ತದೆ. ಮುಂದೆ ಮನುಷ್ಯನು ಪ್ರಾಣಿಗಳನ್ನು ತಿನ್ನುವುದರ ಜೊತೆಗೆ, ಗೆಡ್ಡೆಗೆಣಸುಗಳನ್ನು ತಿನ್ನುವ ಪದ್ಧತಿಯನ್ನು ಅಳವಡಿಸಿಕೊಂಡ. ಅನಂತರ ಕಾಡಿನಲ್ಲಿ ಸಿಗುವ ಆಹಾರವನ್ನು, ಅಂದರೆ ಗೆಡ್ಡೆ–ಗೆಣಸು, ಅಂತೆಯೇ ಕಾಳು ಬಿದಿರಕ್ಕಿ ಮುಂತಾದ ಧಾನ್ಯಗಳನ್ನು, ಸಂಗ್ರಹಿಸಿ ಒಂದೆಡೆ ನೆಲೆನಿಂತು ಜೀವನ ನಡೆಸುವ ರೀತಿ ಆರಂಭವಾಯಿತು. ಹೀಗೆ ಧಾನ್ಯವನ್ನು ಸಂಗ್ರಹಿಸುವುದಕ್ಕೆ 'ಒಕ್ಕಲ್' ಎನ್ನಲಾಗುತ್ತದೆ. ಒಕ್ಕಲಿಗ ಎಂದರೆ ಧಾನ್ಯಗಳನ್ನು ಸಂಗ್ರಹಿಸುವವನು ಎಂಬುದು ಮೂಲ ಅರ್ಥ.

ಹೀಗೆ ಧಾನ್ಯಗಳನ್ನು ಸಂಗ್ರಹಿಸುವುದಕ್ಕೆ ಬದಲಾಗಿ ಅವುಗಳನ್ನೇ ನದೀತೀರದಲ್ಲಿನ ಫಲವತ್ತಾದ ಪ್ರದೇಶಗಳಲ್ಲಿ ಬಿತ್ತಿ ಬೆಳೆಯುವ ಪದ್ಧತಿ ಪ್ರಾರಂಭವಾಯಿತು. ಹೀಗೆ ಮಾನವನು ಒಂದೆಡೆ ನೆಲೆನಿಂತು ಮಾಡತೊಡಗಿದ ಕೃಷಿಯಿಂದಲೇ ಮುಂದೆ 'ಸಂಸ್ಕೃತಿ'ಯ ಉಗಮವಾಯಿತು. ಇದರಿಂದ ಕೃಷಿಯೇ ಮಾನವ ಸಂಸ್ಕೃತಿಗೆ ಮೂಲವೆಂಬುದು ತಿಳಿದುಬರುತ್ತದೆ. ಈ ಸಂಸ್ಕೃತಿಯಿಂದಲೇ, ಅಂದರೆ ಮೂಲತಃ ಕೃಷಿಯಿಂದಲೇ, ನಾಗರಿಕತೆ ಸೃಷ್ಟಿಯಾದದ್ದು. ಮುಂದೆ ನಾಗರಿಕ ಸಮಾಜವು ಮತ್ತಷ್ಟು ವ್ಯವಸ್ಥಿತವಾಗಿ ರೂಪುಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸಾಮ್ರಾಜ್ಯಗಳು ಉದಿಸಿದವು. ಅವುಗಳನ್ನು ಆಳುವ ಪ್ರತಿನಿಧಿಗಳು ಹುಟ್ಟಿಕೊಂಡರು. ಆಗ ಕೃಷಿಯ ಜೊತೆಜೊತೆಗೆ ಬೇರೆ ಬೇರೆ ಔದ್ಯೋಗಿಕ ವ್ಯವಸ್ಥೆಗಳು ರೂಪುಗೊಂಡವು. ಈ ಎಲ್ಲ ವ್ಯವಸ್ಥೆಗಳಿಗೂ ಮೂಲ ಕೃಷಿಯೇ ಆಗಿತ್ತು. ಕೃಷಿ ಉತ್ಪನ್ನಗಳನ್ನು ಆಧರಿಸಿ ಅನೇಕ ಉಪಕಸುಬುಗಳು ಹುಟ್ಟಿಕೊಂಡವು. ಇವೇ ಉಪಕಸುಬುಗಳು ಕಾಲಾನಂತರದಲ್ಲಿ ಅನೇಕ ಕರಕುಶಲ ಕಲೆಗಳಿಗೆ ಹಾದಿ ಮಾಡಿಕೊಟ್ಟವು. ನಾಗರಿಕತೆ ಹೆಚ್ಚಿದಂತೆಲ್ಲ ಕೃಷಿಗಿಂತಲೂ ಕೃಷಿ ಅವಲಂಬಿತ ಮತ್ತು ಉಪಕಸಬುಗಳು, ಕರಕುಶಲ ನಿರ್ಮಿತಿಗಳು ಪ್ರಾಶಸ್ತ್ಯ ಪಡೆಯತೊಡಗಿದವು. ಕಾಡಿನಿಂದ ಗುಹೆ, ಗುಹೆಯಿಂದ ಮಾಡು, ಮಾಡಿನಿಂದ ಮನೆ –

ಹೀಗೆ ಮಾನವನು ಸ್ಥಿತ್ಯಂತರ ಹೊಂದಿದಂತೆಲ್ಲ ಆತನ ಆಯ್ಕೆ ಮತ್ತು ಆದ್ಯತೆಗಳು ಬದಲಾದವು.

12ನೇ ಶತಮಾನದ ಕರ್ನಾಟಕದಲ್ಲಿ, ಅದರಲ್ಲೂ ಕೃಷ್ಣಾ ನದೀತೀರದಲ್ಲಿದ್ದ ಈಗಿನ ಕಲ್ಯಾಣಕರ್ನಾಟಕದಲ್ಲಿ, ಶರಣ ಚಳವಳಿ ಪ್ರಾರಂಭವಾಗಲು ಕೃಷಿಯ ಆದ್ಯತೆ ಬದಲಾಗಿದ್ದೇ ಕಾರಣ. ಈ ಬಗ್ಗೆ ಆರ್.ಎಸ್. ನಂದಿಯವರು ದಖ್ಖನ್ ಪ್ರದೇಶದಲ್ಲಿನ ಈ ಧಾರ್ಮಿಕ ಚಳುವಳಿಯನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿರುವುದನ್ನು ನೋಡಬಹುದು. ಜಗತ್ತಿನ ಎಲ್ಲ ನಾಗರಿಕತೆಗಳೂ ಪ್ರಧಾನವಾಗಿ ನದೀತೀರದಲ್ಲಿಯೇ ಉದಯಿಸಿವೆ. ನದಿಯ ನೀರು ಹಾಗೂ ಹರಿವಿನ ಕಾರಣದಿಂದ ಫಲವತ್ತಾದ ಭೂಮಿ, ರಸ್ತೆಗಳು, ಸಾಮ್ರಾಜ್ಯಗಳು ನಿರ್ಮಾಣವಾದವು. ಈ ಎಲ್ಲ ಚಟುವಟಿಕೆಗಳ ಹಿಂದೆ ಕೃಷಿ ಮಾತ್ರ ಮೌನವಾಗಿ ಅನುಸ್ಯೂತವಾಗಿ ಮುಂದುವರಿದೇ ಇದೆ. ಅದಕ್ಕೇ ರಾಷ್ಟ್ರಕವಿ ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಕರೆದದ್ದು.

12ನೇ ಶತಮಾನದ ಅಂತ್ಯದಲ್ಲಿ ಹಾಗೂ 19ನೇ ಶತಮಾನದ ಆರಂಭದಲ್ಲಿ ಯೂರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಕೃಷಿ ಜಗತ್ತಿನ ಮೇಲೆ ಇನ್ನಿಲ್ಲದಂತೆ ಪ್ರಭಾವ ಬೀರಿತು. 1760ರಲ್ಲಿ ಜೇಮ್ಸ್ ವ್ಯಾಟ್ ಕಂಡುಹಿಡಿದ ಉಗಿಯಂತ್ರದ ಮೂಲಕ ಆರಂಭವಾದ ಈ ಕ್ರಾಂತಿಯು ಪ್ರಧಾನವಾಗಿ ಬಟ್ಟೆ, ಕಬ್ಬಿಣ, ಮತ್ತು ರೈಲ್ವೆ ಯಂತ್ರಗಳ ತಯಾರಿಕೆಯಲ್ಲಿ ಹೊಸ ಕ್ರಾಂತಿಯನ್ನೇ ಉಂಟುಮಾಡಿತು. ಇದರಿಂದಾಗಿ ಕೃಷಿಯಿಂದ ಕೈಗಾರಿಕೆಯತ್ತ ಸಮಾಜ ಪಲ್ಲಟಗೊಂಡಿತು. ಕೈಗಾರಿಕಾ ಕ್ರಾಂತಿಯ ಫಲವಾಗಿ ನಗರೀಕರಣದ ಪ್ರಕ್ರಿಯೆ ಆರಂಭವಾಯಿತು. ಇದರಿಂದ ಕೃಷಿಯ ಕಾಲದಲ್ಲಿ ವೃತ್ತಿಯನ್ನಾಧರಿಸಿದ್ದ ಜಾತಿಯ ಸ್ಥಾನದಲ್ಲಿ ಹೊಸ ವರ್ಗತಾರತಮ್ಯ ಶುರುವಾಯಿತು. ಈ ವರ್ಗಸಂಘರ್ಷವು ಭಾರತದಲ್ಲಿ ಹೆಚ್ಚಾಗಿ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿತ್ತು. ಮುಂದೆ ಕೈಗಾರಿಕೆಯು ಆಳುವವರ ಪ್ರಧಾನ ಆದ್ಯತೆಯಾಗಿ ಕೃಷಿಯು ನಿರ್ಲಕ್ಷ್ಯಕ್ಕೆ ಒಳಗಾಗುತ್ತ ಬಂದಿತು. ಧಾವಂತದ ಬದುಕಿಗೆ ದಾರಿ ಮಾಡಿಕೊಟ್ಟಿರುವ ಕೈಗಾರಿಕೆಗಳು, ನಗರೀಕರಣದ ಅಸಹ್ಯ ಪ್ರದರ್ಶನಪ್ರಿಯತೆ ಇಂದಿನ ಬದುಕನ್ನು ಅಸಹಜವಾಗಿಸಿವೆ. ಮಣ್ಣಿನ ಸಂಬಂಧದಿಂದ ಅವನನ್ನು ದೂರವಾಗಿಸಿದೆ. ನಗರೀಕರಣ ಇಂದು ದೈತ್ಯ ಸ್ವರೂಪದಲ್ಲಿ ಬೆಳೆದು ಪೆಡಂಭೂತವಾಗಿದೆ. ಎಲ್ಲ ಮಾನವೀಯ ಸಂಬಂಧಗಳನ್ನು, ಕೌಟುಂಬಿಕತೆಯನ್ನು ಯಂತ್ರನಾಗರಿಕತೆ ಇಂದು ನುಂಗಿಹಾಕುತ್ತಿದೆ. ಈ ಯಂತ್ರನಾಗರಿಕತೆಯ ಕುರಿತು 1840ರಲ್ಲಿ ತಜ್ಞರು ಹೇಳಿದ ಎಲ್ಲ ಮಾತುಗಳು ಈಗ ಕಣ್ಣಿಗೆ ರಾಚುತ್ತಿವೆ. ಅಭಿವೃದ್ಧಿ ಎಂದರೆ ಬೃಹತ್ ಯಂತ್ರಗಳ ಸ್ಥಾಪನೆ, ನಗರಗಳು, ವಿಸ್ತಾರವಾದ ರಸ್ತೆಗಳು, ದೊಡ್ಡ ದೊಡ್ಡ ಕೈಗಾರಿಕೆಗಳ ನಿರ್ಮಾಣವೆ ಎಂಬ ಭ್ರಮೆಯನ್ನು ಸೃಷ್ಟಿಸಲಾಗಿದೆ. ಇದೊಂದು ನೀರುಗುಳ್ಳೆಯೆಂಬ ಸಣ್ಣ ತಿಳುವಳಿಕೆಯೂ ನಮಗಿಲ್ಲವಾಗಿದೆ.

ಕೃತಕ ಅಭಿವೃದ್ಧಿಯ ಹೆಸರಿನಲ್ಲಿ ಕೃಷಿಗೆ ಆದ್ಯತೆ ನೀಡದೆ ಕೃಷಿಕನನ್ನೂ ಹಳ್ಳಿಗಳನ್ನೂ ನಾಶಮಾಡುತ್ತಿದ್ದೇವೆ. ಯಾವ ದೇಶಕ್ಕೂ ಯಾವ ಸರ್ಕಾರಕ್ಕೂ ಕೃಷಿ ಇಂದು ಆದ್ಯತೆಯ ವಿಷಯವಾಗಿ ಉಳಿದಿಲ್ಲದಿರುವುದು ಆತ್ಮಘಾತಕ. ಸರಕಾರವು ಮಂಡಿಸುವ ಪ್ರತಿ ಆಯವ್ಯಯದಲ್ಲಿ ರಕ್ಷಣೆ, ಮೂಲಸೌಕರ್ಯ, ಕೈಗಾರಿಕೆ, ರೈಲ್ವೆ, ರಸ್ತೆ – ಹೀಗೆ ಹಣದ ಹಂಚಿಕೆ ನಡೆಯುತ್ತದೆ. ಕೃಷಿ ಎಂಬುದು ಸರ್ಕಾರಗಳ ಪಟ್ಟಿಯಲ್ಲಿ ಕೊನೆಯ ಆದ್ಯತೆಯಾಗಿರುವುದು ವಿಷಾದನೀಯ. ಈ ನಿರ್ಲಕ್ಷ್ಯವನ್ನು ಪ್ರತಿಭಟಿಸಲು ಕೃಷಿಕರಿಗೆ ಸಾಧ್ಯವಾಗದಿರುವುದಕ್ಕೆ ಕಾರಣ ಅದೊಂದು ಅಸಂಘಟಿತ ವಲಯವಾಗಿರುವುದು.

ಯಾವುದೇ ಸರ್ಕಾರವಾಗಲಿ ಜನಪ್ರತಿನಿಧಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನವೆಂದರೆ ಕೃಷಿ ಇಲ್ಲದಿದ್ದರೆ ಜಗತ್ತೇ ಸರ್ವನಾಶವಾಗುತ್ತದೆ. ಯಾವ ತಂತ್ರಜ್ಞಾನವಾಗಲಿ, ಕೈಗಾರಿಕೆಯಾಗಲಿ ಧಾನ್ಯವನ್ನು ಬೆಳೆಯಲಾರವು. ಮರಗಿಡಗಳನ್ನು ಅರಳಿಸಲಾರವು, ಆಮ್ಲಜನಕವನ್ನು ಉತ್ಪಾದಿಸಲಾರವು. ಇವೆಲ್ಲವೂ ಪ್ರಕೃತಿ ನಮಗೆ ನೀಡುವ ಭಿಕ್ಷೆ. ಕೈಗಾರಿಕೆಯು ಬತ್ತವನ್ನು ಅಕ್ಕಿ ಮಾಡಬಹುದು, ಅಕ್ಕಿಯನ್ನು ಹಿಟ್ಟಾಗಿಸಬಹುದು, ಹಿಟ್ಟನ್ನು ಸಂಪಣವಾಗಿಸಬಹುದು, ಅಷ್ಟೆ. ಈ ಸಣ್ಣ ವಿವೇಕವೂ ಇಲ್ಲದ ನಮ್ಮ ಆಳುವ ಸರ್ಕಾರಗಳು, ರಾಜಕಾರಣಿಗಳು ಕೃಷಿಯನ್ನು ಉದ್ದಕ್ಕೂ ನಿರ್ಲಕ್ಷಿಸಿಕೊಂಡು ಬರುತ್ತಿದ್ದಾರೆ. ಅಷ್ಟೇ ಅಲ್ಲ, ಫಲವತ್ತಾದ ಕೃಷಿ ಭೂಮಿಯನ್ನು ಅಭಿವೃದ್ಧಿ ಹಾಗೂ ನಗರೀಕರಣದ ಹೆಸರಿನಲ್ಲಿ ಅತಿಕ್ರಮಣ ಮಾಡುತ್ತಿದ್ದಾರೆ. ಒಂದು ಎಕರೆ ಭೂಮಿಯಲ್ಲಿ ಎಷ್ಟು ಬೆಳೆ ಬೆಳೆಯಬಹುದು, ಅದು ಎಷ್ಟೊಂದು ಪಶು–ಪಕ್ಷಿ, ಕ್ರಿಮಿ–ಕೀಟಗಳಿಗೆ ಆಶ್ರಯ ನೀಡಬಹುದು ಎಂಬ ಪರಿಜ್ಞಾನ ಇಂದಿನ ಯಾವ ಪಕ್ಷಕ್ಕೂ, ರಾಜಕಾರಣಿಗಳಿಗೂ ಇರಲಿ, ವಿಜ್ಞಾನಿಗಳಿಗೂ, ವಿದ್ಯಾವಂತರಿಗೂ ಇಲ್ಲವಾಗಿರುವುದು ದುರಂತ. ಹಳ್ಳಿಗಳು–ರೈತರು–ಕೃಷಿ ಎಂಬ ಪದಪುಂಜ ಈಗ ಮೂರನೇ ದರ್ಜೆಯ ವಿಷಯವಾಗಿರುವುದು ಖೇದಕರ. ಇಂದು ಕರ್ನಾಟಕದಲ್ಲಿ ನಡೆಯುತ್ತಿರುವ ಬಿಡದಿ ಪ್ರಹಸನವೂ ಕೂಡ ಇಂತಹದ್ದೇ ಅಭಿವೃದ್ಧಿ ರಾಜಕಾರಣದ ಭಾಗವಾಗಿದೆ. ಜನರೆಲ್ಲರೂ ಸಂಘಟಿತರಾಗಿ, ರಾಜಕೀಯವನ್ನು ಕೈಬಿಟ್ಟು ಕೃಷಿ ಕ್ಷೇತ್ರವನ್ನು ರಕ್ಷಿಸದೆ ಹೋದರೆ ಸದ್ಯದಲ್ಲಿಯೇ ಉಣ್ಣುವ ಬಾಯಿಗೆ ಮಣ್ಣು ಬೀಳುತ್ತದೆ, ಜನಜೀವನ ದುರ್ಭರವಾಗುತ್ತದೆ. ಆಧುನಿಕ ಕುಂಭಕರ್ಣರು ಎಚ್ಚರಗೊಳ್ಳಲೂ ಇನ್ನೂ ಕಾಲ ಮಿಂಚಿಲ್ಲ. ಕನ್ನಡಾಂಬೆ ಅವರೆಲ್ಲರಿಗೂ ಸದ್ಬುದ್ಧಿ ನೀಡಲಿ.

ಡಾ. ಎಂ.ಎನ್. ನಂದೀಶ್ ಹಂಚೆ

ಪ್ರವಚನಸಾರ

ಗುರು

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಈ ಭಗವತ್‌ಚಿಂತನೆಯ ಕ್ಷೇತ್ರದಲ್ಲಿ ಗುರುವಿನ ಪಾತ್ರ ಬಹು ದೊಡ್ಡದು, ಎಲ್ಲ ಧರ್ಮಗಳಲ್ಲಿಯೂ. ಅದೃಶ್ಯವಾದ ಅನಂತತೆಯ ಕ್ಷೇತ್ರವನ್ನು ಸೇರುವ ಪ್ರಯತ್ನದಲ್ಲಿ ಮನುಷ್ಯ ಸಾಮಾನ್ಯವಾಗಿ ವಿಫಲನಾಗುತ್ತಾನೆ, ಗುರುವಿನ ಆಸರೆ ಇರದೆ ಇದ್ದರೆ, ಸಂತರ ಮಾರ್ಗದರ್ಶನ ಇರದಿದ್ದರೆ. ಆದ್ದರಿಂದಲೇ ಗುರುವಿಗೆ ಅಷ್ಟು ಪೂಜ್ಯತೆ. ಶ್ರೇಯೋಮಾರ್ಗಿಗಳೆಲ್ಲರೂ ಬದುಕಿನಲ್ಲಿ ಗುರುವನ್ನು ಸ್ವೀಕರಿಸಿದರು. ಅಷ್ಟೇ ಅಲ್ಲ, ಗುರುವಿಗೂ ಭಗವಂತನಿಗೂ ಭಿನ್ನತೆ ಇಲ್ಲ ಎನ್ನುವಷ್ಟು ಪೂಜ್ಯಭಾವ ತಾಳಿದರು. ತೈತ್ತಿರೀಯ ಉಪನಿಷತ್ತು ಹೇಳಿತು:

ಆಚಾರ್ಯಃ ಪೂರ್ವರೂಪಂ | ಅಂತೇವಾಸಿ ಉತ್ತರರೂಪಂ

ಆಚಾರ್ಯ ಪೂರ್ವರೂಪ. ಶಿಷ್ಯ ಉತ್ತರರೂಪ. ಇಬ್ಬರ ಮಧ್ಯೆ ಸಂಧಿ ಆತ್ಮವಿದ್ಯೆ! ಅನುಸಂಧಾನವು ಪ್ರವಚನ! ಜ್ಞಾನ ಯಾರಿಂದ ಹರಿದು ಬರುತ್ತದೆ ಆತ ಆಚಾರ್ಯ; ಜ್ಞಾನವನ್ನು ಸ್ವೀಕರಿಸುವವ ಶಿಷ್ಯ. ಈ ಜ್ಞಾನವು ಆತ್ಮವಿದ್ಯೆ. ಇದು ಅಮೃತವಿದ್ಯೆ! ಈ ಜ್ಞಾನಪ್ರವಾಹಕ್ಕಾಗಿ ಬಳಸುವ ಮಾಧ್ಯಮ ಪ್ರವಚನ!

ಅರಣ್ಯದ ಮಧ್ಯ ಆಶ್ರಮ. ಪ್ರಶಾಂತವಾದ ವಾತಾವರಣ, ಸುತ್ತಮುತ್ತೆಲ್ಲ ಸುಂದರವಾದ ನಿಸರ್ಗ. ಅಲ್ಲಿ ಅವರು ಕುಳಿತು ಮಾಡಿದ್ದೇನು? ಸುಯೋಗ್ಯ ಸಮರ್ಥ ಶಿಷ್ಯರನ್ನು ಕರೆದುಕೊಂಡು ಅಮೃತವಿದ್ಯೆಯನ್ನು ಸುರಿದರು! ವೈಭವದ ಆಸರೆ ಅವರಿಗೆ ಬೇಕಿರಲಿಲ್ಲ. ರಾಜ ಮಹಾರಾಜರು ಬಂದರೂ ಕೂಡ ಅವರಲ್ಲಿ ಅಷ್ಟಾಗಿ ಆಸಕ್ತಿ ತಾಳಿದವರಲ್ಲ. ಇಂತಹ ಅಪ್ರತಿಮ ಜ್ಞಾನಪ್ರಿಯರು ಆ ಗುರುಗಳು; ನಿಸ್ಪೃಹ ವ್ಯಕ್ತಿಗಳು. ಜೀವನಾವಧಿ ವಿದ್ಯೆಯನ್ನು ನೀಡಿದರು, ಅನುಭವಿಸಿದರು.

ತೈತ್ತಿರೀಯ ಉಪನಿಷತ್ ಹೇಳುತ್ತದೆ; ಏನನ್ನಾದರೂ ಮಾಡು; ದಮ, ಶಮ, ತಪಸ್ಸು ಏನಾದರೂ ಮಾಡು; ಆದರೆ ಸ್ವಾಧ್ಯಾಯ ಪ್ರವಚನ ತ್ಯಜಿಸಬೇಡ. ಆ ಔಪನಿಷದಿಕ ಮಾತನ್ನು ಚಾಚೂ ತಪ್ಪದೆ ಆಚರಿಸಿದವರು ಆಚಾರ್ಯರು! ಶ್ರೇಷ್ಠ ಆಚಾರ್ಯರೊಬ್ಬರು ದೊರೆತರೆ, ಅವರ ಸನ್ನಿಧಾನ-ನಿವಾಸ ಭಾಗ್ಯ ಉಂಟಾದರೆ ಜ್ಞಾನ ತನ್ನಷ್ಟಕ್ಕೆ ತಾನೇ ಹರಿದುಬರುತ್ತದೆ! ವಸಂತ ಆಗಮಿಸಿದರೆ ಕೋಗಿಲೆಗೆ ಕಂಠ ಬರುತ್ತದೆ. ಯಾವ ಸಂಗೀತ ಶಾಲೆಗೂ ಹೋಗಬೇಕಾಗಿಲ್ಲ ಕೋಗಿಲೆ. ಅದೇ ಆಗ ಪಕ್ಕ ಬಲಿತ ಕೋಗಿಲೆ, ಹಾಡಲು ಅರಿಯದು, ಮೌನವಾಗಿತ್ತು. ಒಂದು ದಿನ ವಸಂತ ಅದೃಶ್ಯವಾಗಿ ನಿಸರ್ಗದಲ್ಲಿ ಸರಿದು ಬಂತು. ಗಿಡ

ಮರಗಳು ಚಿಗುರಿದುವು. ಸುವಾಸನೆ ಹರಡಿಕೊಂಡಿತು. ಯಾರಿಗೂ ಗೊತ್ತಿಲ್ಲ, ವಸಂತ ಹೇಗೆ ಬಂತು, ಎಲ್ಲಿಂದ ಬಂತು! ಆದರೆ ಕೋಗಿಲೆಗೆ ಗೊತ್ತಾಯಿತು. ಅದಕ್ಕೆ ವಸಂತದ ಅಮಲೇರಿತು. ಹಾಡಲಿಕ್ಕೆ ಪ್ರಾರಂಭ ಮಾಡಿತು! ಮೊಟ್ಟಮೊದಲನೆಯ ನಿಸರ್ಗೋನ್ಮಾದ ಗೀತೆ ಜಗತ್ತಿಗೆ ಹುಚ್ಚು ಹಿಡಿಸಿತ್ತು. ಅಂತಹ ಗೀತೆ ಹಾಡಿತ್ತು ಕೋಗಿಲೆ! ಯಾವ ಸಾಧನೆ ಮಾಡಿದ್ದಲ್ಲ, ತಪಸ್ಸು ಮಾಡಿದ್ದಲ್ಲ, ವಸಂತ ಹಾಗೆ ಮಾಡಿಸಿತ್ತು. ಹಾಗೆ ಸಾಧಕನು ಆತ್ಮಗಾನ ಮಾಡಬೇಕು. ಅದು ಕಲಿತರೆ ಬರುವುದಿಲ್ಲ. ಜ್ಞಾನ-ಸಾಮಗಾನ ಅಂತರಂಗದಿಂದ ಹೊರಹೊಮ್ಮಬೇಕು. ಅದಕ್ಕಾಗಿ ತಪಸ್ಸು ಅವಶ್ಯವಿಲ್ಲ. ಅಪಾರ ಪಾಂಡಿತ್ಯ ಬೇಕಿಲ್ಲ. ಗುರು ಎನ್ನುವ ವಸಂತ ಸುಳಿದು ಬರಬೇಕು. ಆಗ ಸುತ್ತಮುತ್ತೆಲ್ಲಾ ಬ್ರಹ್ಮದ ಸುವಾಸನೆ ಹರಡುತ್ತದೆ. ಅದನ್ನು ಆಸ್ವಾದಿಸಿದ ಸಾಧಕನ ಶ್ರದ್ಧಾಪೂರ್ಣ ಹೃದಯ ಹಾಡಲು ಆರಂಭಿಸುತ್ತದೆ. ಆತ್ಮಗಾನ ಮಾಡುತ್ತದೆ.

ಗುರು ಶಿಷ್ಯರ ಪವಿತ್ರ ಸಂಬಂಧ ಅನಿವಾರ್ಯ, ಆನಂದೋನ್ಮಾದಕ್ಕೆ ಆತ್ಮಗಾನಕ್ಕೆ. ಗುರು ವಿದ್ಯೆಯನ್ನು ನೀಡಬೇಕು. ಶಿಷ್ಯ ವಿದ್ಯೆಯನ್ನು ಸ್ವೀಕರಿಸಬೇಕು! ತಾಯಿ ಹಾಲುಣಿಸಬೇಕು. ಮಗು ಸಂತಸದಿಂದ ಹಾಲು ಕುಡಿದು ಸುಖಿಸಬೇಕು.

ಯಾರ ಹೃದಯದಲ್ಲಿ ದ್ವೇಷವಿಲ್ಲ, ಯಾರ ಹೃದಯದಲ್ಲಿ ಆಸೆ ಅಮಿಷಗಳಿಲ್ಲ, ಅಂಥ ಮಹಾನುಭಾವನೇ ಗುರು, ಆಚಾರ್ಯ. ಭಗವತ್ ಕ್ಷೇತ್ರದಲ್ಲಿ ಪ್ರವೇಶಿಸಬೇಕಾದರೆ ಅಂಥ ಆಚಾರ್ಯನ ಸನ್ನಿಧಾನ ಅತ್ಯಪೇಕ್ಷಣೀಯ.

ಮಡಕೆಯ ಮಾಡುವಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವಡೆ ಹೊನ್ನೇ ಮೊದಲು
ಶಿವಪಥವನರಿವಡೆ ಗುರುಪಥವೇ ಮೊದಲು
ಕೂಡಲಸಂಗಮದೇವರನರಿವಡೆ
ಶರಣರ ಸಂಗವೆ ಮೊದಲು

ಮಣ್ಣು ಇರದೆ ಮಡಕೆ ಆಗದು. ಹೊನ್ನು ಇರದೆ ಆಭರಣ ಆಗದು. ಶ್ರೇಷ್ಠ ಆಚಾರ್ಯರ ಸಂಗ ಇರದೆ ಭಗವಂತನ ಸಾನ್ನಿಧ್ಯ ಸಿಗದು. ಅಷ್ಟು ಅವಶ್ಯ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ಕಥೆ. ಒಬ್ಬ ಮನುಷ್ಯ ದಾರಿಯಲ್ಲಿ ಹೋಗುತ್ತಿದ್ದ. ಆತನ ಹತ್ತಿರ ಒಂದಿಷ್ಟು ಸಂಪತ್ತು. ದಾರಿ ನಿರ್ಜನ. ಅಲ್ಲಿ ಡಕಾಯಿತರು ಬಂದರು. ಸಂಪತ್ತನ್ನೆಲ್ಲಾ ಕಸಿದುಕೊಂಡರು. ಆ ಬಳಿಕ ಸುಮ್ಮನೆ ಬಿಟ್ಟುಬಿಡಲಿಲ್ಲ. ಕಣ್ಣು ಕಟ್ಟಿ ಆತನನ್ನು ದಟ್ಟವಾದ ಅರಣ್ಯದಲ್ಲಿ ಬಿಟ್ಟರು. ಯಾರೂ ಇಲ್ಲ. ಭಯಂಕರವಾದ ಅರಣ್ಯ. ಕಣ್ಣು ಕಾಣದು. ಕೈ ಕಟ್ಟಿದ್ದಾರೆ. ಇಂಥ ಪರಿಸ್ಥಿತಿಯೊಳಗೆ ಆ ವ್ಯಕ್ತಿ ಎಷ್ಟು ತಳಮಳಿಸುತ್ತಾ ಇರಬೇಡ? ಅತ ಪಾರಾಗುವುದು ಹೇಗೆ? ಭಗವಂತನನ್ನು ಪ್ರಾರ್ಥಿಸಿದ. ಅಲ್ಲಿಗೆ ಒಬ್ಬ ವ್ಯಕ್ತಿ ಬಂದ, ಶ್ರೇಷ್ಠ ಸಂತ ಬಂದ, ಅನಿಮಿತ್ತ ಬಂಧುವಾಗಿ ಬಂದ. ಕರುಣಾಪೂರ್ಣವಾದ ಶ್ರೇಷ್ಠ ಜ್ಞಾನಿ ಬಂದ. ನೋಡಿದ. ಕಣ್ಣು, ಕೈ ಬಿಚ್ಚಿದ. 'ಈ ದಾರಿಯಿಂದ ನೀನು ಹೋಗು' ಎಂದು ದಾರಿ ತೋರಿದ.

ಹಾಗೆ ಬದುಕು ಒಂದು ಕಾಡು. ವಿಸ್ತಾರವಾಗಿದೆ. ದಟ್ಟವಾಗಿದೆ. ಇಂಥಲ್ಲಿ ನಮ್ಮನ್ನು ಯಾರೋ ತಂದುಬಿಟ್ಟಿದ್ದಾರೆ! ನಾವು ಕಣ್ಣು ತೆರೆದಾಗ ಕಂಡದ್ದು ಒಂದು ಮನೆ, ತಂದೆ,

ತಾಯಿ, ಮೈಸೂರು ಪಟ್ಟಣ. ಹಿಂದೆ ಏನಾಗಿದೆ ಗೊತ್ತಿಲ್ಲ, ಮುಂದೆ ಏನಾಗಲಿದೆ ತಿಳಿಯದು. ಎಲ್ಲಿಗೆ ಪಯಣ? ಅರಿಯದು. ನಾವು ಕಲಿತಿರಬಹುದು, ಗಳಿಸಿರಬಹುದು, ಆದರೇನು ಬಾಳಿನ ಹಿಂದು ಮುಂದಿನದು ನಮಗೆ ಕಾಣದು; ತಿಳಿಯದು. ತಿಳಿದವರು ನಮಗೆ ಸಂಧಿಸಿಲ್ಲ. ಉಳಿದವರೆಲ್ಲ ಕಣ್ಣು ಕೈ ಕಟ್ಟಿಸಿಕೊಂಡವರೇ. ಎಲ್ಲರೂ ಇದೇ ಸಾಂಸಾರಿಕ ಘೋರ ಕಾನನದಲ್ಲಿ ಸಿಲುಕಿದವರೇ.

ಇಂಥ ಸ್ಥಿತಿಯಲ್ಲಿ ಯಾರು ನಮ್ಮ ಕಣ್ಣು ಬಿಚ್ಚುತ್ತಾರೆ, ಯಾರು ನಮ್ಮ ಮಾರ್ಗವನ್ನು ನಿಖರವಾಗಿ ತೋರಿಸುತ್ತಾರೆ, ನಾವೆಲ್ಲಿ ಇದ್ದೇವೆ ಎನ್ನುವುದನ್ನು ತಿಳಿಸಿಕೊಡುತ್ತಾರೆ, ಅವರೇ ಆಚಾರ್ಯರು. ಆಚಾರ್ಯವಾನ್ 'ಪುರುಷೋ ವೇದಃ'. ಯಾರಿಗೆ ಇಂತಹ ಆಚಾರ್ಯರು ಸಿಕ್ಕುವರೋ ಅವರು ತಿಳಿದುಕೊಳ್ಳುತ್ತಾರೆ. ರಾತ್ರಿ ದೀಪ, ಹಗಲು ಸೂರ್ಯ, ಕಣ್ಣಿನೊಳಗೆ ಕಾಂತಿ, ಮನಸ್ಸಿನಲ್ಲಿ ಜ್ಞಾನದ ಜ್ಯೋತಿ ಇರದೇ ಇದ್ದರೆ ಜಗತ್ತು ನಮಗೆಲ್ಲಿ ಕಾಣುತ್ತಿತ್ತು? ಹೊರಗೆ ಒಂದು ಸೂರ್ಯ ಮಿನುಗುತ್ತಿದೆ. ಒಳಗೆ ಜ್ಞಾನದ ಚಂದ್ರ ಮೂಡಿದ್ದಾನೆ ಎಂದೇ ಹೊರಗಿನ ಜಗತ್ತು ಹಾಗೂ ಅಂತರಂಗದೊಳಗಿನ ಭಾವನೆಗಳು, ವಿಚಾರಗಳು ಕಾಣುತ್ತವೆ. ಈ ಸೂರ್ಯ ಆಚಾರ್ಯ! ಈ ಅಂತರಂಗದೊಳಗಿರುವ ಜ್ಞಾನವೇ ಆಚಾರ್ಯ! ಕಣ್ಣು ತೆರೆಸಬಲ್ಲ ಯಾವುದೇ ವ್ಯಕ್ತಿ ಈ ಜಗತ್ತಿನೊಳಗಿರಲಿ, ಯಾವ ಜಾತಿ, ಮತ ಪಂಥದವನೇ ಇರಲಿ, ಅತ ಶ್ರೇಷ್ಠ ಆಚಾರ್ಯ! ಅರಣ್ಯದೊಳಗೆ ಕಣ್ಣು ಬಿಚ್ಚಿದವ ಕರುಣಾಳು. ಯಾವ ಜಾತಿ, ಗೋತ್ರ, ಭಾಷೆಯವನಾದರೇನು? ಹಾಗೆ ಗುರು!

ಆಚಾರ್ಯ ನಮ್ಮ ಬದುಕಿನಲ್ಲಿ ಪ್ರವೇಶಿಸಿದನೆಂದರೆ ಭಗವತ್ ಚಿಂತನೆ ತನ್ನಷ್ಟಕ್ಕೆ ತಾನೇ ಆರಂಭವಾಗುತ್ತದೆ. ಅಲೆಗ್ಸಾಂಡರ್ ಬಹಳ ವೀರ, ಶೂರ. ಸಣ್ಣ ವಯಸ್ಸಿನೊಳಗೆ ಆಗಿನ ಕಾಲದ ಸಮಸ್ತ ಜಗತ್ತೆಲ್ಲವನ್ನು ಗೆಲ್ಲುವ ಆಕಾಂಕ್ಷೆ ಹೊಂದಿದ್ದ. ಅದನ್ನು ಹೆಚ್ಚು ಕಡಿಮೆ ಪೂರೈಸಿಕೊಂಡಿದ್ದ. ಅವನ ಹತ್ತಿರ ಒಬ್ಬ ದೊಡ್ಡ ಮನುಷ್ಯ ಬಂದು ಕೇಳುತ್ತಾನೆ: "ಅಲೆಗ್ಸಾಂಡರ್ ಪ್ರಭುಗಳೇ, ನಿಮ್ಮ ಗುರುಗಳಾದ ಅರಿಸ್ಟಾಟಲರಿಗೆ ಅಷ್ಟೊಂದು ಗೌರವ ಕೊಡುತ್ತಿದ್ದೀರಲ್ಲ! ನಿಮ್ಮ ತಂದೆ ಮಹಾರಾಜರು. ಅವರಿಗಿಂತ ಮನ್ನಿಸುತ್ತಿದ್ದೀರಲ್ಲಾ ಏಕೆ? ತಂದೆ ನಿಮಗೆ ಸಾಮ್ರಾಜ್ಯವನ್ನೇ ಕೊಟ್ಟ. ನಿಮ್ಮನ್ನು ಅಜೇಯ ರಾಜನನ್ನಾಗಿಸಿದ. ಅವನು ಪೂಜಾಯೋಗ್ಯ. ಆ ಸಾಮಾನ್ಯನಾದ ಅರಿಸ್ಟಾಟಲ್‌ನಲ್ಲಿ ಅದೇಕೆ ಅಷ್ಟು ಪೂಜ್ಯತೆ?" ಅಲೆಕ್ಸಾಂಡರ್ ಹೇಳುತ್ತಾನೆ:

"I obtained from my father a body, a life perishable. But from my preceptor I obtained the life imperishable. My father brought me to the earth from the heaven, and my preceptor Aristotle took me from this earth to the heaven.

"ತಂದೆಗಿಂತ ಹೆಚ್ಚು ಗೌರವಿಸಲು ಎರಡು ಕಾರಣಗಳಿವೆ. ತಂದೆಯಿಂದ ನಾನು ದೇಹವನ್ನು ಪಡೆದೆ. ಆದರೆ ಇದು ನಾಶವಾಗುವಂತಹ ದೇಹ. ಅರಿಸ್ಟಾಟಲ್ ಗುರುವಿನಿಂದ ನಾನು ಅಮರ ಜೀವನವನ್ನು ಪಡೆದೆ. ನನ್ನ ತಂದೆ ಆಕಾಶದಿಂದ ಭೂಮಂಡಲಕ್ಕೆ ನನ್ನ

ತಂದಿಟ್ಟ. ನನ್ನ ಗುರು ನನ್ನನ್ನು ಭೂಮಿಯಿಂದ ಆಕಾಶದ ಎತ್ತರಕ್ಕೆ ಏರಿಸಿಬಿಟ್ಟ! ಯಾರಿಗೆ ಹೆಚ್ಚು ಪೂಜ್ಯಸ್ಥಾನವೀಯಬೇಕು ನೀನೇ ಹೇಳು."

ಭೂಮಿ ಬಿಡಿಸಿ ಆಕಾಶದೆತ್ತರಕ್ಕೇರಿಸುವವರು ಆಚಾರ್ಯರು! ಬದುಕಿನಲ್ಲಿ ಅಮೃತಭಾವ ತುಂಬುವವರು ಆಚಾರ್ಯರು! ಅದ್ದರಿಂದಲೆ "ವರಾನ್ ಪ್ರಾಪ್ಯ ನಿಬೋಧತ", "ಆಚಾರ್ಯವಾನ್ ಪುರುಷೋ ಭವ" ಎಂಬ ಅಪರೂಪದ ಆದೇಶಗಳು. ಜೀವನದೊಳಗೆ ಭಗವಂತ ಸಿಗದಿದ್ದರೂ ಚಿಂತೆ ಬೇಡ. ಸತ್ಯದ ಸಾಕ್ಷಾತ್ಕಾರ ಆಗದಿದ್ದರೂ ಚಿಂತೆ ಬೇಡ. ಒಬ್ಬ ಮಹಾನುಭಾವನ ಸಂಗ ಮಾಡು, ಸಾಕು. ಆಚಾರ್ಯವಾನ್ ಆಗು. ಗುರುವನ್ನು ತಿರಸ್ಕರಿಸಿ ಶ್ರೇಯ ಪಡೆಯಲೆಳಸಿದರೆ ಅದು ಅಸಾಧ್ಯದ ಮಾತು.

ತಾಯಿ ಮೊದಲ ಗುರು. ಬದುಕಿಗಿಳಿದ ಒಡನೆಯೇ ಮನೆಯೇ ಮೊದಲ ಪಾಠಶಾಲೆ! ನಾಲ್ಕು ಜನ ಕಲಿಸುವವರು, ನಾವೊಬ್ಬರೇ ಕಲಿಯುವವರು. ಹೇಗಿರಬೇಕು ಈ ಶಾಲೆ! ಎಲ್ಲ ಉಚಿತ. ತಾಯಿ ತಿನಿಸಿ, ಉಣಿಸಿ ತಣಿಸಿ ಪಾಠ ಹೇಳುವವಳು. ಪುಸ್ತಕವಿಲ್ಲ. ಅಭ್ಯಾಸಕ್ಕೆ ಪಠ್ಯವಿಲ್ಲ. ಹತ್ತು ವರುಷ ಕಲಿಸಿದರೂ ಅಳವಡದ ಭಾಷೆಯನ್ನು ವರುಷದಲ್ಲಿ ಕಲಿಸಿದಳು. ಅದ್ದರಿಂದಲೇ ಮನೆಯೇ ಮೊದಲ ಶ್ರೇಷ್ಠ ಪಾಠಶಾಲೆ. ತಾಯಿಯೇ ಅದರ ಮೊದಲ ಗುರು! ದೊಡ್ಡವನಾದ ಮೇಲೆ ಹಲವು ಮಂದಿ ಗುರುಗಳು, ಜ್ಞಾನವನ್ನು ಕೊಟ್ಟರು, ಲೌಕಿಕ ಜ್ಞಾನವನ್ನು ಕೊಟ್ಟರು, ಲೌಕಿಕ ಜೀವನಕ್ಕೆ ಅಸರೆ ನೀಡಿದರು! ಅವರಿಗೆಲ್ಲ ಕೃತಜ್ಞನಾಗಿರಬೇಕು. ಆದರೆ, ಇಷ್ಟೇ ವಿದ್ಯೆ ಸಾಕಾಗದು ಬದುಕು ದಿವ್ಯವಾಗಲು! ೮೦ ವರ್ಷ ೯೦ ವರ್ಷ ಬದುಕುತ್ತೇವೆ. ಆದರೆ ತೃಪ್ತಿ ಸಿಗಲಿಲ್ಲ! ಏಕೆ? ಅಂಥ ತೃಪ್ತಿಕಲೆಯ ಕಲಿಸುವ, ಸಮಾಧಾನದ ವಿದ್ಯೆ ನೀಡುವ ಗುರುವರ್ಯನನ್ನು ನಾವು ಸಂಧಿಸಿಲ್ಲ. ಆ ಗುರುವನ್ನು ಶೋಧಿಸುವುದು ಮೊದಲ ಕಾರ್ಯ. ಒಬ್ಬ ಜ್ಞಾನಿ ಮಹಂತನನ್ನು ಹುಡುಕುವುದು ಅತ್ಯವಶ್ಯ. ಅವಸರವಸರವಾಗಿ ಅಲ್ಲ. ಶೋಧಿಸಬೇಕು ತಾಳ್ಮೆಯಿಂದ.

ಯುವಕನು ಯೋಗ್ಯ ವಧುವಿಗಾಗಿ ಅದೆಷ್ಟು ಹುಡುಕುತ್ತಾನೆ! ಮನಸ್ಸು ಒಪ್ಪುವವರೆಗೆ ಶೋಧಿಸುತ್ತಾನೆ. ಲೌಕಿಕ ಬದುಕಿಗಾಗಿ ಇಷ್ಟು ಶೋಧ; ಇನ್ನು ಅಲೌಕಿಕ ಬದುಕಿಗಾಗಿ ಅದೆಷ್ಟು ಶೋಧ ಮಾಡಬೇಕಾದೀತು! ಗುರುವನ್ನು ಹುಡುಕುವಲ್ಲಿ ಸ್ವಲ್ಪ ಸಮಯ ವ್ಯಯವಾದರೂ ಸರಿಯೇ. ಒಮ್ಮೆ ಸುಯೋಗ್ಯ, ಪವಿತ್ರ ಬಾಳಿನ ಗುರು ದೊರೆತರೆ ಸಾಕು; ಜೀವನ ಸಫಲವಾದಂತೆಯೇ.

ಒಂದು ಹರಿವ ಹೊಳೆ, ಒಂದು ಹರಡಿದ ಗಿಡ, ಎತ್ತರದ ಬೆಟ್ಟ, ಸುಂದರವಾಗಿ ವಿಸ್ತರಿಸಿದ ನಿಸರ್ಗ, ಅನಂತವಾದ ಆಕಾಶ ಕೂಡ ಗುರುವಾಗಬಹುದು. ಜ್ಞಾನಜ್ಯೋತಿ ಹೊತ್ತಲು ಯಾವುದು ಕಾರಣವಾದೀತೋ ಅದು ಗುರುವೇ. ಇಷ್ಟೇ ವಸ್ತು ಗುರುಗಳಿಂದ ನಾವು ಕಲಿತುಕೊಳ್ಳಬೇಕಾಗುತ್ತದೆ. ಮಾನವ ಗುರುವು ಹಾಗಲ್ಲ. ಅತ ನಮಗವಶ್ಯವಾದ

ಆತ್ಮಜ್ಞಾನವನ್ನು ಧಾರೆಯೆರೆಯುತ್ತಾನೆ. ಅದ್ದರಿಂದ ಮಾನವ ಗುರುವಿನ ಮಹತಿ! ಅತ ಸಿಕ್ಕುವುದಾದರೆ ಮುಕ್ತಿಗಾಗಿ, ಸತ್ಯದರ್ಶನಕ್ಕಾಗಿ ಆಲೋಚಿಸಬೇಕಿಲ್ಲ.

ಅಲ್ಲಮ ಜ್ಞಾನಿ, ಆತ ಮದ್ದಳೆ ಬಾರಿಸಿದ, ಮಾಯೆ ಕುಣಿದಳು. ನಮ್ಮ ಸ್ಥಿತಿ ಅದಕ್ಕೆ ವಿರುದ್ಧ. ಮಾಯೆ ಬಾರಿಸುತ್ತಾಳೆ. ನಾವು ಕುಣಿಯುತ್ತೇವೆ. ಆತ ವಿರಾಗಮೂರ್ತಿ. ಮಾಯಾಂತಕ! ಆತನ ಒಂದು ವಚನ ನೋಡಿ.

ಉಪಾಧಿಕ ಮನವು, ಉಪಾಧಿರಹಿತ ಮನವು
ನಿಂದಲ್ಲಿ(ಯೇ) ನಿವಾತವಾಯಿತ್ತು. ಆನಂದಭಾವವು
ಬಂದು ತಾನಳಿದು ನಿಂದಲ್ಲಿ(ಯೇ) ನಿವಾತವಾಯಿತ್ತು
ಲಿಂಗೋದಯ ಪ್ರಜ್ವಲಿಸುತ್ತಿದೆ
ಗುಹೇಶ್ವರ(ನೆಂಬ) ಲಿಂಗವು ತಾನೇಯಾಗಿ

ಇಲ್ಲಿ ನಮ್ಮನ್ನು ವರ್ಣಿಸಿದ್ದಾನೆ. ಸಂತರನ್ನು ವರ್ಣಿಸಿದ್ದಾನೆ. ಸಾಧನೆಯನ್ನು ಕುರಿತು ಹೇಳಿದ್ದಾನೆ. ಕೊನೆಗೆ ನಮ್ಮ ಅನುಭವ ಏನು ಉಂಟಾದೀತು ಅನ್ನುವುದನ್ನು ಸುಂದರ ಶಬ್ದಗಳಲ್ಲಿ ವರ್ಣಿಸಿದ್ದಾನೆ, ಅಲ್ಲಮ.

ಉಪಾಧಿಕ ಮನಸ್ಸು. ಉಪಾಧಿಯ ಭಾವನೆಗಳ ಮನಸ್ಸು ನಮ್ಮೆಲ್ಲರದು! ನಮ್ಮ ಮನಸ್ಸಿನಲ್ಲಿ ಪ್ರಪಂಚ ತುಂಬಿದೆ, ಹೊರಗಿನದಕ್ಕಿಂತ ಹೆಚ್ಚು ದಟ್ಟವಾಗಿದೆ! ತಿಜೋರಿಯ ಹಣ ಉಪಾಧಿ. ಅದರ ಭಾವ ಒಳಗಿದೆ, ಉಪಾಧಿಕವದು. ಹೊರಗಿನ ಹಣ ಸಂಸಾರವಲ್ಲ, ಒಳಗಿನ ಭಾವ ಸಂಸಾರ!

ಹೆಂಡತಿ, ಮಕ್ಕಳು, ಮನೆ, ಅಧಿಕಾರ ಎಲ್ಲ ಹೊರಗಿವೆ. ಅವುಗಳ ಮಮ ಭಾವ ಒಳಗೆ! ಹೊರಗಿನದು ಭಾರವಲ್ಲ. ಒಳಗಿನದು ಭಾರ. ನಾವು ಮನಸ್ಸನ್ನು ಕಸದ ಡಬ್ಬಿ ಮಾಡಿದ್ದೇವೆ. ಯಾವುದನ್ನು ಸಂಗ್ರಹಿಸಬಾರದೋ ಅದನ್ನೆಲ್ಲ ಅದರಲ್ಲಿ ಚೆಲ್ಲಿದ್ದೇವೆ, ಹಾಕಿದ್ದೇವೆ.

ಏನೇನು ಜನರಿಗೆ ಬೇಡಾಗಿರುತ್ತದೆ ಅದನ್ನೆಲ್ಲಾ ಹಾಕುತ್ತಾರೆ ಬುಟ್ಟಿಗೆ. ಕಸದ ಬುಟ್ಟಿಯೊಳಗೆ ಒಳ್ಳೆಯ ವಸ್ತುವನ್ನು ಯಾರಾದರೂ ಹಾಕಿಯಾರೆ? ನಮ್ಮ ಮನೆಯೊಳಗೆ ಏನೇನು ಬೇಡವಾಗಿದೆ ಅದನ್ನು ತಂದು ಅಲ್ಲಿ ಹಾಕುತ್ತೇವೆ, ಆ ಬುಟ್ಟಿಗೆ. ಅಭಿಮಾನ, ತಾನು ತುಂಬಿದವನೆಂದು, ಉಳ್ಳ ಸಿರಿವಂತನೆಂದು! ಆದರೆ ಅದರಲ್ಲಿ ಏನಿದೆ? ಬರಿ ಕಸ. ಹಾಗೆ ನಾವು ಕೆಲಸಕ್ಕೆ ಬಾರದ ಸಾವಿರಾರು ಆಲೋಚನೆಗಳನ್ನು ತಲೆಯಲ್ಲಿ ತುಂಬಿಕೊಂಡಿದ್ದೇವೆ. ಉಪಯುಕ್ತವಾದ ಸಂಗತಿಗಳನ್ನೂ ಅದರಲ್ಲಿ ಚೆಲ್ಲಿದ್ದೇವೆ. ಇದು ಉಪಾಧಿಕ ಮನಸ್ಸು, ಶ್ರೀಮಂತ ಕಸದಬುಟ್ಟಿ! ಅದರಲ್ಲಿ ಗೀತೆಯ ಮಂತ್ರಗಳೂ ಇವೆ; ಪರದೂಷಕ ಮಾತುಗಳೂ ಇವೆ.

ಕಸದಬುಟ್ಟಿಯಲ್ಲಿ ಸಾಮಾನ್ಯವಾಗಿ ಕೆಟ್ಟದ್ದೇ ಇದೆ. ಮನಸ್ಸಿನಲ್ಲಿ ಹಾಗಲ್ಲ. ಅದರಲ್ಲಿ ಒಳ್ಳೆಯದೂ ಇದೆ ಕೆಟ್ಟದ್ದೂ ಇದೆ. ಎಲ್ಲ ಕೆಟ್ಟಿದ್ದರೆ ಸಂಪೂರ್ಣ ಚೆಲ್ಲಿಬಿಡಬಹುದು. ಎಲ್ಲಾ

ಒಳ್ಳೆಯದಿದ್ದರೆ ಚೆಲ್ಲದೇ ಇರಬಹುದು. ಅದರೆ ಹಾಗಿಲ್ಲ. ಚೆಲ್ಲಲೂಬಾರದು ಪೂರ್ತಿ, ಉಳಿಸಲೂ ಬಾರದು ಎಲ್ಲ. ಉಪಾಧಿಕ ಮನಸ್ಸೇ ಹೀಗೆ, ಒಂದು ಬಗೆಯ ಮಿಶ್ರಣ.

ಉಪಾಧಿವಿರಹಿತ ಮನಸ್ಸು, ಉಪಾಧಿಗಳ ಚೆಲ್ಲಿ ಹಗುರಾದ ಮನಸ್ಸು, ಖಾಲಿಯಾದ ಮನಸ್ಸು. ಮನುಷ್ಯ ಗೃಹಸ್ಥನಾಗಿ ನಿಂತಿರಲಿ, ಸನ್ಯಾಸಿಯಾಗಿ ಬಾಳುತ್ತಿರಲಿ, ಆತ ಎಲ್ಲಿ ಅಂದರೆ ಯಾವ ಆಶ್ರಮದಲ್ಲಿ ನಿಂತಿದ್ದಾನೆಯೋ ಅಲ್ಲಿ ನಿವಾತವಾಗಬೇಕು. ಅಂದರೆ ಮನಸ್ಸನ್ನು ಬರಿದಾಗಿಸಬೇಕು. ಆಗ ಅದು ನಿರಾಭಾರವೂ ಶಾಂತವೂ ಆಗುತ್ತದೆ.

ಮನಸ್ಸನ್ನು ಖಾಲಿಮಾಡುವುದು ಅಷ್ಟು ಕಠಿಣವಲ್ಲ. ಮುನಿಸಿಪಲ್ ಕಸದ ಕುಂಡಲ, ಬುಡವಿರದು. ಎತ್ತಿದರೂ ಸಾಕು, ಅದು ಬರಿದಾಗುತ್ತದೆ! ತುಂಬಲು ನೂರು ದಿನ, ಬರಿದಾಗಿಸಲು ಒಂದು ಕ್ಷಣ.

ನಾವು ಲೌಕಿಕರು ಎನ್ನುವ ಭಾವನೆಯನ್ನೂ ಬಿಡಬೇಕು; ನಾವು ಸನ್ಯಾಸಿಗಳೆಂಬ ಕಲ್ಪನೆಯನ್ನೂ ತ್ಯಜಿಸಬೇಕು. ಉಪಾಧಿಕ ಹಾಗೂ ನಿರುಪಾಧಿಕ ಎಂಬ ಎರಡೂ ಭಾವ ಹೊರಗೆ ಸುರಿದುಬಿಡಬೇಕು!ಅದು ನಿವಾತವಾಗುವಿಕೆ! ನೀವು ಸನ್ಯಾಸಿಯಾಗಬೇಕಿಲ್ಲ, ನಾನು ಗೃಹಸ್ಥನಾಗ ಬೇಕಿಲ್ಲ. ಎಲ್ಲಿ ನಾವಿದ್ದೇವೆಯೋ ಅದರ ಭಾವ ತ್ಯಜಿಸುವುದು ನಿವಾತ ಸ್ಥಿತಿ.

ನಿವಾತ ಆದ ಬಳಿಕ ಆನಂದ ಉಂಟಾಗುತ್ತದೆ; ಆನಂದದ ಭಾವ ಬಿಂದು ತಾನು ಉಳಿಯುತ್ತದೆ. ಎಲ್ಲ ಬರಿದು ಮಾಡಿದ ಮೇಲೆ ಆನಂದ ಉಂಟಾಗುತ್ತದೆ! ಪ್ರವಾಸ ಮಾಡಿ ಬಂದಾಗ ಮೈಯಿಲ್ಲ ಧೂಳು, ಬಟ್ಟೆಯಿಲ್ಲ ಕೊಳೆ. ಮನೆಗೆ ಬಂದು ಬಟ್ಟೆ ತೆಗೆದೊಗೆದು ಸ್ನಾನ ಮಾಡಿದರೆ ಎಷ್ಟು ನೆಮ್ಮದಿ! ಯಾಕೆ? ಧೂಳಿನ ಬಟ್ಟೆ ತೆಗೆದುಹಾಕಿದೆವು. ಆದ್ದರಿಂದ ಆನಂದ.

ಹಾಗೆ ಈ ಪ್ರಪಂಚದ ಕೊಳೆ ಹತ್ತಿದ ಮನಸ್ಸನ್ನು ತೊಳೆದುಬಿಟ್ಟರೆ ಆನಂದ ಉಂಟಾಗುತ್ತದೆ. ಈ ಆನಂದದ ಭಾವಬಿಂದು ಬಹಳ ಸೂಕ್ಷ್ಮ. ಆನಂದದ ಭಾವಬಿಂದು ಅಷ್ಟೇ ಉಳಿಯಬೇಕು. ಏಕೆ ಆನಂದವಾಯಿತು ಎನ್ನುವುದು ಉಳಿಯಬಾರದು. ಅಂದರೆ ಇದನ್ನು ಬಿಟ್ಟೆ, ಅದರಿಂದ ಆನಂದವಾಗಿದೆ ಎಂಬ ಭಾವ ಕೂಡ ಬೇಡ.

ಅಳಿದು ನಿಂದಲ್ಲಿ, ನಿವಾತವಾಯಿತ್ತು ನೋಡ! ಮನುಷ್ಯನ ಮನಸ್ಸು ಬರಿದಾದಾಗ ಕೇವಲಾನಂದ. ಆಗ ಹೃದಯದಲ್ಲಿ ಅರುಣೋದಯ. ಅಂತರಂಗದೊಳಗೆ ಭಗವಂತನ ಬರುವಿಕೆಯ ಮುಂಚಿನ ಒಂದು ಹೃದ್ಯ ವಾತಾವರಣ. ಅದು ಆಧ್ಯಾತ್ಮಿಕ ಅರುಣೋದಯ. ಅನಂತರ ಜ್ಞಾನ ಸೂರ್ಯ ಪ್ರಜ್ವಲಿಸಿ ಬರುತ್ತಾನೆ!

ಅದೇ ಗುಹೇಶ್ವರ ನೋಡಾ. ಆ ಜ್ಞಾನದೇವನೇ ಗುಹೇಶ್ವರ, ಭಗವಂತ. ಅತನನ್ನು ಈ ರೀತಿ ಬರಮಾಡಿಕೊಳ್ಳುವುದೇ ಭಗವತ್ ಚಿಂತನ! ಇಂತಹ ಭಗವತ್ ಚಿಂತನೆಗಾಗಿ ಮೊಟ್ಟಮೊದಲ ಕೆಲಸ, ಒಬ್ಬ ಶ್ರೇಷ್ಠ ಆಚಾರ್ಯರನ್ನು ಕಾಣುವುದು. ಶಿಷ್ಯತ್ವ ಹೊಂದುವುದು. ಗುರುಗಳಿಂದ ಬೇರೆ ಏನನ್ನೂ ಪ್ರತೀಕ್ಷಿಸದೆ ಆತ್ಮವಿದ್ಯೆಯನ್ನು ಪಡೆಯುವುದು. ಆಗ ಆತ್ಮಗಾನ! ಆತ್ಮಾನಂದ!

□

ಧರ್ಮಸಮನ್ವಯ

ಗೊ.ರು. ಚನ್ನಬಸಪ್ಪ

ಇಲ್ಲಿಗೆ ಸುಮಾರು 106 ವರ್ಷಗಳ ಹಿಂದೆ ತತ್ವಜ್ಞಾನಿಯೊಬ್ಬ ಹೇಳಿರುವ ಮಾತೊಂದಿದೆ: "ನಾನು ಈ ಭೂಮಿ ಮತ್ತು ಅದರ ಮೇಲಿನ ಬದುಕಿನಲ್ಲಿ ಎಷ್ಟು ಮುಳುಗಿದ್ದೇನೆಂದರೆ ಸ್ವರ್ಗ ಮತ್ತು ದೇವತೆಗಳ ಬಗೆಗೆ ಯೋಚನೆ ಮಾಡಲೂ ಸಾಧ್ಯವಿಲ್ಲದಷ್ಟು". ಈ ಮಾತಿನಂತೆ ಸಮಾಜದ ಬಡಮಕ್ಕಳಿಗೆ ಭವಿಷ್ಯದ ಭರವಸೆಯನ್ನು ಒದಗಿಸುವ ಮಾನವೀಯ ಸೇವೆಯಲ್ಲಿ ಸಂಪೂರ್ಣವಾಗಿ ಮುಳುಗಿದ್ದ ಮಾಹಾಚೇತನ 'ರಾಜಗುರು ತಿಲಕ' ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಲೋಕಸೇವೆಗೆ ತಮ್ಮನ್ನೇ ಅರ್ಪಿಸಿಕೊಂಡಿದ್ದ ಅನನ್ಯ ಚೇತನವೊಂದಕ್ಕೆ ನಮ್ಮ ಕೃತಜ್ಞತೆ ಮತ್ತು ಶ್ರದ್ಧಾಭಕ್ತಿಗಳನ್ನು ಸಮರ್ಪಿಸುವುದು ಸೌಭಾಗ್ಯದ ಸಂಗತಿ.

ಧರ್ಮಗುರುಗಳು ಎಂದರೆ ಹೇಗಿರಬೇಕು ಎನ್ನುವುದಕ್ಕೆ ನಿದರ್ಶನ ರೂಪವಾಗಿ, ಜ್ವಲಂತ ಸಾಕ್ಷಿಯಾಗಿ, ಪ್ರತ್ಯಕ್ಷ ಪ್ರಮಾಣವಾಗಿ ನಮ್ಮೆಲ್ಲರ ಮಧ್ಯೆ ಇದ್ದರೂ ಲೋಕದ ಎಲ್ಲ ಹಂಗುಗಳನ್ನು ಹಿಂಗಿದ್ದ ಮಹಾಂತರು ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಕನ್ನಡ ನಾಡಿನ ಧಾರ್ಮಿಕ ಇತಿಹಾಸದಲ್ಲಿ ಸುಮಾರು ಸಾವಿರ ವರ್ಷಗಳಷ್ಟು ಸುದೀರ್ಘ ಪರಂಪರೆಯನ್ನು ಪಡೆದಿರುವ ಸುತ್ತೂರು ವೀರಸಿಂಹಾಸನ ಮಠವು ಆರಂಭವಾಗಿದ್ದು ಪರಮತೇಜೋಮೂರ್ತಿ ಅದಿ ಜಗದ್ಗುರು ಶಿವರಾತ್ರೀಶ್ವರ ಭಗವತ್ಪಾದರಿಂದ. ಅಲ್ಲಿಂದೀಚೆಗೆ 23 ಜಗದ್ಗುರುಗಳು ಈ ಮಠದ ಪರಂಪರೆಯಲ್ಲಿ ಆಗಿಹೋಗಿದ್ದಾರೆ. 23ನೆಯ ಜಗದ್ಗುರುಗಳೇ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಪ್ರಸ್ತುತ ಪೀಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು 24ನೆಯ ಜಗದ್ಗುರುಗಳು.

ಧರ್ಮಸಮನ್ವಯ, ಕಾಯಕ-ದಾಸೋಹ ಸೇವೆ ಮತ್ತು ಶಿಕ್ಷಣಪ್ರಸಾರ ಈ ಮೂರು ಮಹತ್ತುಗಳ ಮಹಾ ಮನೆಯಂತಿರುವ ಶ್ರೀ ಸುತ್ತೂರು ಕ್ಷೇತ್ರ ಸಾವಿರ ವರ್ಷಕ್ಕೂ ಮಿಗಿಲಾದ ಪರಂಪರೆಯನ್ನು ಪಡೆದಿದ್ದರೂ ಸುತ್ತೂರಿನ ಬೆಳಕು ಹರಡಿದ್ದು 'ಮಂತ್ರಮಹರ್ಷಿ' ಎಂದೇ ವಿಖ್ಯಾತರಾಗಿರುವ ಪೂಜ್ಯ ಶ್ರೀ ಪಟ್ಟದ ಶಿವರಾತ್ರೀಶ್ವರ ಮಹಾಸ್ವಾಮಿಗಳ ಕಾಲದಲ್ಲಿ. ಶ್ರೀಕ್ಷೇತ್ರಕ್ಕೆ ಭಕ್ತಿಯ ಭಸ್ಮ ಲೇಪಿಸಿದವರು ಆ ಮಂತ್ರಮಹರ್ಷಿಗಳೇ. ನಂತರ ಅದಕ್ಕೆ ಸಂಕಲ್ಪಸಿದ್ಧಿಯ ಪುಷ್ಪ ಮುಡಿಸಿದವರು ಪೂಜ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಶ್ರೀ ಕ್ಷೇತ್ರಕ್ಕೆ ವಿಸ್ತಾರವಾದ ವಸ್ತ್ರ ಧರಿಸಿದವರು ಪ್ರಸ್ತುತದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು.

ನಮ್ಮ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಒಂದು ಕವನದ ನಾಲ್ಕು ಸಾಲುಗಳಿವೆ: "ಇಲ್ಲಿ ನಾವೂ ನೀವೂ ಸೇರಲೇ ಇಲ್ಲ. ಮುಖಕ್ಕೆ ಮುಖ, ಎದೆಗೆ ಎದೆ ಹತ್ತಿರ ಬಂದು ಮಾತಾಡಲೇ ಇಲ್ಲ. ನಮ್ಮ ಮಧ್ಯೆ ಸದಾ ಧೂಳು, ಗಾಳಿ, ಮಳೆ, ಕೆಸರು, ತಂತಿಕಂಬಗಳು ರುಳಿ, ಇದ್ದ ಸೇತುವೆಯೂ ಮುರಿದು, ಅಲ್ಲಿನ ಗಾಡಿ ಅಲ್ಲೇ, ಇಲ್ಲಿನ ಗಾಡಿ ಇಲ್ಲೇ". ಇಂದಿನ ಸನ್ನಿವೇಶದಲ್ಲಿ ಮಾನವಸಂಬಂಧಗಳ ಗತಿ ಏನಾಗಿದೆ ಎನ್ನುವುದಕ್ಕೆ ಈ ಸಾಲುಗಳು ಕನ್ನಡಿ ಹಿಡಿಯುತ್ತವೆ. ಇದೇನು? ನಾವೆಲ್ಲ ಒಂದು ಕಡೆ ಸೇರುತ್ತಲೇ ಇದ್ದೇವೆ. ಪರಸ್ಪರ ಮುಖಾಮುಖಿಯಾಗಿ ಮಾತಾಡುತ್ತಲೇ ಇದ್ದೇವೆ. ಆದರೂ ಈ ಕವಿ ನಾವು ಸೇರಲೇ ಇಲ್ಲ. ಮಾತಾಡಲೇ ಇಲ್ಲ ಎನ್ನುತ್ತಾರಲ್ಲ. ಏಕೆ? ಅವರ ಮಾತುಗಳಲ್ಲಿ ಅರ್ಥವಿಲ್ಲದೆ ಇಲ್ಲ.

ನಮ್ಮ ಸೇರಿಕೆ, ಬರೀ ತೋರಿಕೆ. ನಮ್ಮ ಆ ಮಾತು, ಬರಿಯ ಸದ್ದು. ಅಲ್ಲಮ ಹೇಳುವ ಶಬ್ದಸಂಭ್ರಮ! ಅದಕ್ಕೇ ಕವಿ 'ಅಲ್ಲಿನ ಗಾಡಿ ಅಲ್ಲೇ, ಇಲ್ಲಿನ ಗಾಡಿ ಇಲ್ಲೇ' ಎಂದಿರುವುದು. ಇದಕ್ಕೆ ಕಾರಣ, ನಮ್ಮ ಮಧ್ಯೆ ಇರುವ ಪರಸ್ಪರ ಅನುಮಾನದ ಧೂಳು, ಅವಿಶ್ವಾಸದ ಗಾಳಿ, ಅಸಹನೆಯ ಮಳೆ, ಅಜ್ಞಾನದ ಕೆಸರು. ಕವಿ ಹೇಳಿರುವ ಉರುಳಿರುವ ತಂತಿ ಕಂಭಗಳೆಂದರೆ ನಮ್ಮ ಪ್ರಜ್ಞೆ ಪ್ರಕ್ರಿಯೆಗಳು. ಮುರಿದು ಬಿದ್ದಿರುವ ಸೇತುವೆಯೆಂದರೆ ಮಾನವ ಮಾನವ ಸಂಬಂಧ. ಹೀಗಾಗಿ ಅಲ್ಲಿನ ಗಾಡಿ ಅಲ್ಲೇ ಇಲ್ಲಿನ ಗಾಡಿ ಇಲ್ಲೇ!

ವ್ಯಕ್ತಿ-ವ್ಯಕ್ತಿಯ ಮಧ್ಯೆ ಅಡ್ಡ ನಿಲ್ಲುವ ಅನುಮಾನ, ಅವಿಶ್ವಾಸ, ಅಸಹನೆ ಮತ್ತು ಅಜ್ಞಾನಗಳನ್ನು ನಿವಾರಿಸಿ, ಪ್ರಜ್ಞೆ - ಪ್ರಕ್ರಿಯೆಗಳನ್ನು ಅರಳಿಸಿ, ಪರಸ್ಪರ ಸೌಹಾರ್ದ ಸಂಬಂಧಗಳನ್ನು ಬೆಳೆಸಲೆಂದೇ ತಮ್ಮ ಇಡೀ ಬದುಕನ್ನು ಸವೆಸಿದ ಒಂದು ಮಹಾನ್ ಚೇತನದ ಪುಣ್ಯಸ್ಮರಣೆಯನ್ನು ಪ್ರತಿವರ್ಷವೂ ಮಾಡುತ್ತೇವೆ.

ನಾನು ಹೇಳಿದಂತೆ, ಅವರ ಜಯಂತಿಯನ್ನು ಪ್ರತಿ ವರ್ಷ ನಾವು ಆಚರಿಸುತ್ತಲೇ ಇದ್ದೇವೆ. ಈ ಆಚರಣೆಗೆಂದು ಬರುವ ಅತಿಥಿಗಳೆಲ್ಲ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಬಗ್ಗೆ ಹೇಳುತ್ತಲೇ ಇದ್ದಾರೆ. ಇದು ಪುನರಾವರ್ತನೆ ಅಲ್ಲವೇ ಎಂದೆನಿಸ ಬಹುದು.

ಒಂದು ಸ್ವಾರಸ್ಯದ ಪ್ರಸಂಗವಿದೆ: ಒಂದು ಊರಿನ ಚರ್ಚಿಗೆ ಒಬ್ಬ ಹೊಸ ಪಾದ್ರಿ ಬಂದ. ಹೊಸ ಪಾದ್ರಿ ಎಂದರೆ ಸಹಜ ಕುತೂಹಲ. ಆತ ಬಂದ ಮೊದಲ ಭಾನುವಾರ ಪ್ರಾರ್ಥನಾ ಸಭೆಗೆ ಹೆಚ್ಚು ಭಕ್ತರು ಸೇರಿದರು. ಹೊಸ ಪಾದ್ರಿ ತುಂಬಾ ಪ್ರತಿಭಾವಂತ. ಮೊದಲ ದಿನ ಮಾಡಿದ ಪ್ರವಚನ ಅತ್ಯಂತ ಪರಿಣಾಮಕಾರಿಯಾಗಿತ್ತು. ಭಕ್ತರೆಲ್ಲ ತುಂಬ ಪ್ರಭಾವಿತರಾದರು. ತಮ್ಮ ಚರ್ಚಿಗೆ ಹಿಂದೆಂದೂ ದೊರೆಯದ ಪಾದ್ರಿ ದೊರೆತಂತಾಯಿತೆಂದು ಸಂತೋಷಪಟ್ಟರು. ತಮ್ಮ ಸಂತೋಷವನ್ನು ಪಾದ್ರಿಗೂ ತಿಳಿಸಿದರು. ಪಾದ್ರಿ 'ಥ್ಯಾಂಕ್ಸ್' ಎಂದ.

ಮಾರನೆಯ ಭಾನುವಾರದ ಪ್ರಾರ್ಥನಾ ಸಭೆಗೆ ಹಿಂದಿನ ವಾರಕ್ಕಿಂತಲೂ ಹೆಚ್ಚು ಭಕ್ತರು ಪಾದ್ರಿಯ ಪ್ರವಚನ ಕೇಳುವ ಆಸಕ್ತಿಯಿಂದ ಸೇರಿದರು. ಪಾದ್ರಿ ಮೊದಲ ದಿನ ಮಾಡಿದ ಪ್ರವಚನವನ್ನೇ ಮತ್ತೆ ಮಾಡಿದ. ಇದೇನಿದು? ಹೋದ ವಾರ ಮಾಡಿದ ಪ್ರವಚನವನ್ನೇ ಈ ದಿನವೂ ಮಾಡುತ್ತಿದ್ದಾರಲ್ಲಾ ಎಂದು ಶ್ರೋತೃಗಳಿಗೆ ಅನಿಸಿದರೂ, ಪಾದ್ರಿಯ ಮಾತಿನ ಶೈಲಿ ಅವರನ್ನು ಆಕರ್ಷಿಸಿತ್ತು. ಹೀಗೆಯೇ ನಾಲ್ಕಾರು ವಾರಗಳು ಕಳೆದವು. ಪಾದ್ರಿ ಮಾತ್ರ ಆ ಮೊದಲ ದಿನದ ಪ್ರವಚನವನ್ನೇ ಮಾಡುತ್ತಿದ್ದ.

ಅದೇ ಪ್ರವಚನ ಕೇಳಿದ ಭಕ್ತರಲ್ಲೂ ಬೇಸರ ಉಂಟಾಗ ತೊಡಗಿತು. ಆದರೆ, ಪಾದ್ರಿ ಧರ್ಮಗುರು. ಅವರಿಗೆ 'ಬೇರೆ ಪ್ರವಚನ ಮಾಡಿ' ಎಂದು ಹೇಳುವುದು ಹೇಗೆ? ಆದರೂ ಒಬ್ಬ ಭಕ್ತ ಧೈರ್ಯ ಮಾಡಿ ಕೇಳಿಯೇ ಬಿಟ್ಟ: "ಸ್ವಾಮಿ, ನೀವು ನಮ್ಮ ಚರ್ಚಿಗೆ ಬಂದ ಪಾದ್ರಿಗಳಲ್ಲೆಲ್ಲಾ ಪ್ರತಿಭಾವಂತರೆಂದು ನಾವೆಲ್ಲ ತಿಳಿದಿದ್ದೇವೆ. ನೀವು ಮೊದಲ ಭಾನುವಾರ ಮಾಡಿದ ಪ್ರವಚನದಿಂದ ನಾವೆಲ್ಲ ಪ್ರಭಾವಿತರಾಗಿದ್ದೇವೆ. ತಾವು ತಪ್ಪು ಭಾವಿಸದಿದ್ದರೆ ತಮ್ಮನ್ನು ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ" ಎಂದ. ಅದಕ್ಕೆ ಪಾದ್ರಿ "ಖಂಡಿತ ಕೇಳಿ, ಸಂಕೋಚ ಬೇಡ" ಎಂದ. ಆಗ ಆ ಭಕ್ತ "ಸ್ವಾಮಿ, ತಮಗೆ ಬೇರೆ ಪ್ರವಚನಗಳು ಬರುವುದಿಲ್ಲವೇ?" ಎಂದು ಕೇಳಿದ. ಅದಕ್ಕೆ ಪಾದ್ರಿ, "ಬರದೇ ಏನು? ಬೇಕಾದಷ್ಟು ಪ್ರವಚನಗಳು ನನ್ನಲ್ಲಿವೆ" ಎಂದ. "ಹಾಗಾದರೆ ನಾಲ್ಕೈದು ವಾರ ಕಳೆದರೂ ತಾವು ಆ ಮೊದಲ ದಿವಸ ಮಾಡಿದ ಪ್ರವಚನವನ್ನೇ ಮಾಡುತ್ತಿದ್ದೀರಲ್ಲ. ಹೊಸ ಪ್ರವಚನ ಮಾಡಬಾರದೇಕೆ?" ಎಂದು ಕೇಳಿದ ಭಕ್ತ. ಆಗ ಪಾದ್ರಿ, "ಹೊಸ ಪ್ರವಚನ ಮಾಡಬಹುದಿತ್ತು. ಆದರೆ ನೀವು ನಾನು ಮೊದಲ ದಿನ ಹೇಳಿದ ಮಾತುಗಳನ್ನೇ ಅನುಸರಿಸುತ್ತಿಲ್ಲ. ಇನ್ನು ಹೊಸ ಪ್ರವಚನ ಹೇಳಿ ಏನು ಪ್ರಯೋಜನ?" ಎಂದನಂತೆ!

ಹಾಗೆಯೇ, ನಾವೂ ಪ್ರತಿ ಜಯಂತಿಯ ಸಂದರ್ಭದಲ್ಲೂ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜೀವನ ಕುರಿತು ಹೇಳುತ್ತಲೇ ಇದ್ದೇವೆ; ಕೇಳುತ್ತಲೇ ಇದ್ದೇವೆ. ಲಿಂಗೈಕ್ಯ ಜಗದ್ಗುರುಗಳ ಬದುಕು ಒಂದು ಜೀವನ ಸಂಗೀತವಿದ್ದಂತೆ. ಸಂಗೀತವನ್ನು ಮತ್ತೆ ಮತ್ತೆ ಕೇಳುವುದಿಲ್ಲವೆ? ಗಾಯಕರು ಹಾಡುವಾಗ ಕೆಲವು ಸಂದರ್ಭಗಳಲ್ಲಿ ಶ್ರೋತೃಗಳು ಈಗಾಗಲೇ ಕೇಳಿದ ಹಾಡನ್ನೇ ಮತ್ತೆ ಹಾಡಬೇಕೆಂದು ಬಯಸುವುದಿಲ್ಲವೆ? ಅದಕ್ಕೆ ಕಾರಣ, ಆ ಹಾಡಿನ ಸಾಹಿತ್ಯ, ಧಾಟಿ ಇತ್ಯಾದಿಗಳು ಕಿವಿಗೆ ಅಷ್ಟು ಹಿತವಾಗಿರುತ್ತವೆ. ಅದು ಪುನರಾವರ್ತನೆ ಎನಿಸುವುದಿಲ್ಲ.

ಈ ದೃಷ್ಟಿಯಿಂದ ನಮ್ಮ ಪೂಜ್ಯ ರಾಜೇಂದ್ರ ಗುರುಗಳ ಬಗೆಗೆ ಆಡುವ ಮಾತುಗಳೂ ಪುನರಾವರ್ತನೆ ಅಲ್ಲ; ಮತ್ತೆ ಮತ್ತೆ ಮಾಡಿಕೊಳ್ಳಬೇಕಾದ ಪುಣ್ಯಸ್ಮರಣೆ.

ಸಾಮಾನ್ಯವಾಗಿ ಮಠಗಳು ಎಂದರೆ, ಮಠದ ಸ್ವಾಮಿಗಳು ಎಂದರೆ ಒಂದು ರೀತಿಯ

ಸಂಪ್ರದಾಯದ ವ್ಯವಸ್ಥೆಗಳೆಂದು ನೋಡುವ ದಿನಮಾನದಲ್ಲಿ ನಾವಿದ್ದೇವೆ. ಆದರೆ ಇಡೀ ಈ ವ್ಯವಸ್ಥೆಯನ್ನೇ ಈ ದೃಷ್ಟಿಯಿಂದ ನೋಡಬಾರದು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ ನಮ್ಮ ಸುತ್ತೂರು ಮಠ. ಸತ್ಸಂಪ್ರದಾಯ ಪಾಲಿಸುತ್ತ, ಸಮಕಾಲೀನ ಅಗತ್ಯಗಳಿಗೆ ಸ್ಪಂದಿಸುತ್ತ, ಆಧುನಿಕರೂ ಒಪ್ಪುವಂತಹ ಸೇವಾಕಾರ್ಯ ನಿರ್ವಹಿಸುತ್ತಿರುವ, ಪ್ರಾಚೀನ ಮತ್ತು ಅರ್ವಾಚೀನಗಳೆರಡನ್ನೂ ಸಮನ್ವಯಗೊಳಿಸಿರುವ ಒಂದು ಪ್ರಗತಿಪರ ಧರ್ಮಪೀಠ ಶ್ರೀ ಸುತ್ತೂರು ವೀರಸಿಂಹಾಸನ ಮಠ.

'ಮಠ' ಎಂಬ ಶಬ್ದಕ್ಕೆ ನಿಘಂಟಿನಲ್ಲಿ ಸನ್ಯಾಸಿಗಳು ವಾಸಿಸುವ ಆಶ್ರಮ, ವಿದ್ಯೆ, ಜ್ಞಾನ, ಧರ್ಮಬೋಧನೆ ಮತ್ತು ಪ್ರಸಾರಕಾರ್ಯ ನಡೆಸುವ ಅಧ್ಯಾತ್ಮ ಸಂಸ್ಥೆ, ಯಾತ್ರಾರ್ಥಿಗಳು, ಸಾಧು-ಸಂತರಿಗೆ ನಿರಂತರವಾಗಿ ಅನ್ನದಾನ ಮಾಡುವ ಕೇಂದ್ರ ಎಂದು ಅರ್ಥ ಕೊಡಲಾಗಿದೆ. ಬಹುಶಃ ನಿಘಂಟುಕಾರರು ಶ್ರೀ ಸುತ್ತೂರು, ಸಿದ್ಧಗಂಗಾ, ಸಿರಿಗೆರೆ, ಆದಿಚುಂಚನಗಿರಿ ಇಂತಹ ಮಠಗಳನ್ನು ನೋಡಿಯೇ ಈ ಅರ್ಥ ಕೊಟ್ಟಿರಬೇಕು.

ಸುತ್ತೂರು ಧರ್ಮಪೀಠಕ್ಕೆ ಸುದೀರ್ಘ ಇತಿಹಾಸವಿದೆ; ಪರಂಪರೆಯಿದೆ. ಕ್ರಿ.ಶ.1004ರಲ್ಲಿ ಕಂಚಿಯ ರಾಜೇಂದ್ರ ಚೋಳ, ಕನ್ನಡದ ತಲಕಾಡನ್ನು ಆಕ್ರಮಿಸಿದಾಗ, ಇಲ್ಲಿದ್ದ ಗಂಗರ ದೊರೆ ರಕ್ಕಸಗಂಗ ಮತ್ತು ಅವನ ಸಾಮಂತರು ಒಟ್ಟಾಗಿ ಎದುರಿಸಿದರೂ ಆ ಶತ್ರುಸೈನ್ಯಕ್ಕೆ ಸೋಲಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಆಗ ಪೂಜ್ಯ ಆದಿ ಶಿವರಾತ್ರೀಶ್ವರ ಶಿವಯೋಗಿಗಳು ಆ ಇಬ್ಬರು ರಾಜರುಗಳ ಮಧ್ಯೆ ಸೌಹಾರ್ದ ಮೂಡಿಸಿ, ಶಾಂತಿ ಸ್ಥಾಪನೆ ಮಾಡಿದುದು ಒಂದು ಐತಿಹಾಸಿಕ ದಾಖಲೆ. ಅಲ್ಲಿಂದ ಮುಂದೆ, ಈ ಎರಡೂ ರಾಜಮನೆತನ ಗಳು, ಆನಂತರ ವಿಜಯನಗರದ ಅರಸರು ಮತ್ತು ಮೈಸೂರು ಅರಸರು ಶ್ರೀ ಸುತ್ತೂರು ಮಠದ ಭಕ್ತರಾಗಿ, ಪೋಷಕರಾಗಿ ಸೇವೆ ಸಲ್ಲಿಸಿರುವುದು ಶ್ರೀಮಠದ ಚರಿತ್ರೆಯಿಂದ ತಿಳಿದುಬರುತ್ತದೆ. ಶ್ರೀಮಠದ ಸಾವಿರಾರು ವರ್ಷಗಳ ಸುವಿಸ್ತಾರ ಚರಿತ್ರೆಯನ್ನು ಈಗ ಹಿರಿಯ ಸಂಶೋಧನ ತಜ್ಞರಾದ ಡಾ. ಎಂ.ಜಿ. ನಾಗರಾಜ್ ಅವರು ರಚಿಸಿದ್ದಾರೆ. ಸುಮಾರು 1200 ಪುಟಗಳ ಈ ಬೃಹತ್ ಗ್ರಂಥ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮಶತಮಾನೋತ್ಸವಕ್ಕೆ ಒಂದು ಕೊಡುಗೆ ಎನ್ನಬಹುದು.

ನಮಗೆಲ್ಲ ತಿಳಿದಿರುವಂತೆ, ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ ಶ್ರೀ ಸುತ್ತೂರು ಮಠದ ಸೇವೆ ಊಹೆಗೂ ನಿಲುಕದಷ್ಟು ವಿಸ್ತಾರಗೊಂಡಿದೆ. ಮೊದಲು ಸುತ್ತೂರು ಭಾಗ ಅಥವಾ ಮೈಸೂರು ಭಾಗಕ್ಕಷ್ಟೇ ಸೀಮಿತವಾಗಿದ್ದ ಶ್ರೀಮಠದ ಸೇವೆ ಈಗ ಭಾರತದ ರಾಜಧಾನಿ ದೆಹಲಿಗಷ್ಟೇ ಅಲ್ಲದೆ ದೂರದ ಮಾರಿಷಸ್, ದುಬೈ, ಅಮೇರಿಕಾದ ಮೇರಿಲ್ಯಾಂಡ್ ಮೊದಲಾದ ಕಡೆಗೆಲ್ಲ ಹಬ್ಬಿನಿಂತಿದೆ.

ಈಗ ಶ್ರೀಮಠದ ಆಶ್ರಯದಲ್ಲಿ ಸುಮಾರು 320ಕ್ಕೂ ಹೆಚ್ಚು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಕೃಷಿಕ ಸಂಸ್ಥೆಗಳಿದ್ದು, ಪೂರ್ವ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಸುಮಾರು 80 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಜೆಎಸ್ಎಸ್ ಮಹಾವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸುಮಾರು 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿ-ಶಿಕ್ಷಣದ ಸೌಲಭ್ಯ ಕಲ್ಪಿಸಲಾಗಿದೆ. ಅವರಲ್ಲಿ ಅನಾಥರು, ದೀನದಲಿತರು ಮುಂತಾದ ಅವಕಾಶವಂಚಿತರಾಗಿದ್ದ ಮಕ್ಕಳ ಸಂಖ್ಯೆಯೇ 5 ಸಾವಿರದ ಮೇಲಿದೆ. ಜೆಎಸ್ಎಸ್ ಮಹಾವಿದ್ಯಾಪೀಠ ನಡೆಸುತ್ತಿರುವ ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಂತೂ (ಜೆಸ್ಟಿಸ್) ಇಡೀ ದೇಶದಲ್ಲೇ ಒಂದು ಪ್ರತಿಷ್ಠಿತ ಸಂಸ್ಥೆ ಎಂದು ಹೆಸರು ಗಳಿಸಿದೆ.

ಶ್ರೀ ಸುತ್ತೂರು ಮಠದ ಈ ಬೃಹತ್ ಪ್ರಮಾಣದ ಬೆಳವಣಿಗೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ದಿವ್ಯಸಂಕಲ್ಪವೇ ಕಾರಣಶಕ್ತಿಯಾಗಿದೆ. ಶ್ರೀಮಠದ ಗುರುಪರಂಪರೆಯಲ್ಲಿ ಆಧ್ಯಾತ್ಮಿಕ ಅನುಭಾವಿಗಳಿದ್ದಂತೆ ಸಾಹಿತ್ಯಸಂಬಂಧವುಳ್ಳವರೂ ಇದ್ದಾರೆ. ಕ್ರಿ.ಶ. 1532ರಲ್ಲಿ ಪೀಠಕ್ಕೆ ಬಂದ ಪೂಜ್ಯಶ್ರೀ ಘನಲಿಂಗದೇವರು ಪ್ರಸಿದ್ಧ ವಚನಕಾರರಾಗಿದ್ದರು. ಅವರ ವಚನಗಳನ್ನು ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿ ಗಳೇ ಸಂಪಾದಿಸಿ ಪ್ರಕಟಿಸಿದ್ದಾರೆ. ಕ್ರಿ.ಶ. 1902ರಲ್ಲಿ ಪೀಠಕ್ಕೆ ಬಂದ ಪಟ್ಟದ ಶ್ರೀ ಶಿವರಾತ್ರೀಶ್ವರರಂತೂ ಆರು ಕೋಟಿ ಷಡಕ್ಷರ ಮಂತ್ರಗಳನ್ನು ಬರೆದು ದಾಖಲೆ ಸ್ಥಾಪಿಸಿ, 'ಮಂತ್ರಮಹರ್ಷಿ' ಗಳೆಂದೇ ಹೆಸರಾಗಿದ್ದಾರೆ. ಈಗಿನ ಜಗದ್ಗುರುಗಳೂ 'ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಜಯ' ಎಂಬ ಸಚಿತ್ರ ಕೃತಿಯನ್ನು ಸಂಪಾದಿಸಿ, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಶ್ರೀ ಸುತ್ತೂರು ಮಠ ಇಂದಿನ ಎತ್ತರಕ್ಕೆ ಇದ್ದಕ್ಕಿದ್ದಂತೆ ಎದ್ದು ನಿಂತುದಲ್ಲ. ಈ ಸಾಧನೆಯ ಹಿಂದೆ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಹರಿಸಿದ ಬೆವರಿನ ಶ್ರಮವಿದೆ; ಕರೆದ ಕಣ್ಣೀರಿನ ನೋವಿದೆ; ಪಟ್ಟ ಪಾಡಿನ ಪಯಣವಿದೆ. ಆರಂಭದ ದಿನಗಳಲ್ಲಿ ಅವರು ಅನುಭವಿಸಿರುವ ಕಷ್ಟ-ನಷ್ಟಗಳು ಅಗಾಧವಾದವು. ಹಳ್ಳಿ-ಹಳ್ಳಿಗೆ ಕಾಲ್ನಡಿಗೆಯಲ್ಲಿ ಹೋಗಿ, ಉಳ್ಳವರ ಬಳಿ ನಿಂತು ಭಿಕ್ಷಾಜೋಳಿಗೆ ಹಿಡಿದು ಸಂಗ್ರಹಿಸಿ ತಂದು ಲೆಕ್ಕವಿಲ್ಲದಷ್ಟು ಮಕ್ಕಳಿಗೆ ರಕ್ಷಣೆ ಒದಗಿಸಿದ್ದಾರೆ. 'ಸಲೆಕೂಲಿಯ ಮಾಡಿದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದಡೆ ತಲೆದಂಡ, ತಲೆದಂಡ' ಎಂದ ಬಸವಣ್ಣನವರ ಉಸಿರಾಗಿ ಪೂಜ್ಯರು ಶ್ರೀಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕೇಂದ್ರಗಳ ಕಾರ್ಯನಿರ್ವಹಣೆ ಯಂತ್ರಗಳಿಂದ ವಸ್ತುಗಳನ್ನು ಉತ್ಪಾದಿಸಿದಂತಲ್ಲ. ಅದು ಭಕ್ತಸಮುದಾಯದ ಅಂತರಂಗ ಪರಿವರ್ತನೆಯ ಮಹಾ ಸಾಹಸದ

ಕೆಲಸ. ಅದಕ್ಕೆ ಅಪಾರವಾದ ತಾಳ್ಮೆ, ಅಗಾಧವಾದ ಕಷ್ಟಸಹಿಷ್ಣುತೆ ಅಗತ್ಯವಾಗುತ್ತದೆ. ಇಂತಹ ಸೇವಾಕಾರ್ಯದಲ್ಲಿ ಸೋಲು-ಗೆಲುವುಗಳುಂಟಾಗಬಹುದು. ಆದರೆ ಪ್ರಯತ್ನದಲ್ಲಿ ಪ್ರಾಮಾಣಿಕತೆ ಇದ್ದರೆ ಸೋಲೂ ಗೆಲುವಾಗಿಬಿಡುತ್ತದೆ. ಅಂತಹ ಪ್ರಯತ್ನಕ್ಕೆ ಲೋಕ ಸಾಕ್ಷಿ ಇರುತ್ತದೆ. "ದೇವರು ನೋಡುವುದು ನಾವು ಗಳಿಸಿದ ಪದವಿ ಪ್ರಶಸ್ತಿಗಳನ್ನಲ್ಲ; ನಮ್ಮ ಪ್ರಯತ್ನದ ಹಾದಿಯಲ್ಲಿ ನಮ್ಮ ಮೈಮೇಲಾಗಿರುವ ಗಾಯಗಳನ್ನು" ಎಂದಿರುವ ಮಾತಿನಂತೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅಂತಹ ಎಷ್ಟೋ ಗಾಯಗಳ ನೋವನ್ನು ಅನುಭವಿಸಿದರೂ, ತಮ್ಮ ಸೇವಾಸಂಕಲ್ಪದಿಂದ ಎಂದೂ ಹಿಂದಕ್ಕೆ ಸರಿದವರಲ್ಲ. ಮಾನವ ಸಮುದಾಯದ ಘನತೆಯನ್ನು ಕಾಪಾಡುವ ಕಠಿಣ ಕಾರ್ಯದಲ್ಲಿ ಅವರು ಯಶಸ್ವಿಯಾದುದು ನಮಗೆಲ್ಲ ತಿಳಿದ ಸಂಗತಿಯಾಗಿದೆ.

ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಮಗ್ರ ಜೀವನವನ್ನು ತಿಳಿದುಕೊಳ್ಳಬೇಕಾದರೆ ಪ್ರಸಿದ್ಧ ಲೇಖಕರೂ, ಅನೇಕ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ವೀರಭದ್ರ ಅವರು ರಚಿಸಿರುವ 'ಸುತ್ತೂರ ಸುರಧೇನು' ಎಂಬ ಚಾರಿತ್ರಿಕ ಕಾದಂಬರಿಯನ್ನು ಓದಬೇಕು. ಇದುವರೆಗೂ ಅದನ್ನು ಓದದಿರುವವರೆಲ್ಲ ಮನವಿಟ್ಟು ಓದಬೇಕಾದ ಘನವಾದ ಪುಸ್ತಕ ಅದು. ನಾನು ಆ ಕಾದಂಬರಿಯನ್ನು ಮೂರು-ನಾಲ್ಕು ಸಲ ಓದಿರಬೇಕು. ಅದರಲ್ಲಿ ಕಾದಂಬರಿಕಾರರು ಉಲ್ಲೇಖಿಸಿರುವ ಕೆಲವು ಸಂಗತಿಗಳನ್ನು ಓದುತ್ತಿರುವಂತೆ ನಮ್ಮ ಕಣ್ಣುಗಳು ನಮಗರಿವಿಲ್ಲದಂತೆಯೇ ಕಣ್ಣೀರಿನಿಂದ ತುಂಬಿಕೊಳ್ಳುತ್ತವೆ. ಬದುಕಿ ನಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಗೆ ಎದುರಿಸಿ ಮುನ್ನಡೆಯ ಬೇಕೆನ್ನುವುದನ್ನು ಪೂಜ್ಯರ ಜೀವನ ನಮಗೆ ತಿಳಿಸುತ್ತದೆ.

ಒಂದು ಕಾಲದಲ್ಲಿ, ಸುತ್ತೂರು ಮಠ 515 ಅಂಕಣಗಳ ಬೃಹತ್ ಮಂದಿರವಾಗಿತ್ತು. ಅದಕ್ಕೆ ಅಪಾರ ಪ್ರಮಾಣದ ಭೂಮಿ ಕಾಣಿಕೆಗಳಿದ್ದವು. ಶ್ರೀಮಠದ ಧಾರ್ಮಿಕ ಆಡಳಿತಕ್ಕೆ ಸೇರಿದ 891 ಹಳ್ಳಿಗಳಲ್ಲಿ 77 ಮಠಗಳಿದ್ದವು. ಪ್ರತಿ 33 ಹಳ್ಳಿಗಳಿಗೆ ಒಂದರಂತೆ 27 ಕೇಂದ್ರಗಳಿದ್ದವು. ಆದರೆ ಇಲ್ಲಿಗೆ ಸುಮಾರು 300 ವರ್ಷಗಳ ಹಿಂದೆ ದುಷ್ಟರ ಕಿವಿಮಾತಿಗೆ ಓಗೊಟ್ಟು, ಮೈಸೂರಿನ ಅರಸ ಚಿಕ್ಕದೇವರಾಜ ಎಂಬುವನ ಕಾಲದಲ್ಲಿ, ತೆರಿಗೆಯ ಕಾರಣ ಹೇಳಿ, ಸುತ್ತೂರು ಮಠದ ಮೇಲೆ ದಾಳಿ ನಡೆಯಿತು. ಆಗ ಮಠಾಧಿಪತಿಗಳಾಗಿದ್ದ ಪೂಜ್ಯ ಗುರು ಚನ್ನಬಸವೇಶ್ವರರು ಜನತೆಯನ್ನು ಸಂಘಟಿಸಿ, ಸೈನಿಕರ ವಿರುದ್ಧ ಸೆಣಸಿ ಶ್ರೀಮಠದ ರಕ್ಷಣೆಗೆ ಎಷ್ಟೆಲ್ಲ ಪ್ರಯತ್ನಿಸುತ್ತಾರೆ. ಆದರೂ ಶ್ರೀಮಠದ ಆಸ್ತಿ-ಪಾಸ್ತಿಗಳಿಗೆ, ಸುತ್ತೂರು ಗ್ರಾಮಕ್ಕೆ ಭಾರಿ ನಷ್ಟವುಂಟಾಯಿತು. ಜನಪರವಾದ ಹೋರಾಟದಲ್ಲಿ ಒಬ್ಬ ಗ್ರಾಮೀಣ ಸೈನಿಕನನ್ನೇ ಹತ್ಯೆ ಮಾಡುತ್ತಾನೆ. ಅವನ ತಾಯಿಗೆ 8 ಗಂಡು ಮಕ್ಕಳು. ಅವರೆಲ್ಲರೂ ರಾಜನ ಸೈನ್ಯದೆದುರಿಗೆ ಹೋರಾಡಿ ಶವಗಳಾಗುತ್ತಾರೆ. ಆದರೆ, ಅವರ ತಾಯಿನಾಡಿಗಾಗಿ ಹೋರಾಡಿ ಪ್ರಾಣತೆತ್ತ ಮಕ್ಕಳೆಂದು ಅಭಿಮಾನಪಡುತ್ತಾಳೆ. ಈ ಸಂದರ್ಭದಲ್ಲಿ ಒಂದನೆಯ

ಮಹಾಯುದ್ಧ ನಡೆದಾಗಿನ ಸಂಗತಿಯೊಂದು ನೆನಪಾಗುತ್ತದೆ. ಅದು ಜರ್ಮನಿಯಲ್ಲಿ ನಡೆದ ಯುದ್ಧ. ಪ್ರತಿಯೊಂದು ಮನೆಯೂ ಒಬ್ಬೊಬ್ಬ ಯುವಕನನ್ನು ಯುದ್ಧಕ್ಕೆ ಕಳುಹಿಸಬೇಕೆಂದು ಆದೇಶವಿರುತ್ತದೆ. ಒಬ್ಬ ಹಳ್ಳಿಯ ತಾಯಿ ತನಗಿದ್ದ ಮೂರು ಮಕ್ಕಳಲ್ಲಿ ಹಿರಿಯವನನ್ನು ಕಳುಹಿಸಿಕೊಡುತ್ತಾಳೆ. ಆದರೆ ಆ ಯುವಕ ಯುದ್ಧದಲ್ಲಿ ಸತ್ತುಹೋಗುತ್ತಾನೆ. ಈ ಸುದ್ದಿ ತಿಳಿದು ಆ ಹಳ್ಳಿಯ ಜನರೆಲ್ಲಾ ಕಣ್ಣೀರು ಕರೆಯುತ್ತಾರೆ. ಆದರೆ ಆ ಸತ್ತವನ ಹೆತ್ತ ತಾಯಿ ಅಳಲಿಲ್ಲ. ಎಲ್ಲರಿಗೂ ಆಶ್ಚರ್ಯ. "ಹೆತ್ತ ಕರುಳು ಸತ್ತಾಗಲೂ ಅಳುವುದಿಲ್ಲವೆಂದರೆ ಆಕೆ ಎಷ್ಟು ಕಠಿಣ ಹೃದಯದವಳಿರಬೇಕು. ಆಕೆ ಎಂಥ ತಾಯಿ?" - ಎಂದೆಲ್ಲ ಮಾತನಾಡಿಕೊಂಡರು. ಯುದ್ಧ ನಡೆಯುತ್ತಲೇ ಇತ್ತು. ಆ ತಾಯಿ ತನ್ನ ಎರಡನೆಯ ಮಗನನ್ನು ಯುದ್ಧಕ್ಕೆ ಕಳುಹಿಸುತ್ತಾಳೆ. ದುರಾದೃಷ್ಟ, ಆತನೂ ಸತ್ತ ಸುದ್ದಿ ಬರುತ್ತದೆ. ಆಗಲೂ ಊರಿನ ಜನರೆಲ್ಲ ದುಃಖ ಪಡುತ್ತಾರೆ. ಏನಿದ್ದರೂ ಆ ತಾಯಿ ಮಾತ್ರ ಅಳಲಿಲ್ಲ. ಜನರಿಗೆ ಅವಳ ಬಗೆಗೆ ಅಸಹ್ಯವೆನಿಸಿತು. ಇನ್ನು ಉಳಿದಿದ್ದ ಮೂರನೆಯ ಮಗನನ್ನೂ ಆ ತಾಯಿ ಯುದ್ಧಕ್ಕೆ ಕಳುಹಿಸುತ್ತಾಳೆ. ಅವನೂ ಸತ್ತನೆಂಬ ಸುದ್ದಿ ಬರುತ್ತದೆ. ತಾಯಿಯ ಬಗೆಗೆ ಬೇಸರವಿದ್ದರೂ ಊರಿನ ಜನ ಸಹಜವಾಗಿ ದುಃಖಿಸುತ್ತಾರೆ. ಆಗ ಆ ತಾಯಿಯೂ ಅಳುತ್ತಾಳೆ. ಯಾರೋ ಕೇಳಿದರಂತೆ: "ಇದೇನಿದು, ನಿನ್ನ ಮೊದಲ ಇಬ್ಬರು ಮಕ್ಕಳು ಸತ್ತಾಗ ನಾವೆಲ್ಲ ಕಣ್ಣೀರು ಕರೆದರೂ, ನೀನು ಅತ್ತಿರಲಿಲ್ಲ, ಈ ಕೊನೆಯ ಮಗ ಸತ್ತಾಗ ಮಾತ್ರ ಅಳುತ್ತಿರುವೆಯಲ್ಲ" ಎಂದು. ಅದಕ್ಕೆ ಆ ತಾಯಿ ಹೇಳುತ್ತಾಳೆ: "ನಾನು ಈಗ ಅಳುತ್ತಿರುವುದು ಸತ್ತ ಕೊನೆಯ ಮಗನಿಗಾಗಿ ಅಲ್ಲ. ಯುದ್ಧಕ್ಕೆ ಕಳುಹಿಸಲು ಇನ್ನೊಬ್ಬ ಮಗ ಇಲ್ಲವಲ್ಲಾ" ಎಂದು ಹೇಳಿದಳಂತೆ! ಎಂತಹ ದೇಶಪ್ರೇಮ! ಇದಕ್ಕಿಂತ ಮಿಗಿಲಾದದ್ದು ನಮ್ಮ ಸುತ್ತೂರು ಹೋರಾಟದಲ್ಲಿ ತನ್ನ ಎಂಟು ಮಕ್ಕಳನ್ನು ಕಳೆದುಕೊಂಡ ತಾಯಿಯ ತ್ಯಾಗ ಎನ್ನಬಹುದು.

ಏನೇ ಇರಲಿ, ಪರಂಪರೆಯ ಸುತ್ತೂರಿನ ಮೇಲೆ ನಡೆದ ದಾಳಿಯ ಆಘಾತದಿಂದಾಗಿ ಸಂಪೂರ್ಣ ನಷ್ಟಕ್ಕೊಳಗಾಗಿದ್ದ ಶ್ರೀಮಠದ ಪುನರುದ್ಧಾರ ಕಾರ್ಯ ನಡೆದದ್ದು 22ನೆಯ ಜಗದ್ಗುರು ಮಂತ್ರಮಹರ್ಷಿ ಶ್ರೀ ಪಟ್ಟದ ಶಿವರಾತ್ರೀಶ್ವರರಿಂದ. 1902ರಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಶಿವರಾತ್ರೀಶ್ವರರು ಶಿಥಿಲಗೊಂಡ ದೇವಾಲಯಗಳು ಮತ್ತು ಶ್ರೀಮಠದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡರು. ಎಲ್ಲೆಲ್ಲೋ ಹರಡಿ ಬಿದ್ದುಹೋಗಿದ್ದ ಮಠದ ಕಾಗದಪತ್ರಗಳು, ಸನ್ನದುಗಳು, ಓಲೆಗರಿಗಳನ್ನೆಲ್ಲ ಸಂಗ್ರಹಿಸಿದರು. ತುಂಡುತುಂಡಾಗಿ ಹೊಲಗದ್ದೆಗಳಲ್ಲಿ ಚೆಲ್ಲಿಹೋಗಿದ್ದ ಹಲವಾರು ದೇವಾಲಯಗಳ ವಿಗ್ರಹಗಳನ್ನೆಲ್ಲ ಮಠಕ್ಕೆ ತರಿಸಿದರು. ಪೂಜ್ಯರು ಆ ಕಾರ್ಯದಲ್ಲಿ ಎಷ್ಟು ತತ್ಪರರಾಗಿದ್ದರು ಎನ್ನುವುದನ್ನು ಶ್ರೀ ವೀರಭದ್ರ ಅವರು "ಶ್ರೀಗಳು ನಿಶ್ಚಲರಾಗಿ ಹಗಲೆಲ್ಲಾ ಏಕಾಗ್ರಚಿತ್ತದಿಂದ ಕಡತಗಳನ್ನು

ಪರಿಶೀಲಿಸುತ್ತಿದ್ದುದನ್ನು ಮುಗ್ಧತೆಗೆ ಮುಖಮಾಡಿದಂತೆ, ಕುತೂಹಲವೇ ಕಣ್ಣುಬಿಟ್ಟಂತೆ, ವಿನಯವೇ ಮೂರ್ತಿಗೊಂಡಂತೆ, ಭಕ್ತಿಯೇ ಬಾಗಿ ನಿಂದಂತೆ ಎಳೆ ವಯಸ್ಸಿನ ಮನೋಹರ ಮಂಗಳ ಮೂರ್ತಿ ಶ್ರೀಗಳ ಬೆನ್ನಹಿಂದೆ ಕಂಬದ ಮರೆಯಲ್ಲಿ ತನ್ನನ್ನು ಮರೆಯಾಗಿಸಿಕೊಂಡು ಗುರುಗಳ ತಲ್ಲೀನತೆಯಲ್ಲಿ ತಾನೂ ತಲ್ಲೀನವಾದ ಹಸಿವು-ದಾಹ ಮರೆತು" ಎಂದಿದ್ದಾರೆ. ಹಿರಿಯ ಗುರುಗಳ ಈ ಕಾರ್ಯತಲ್ಲೀನತೆ ಶ್ರೀ ರಾಜೇಂದ್ರ ಸ್ವಾಮೀಜಿ ಅವರಿಗೆ ಬಾಲ್ಯದಲ್ಲೇ ಮೈಗೂಡಿಕೊಂಡಿತೆಂದು ಹೇಳಬಹುದು.

ನಾನು ಈ ಸಂದರ್ಭದಲ್ಲಿ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಜಗದ್ಗುರುಗಳ ಇಡೀ ಜೀವನ ಪರಿಚಯವನ್ನೇನೂ ಮಾಡಹೋಗುವುದಿಲ್ಲ. ಪ್ರತಿ ಜಯಂತಿಯ ಸಂದರ್ಭದಲ್ಲೂ ಅದು ನಿಮಗೆ ಪರಿಚಯವಾಗಿರುತ್ತದೆ. ಆದರೂ ಅವರ ಜೀವನದ ಒಂದೆರಡು ಹೃದಯಸ್ಪರ್ಶಿ ಸಂದರ್ಭಗಳನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಒಂದು ಅವರು 5 ವರ್ಷದ ಬಾಲಕನಾಗಿದ್ದಾಗ ನಡೆದ ಘಟನೆ. ಒಂದು ದಿನ ಅವರ ಮನೆಯ ಮುಂದೆ ಭಿಕ್ಷುಕನೊಬ್ಬ 'ಕವಳಾ ತಾಯಿ' ಎಂದು ಕೂಗುತ್ತಾನೆ. ಏನೋ ಕೆಲಸದಲ್ಲಿ ತೊಡಗಿದ್ದ ತಾಯಿ ಅತ್ತ ಗಮನ ಕೊಡಲಾಗಿರಲಿಲ್ಲ. ಆದರೆ ಭಿಕ್ಷುಕನ ಕೂಗಿನ ಸದ್ದು ಕೇಳಿದ ಕೂಡಲೇ ಬಾಲಕ ರಾಜೇಂದ್ರ ಬಾಗಿಲಿಗೆ ಬಂದು 'ಇರಪ್ಪ ತರ್ತೀನಿ' ಎಂದು ಹೇಳಿ, ಒಳಗೆ ಹೋಗಿ ಒಂದು ಸೇರು ತುಂಬ ರಾಗಿಯನ್ನು ತೆಗೆದುಕೊಂಡು ಬಂದು ಭಿಕ್ಷುಕನ ಜೋಳಿಗೆಗೆ ಹಾಕುತ್ತಾನೆ. ಅದನ್ನು ನೋಡಿದ ತಾಯಿ "ಏನು ಹೀಗೆ ಸೇರುಗಟ್ಟಲೆ ಕೊಟ್ಟರೆ ಹೇಗಪ್ಪ? ಎಲ್ಲ ಮುಗಿದ ಮೇಲೆ ಏನ್ ಮಾಡ್ತೀಯಾ" ಎಂದು ಕೇಳುತ್ತಾರೆ. ಅದಕ್ಕೆ ಬಾಲಕ ರಾಜೇಂದ್ರ "ಶಿವರಾತ್ರೀಶ್ವರರ ಮನೆಯಿಂದ ತಂದುಕೊಡ್ತೀನಿ" ಎಂದ. 'ಅವರಲ್ಲೂ ಇಲ್ಲಾಂದ್ರೆ' ಎಂಬ ತಾಯಿಯ ಮಾತಿಗೆ "ಇರೋರ್ ಮನೇಲಿ ಕೇಳಿ ತರ್ತೀನಿ" ಎಂದ. 'ಅವರೂ ಕೊಡದಿದ್ರೆ' ಎಂದ ಮಾತಿಗೆ ಅಲ್ಲೇ ಇದ್ದ ಬಸವಯ್ಯನವರು "ಅವನ ಮುಖ ನೋಡಿದರೆ ಯಾರು ಇಲ್ಲಾ ಅಂತಾರೆ" ಎಂದರಂತೆ! ಅವರ ಮಾತು ಶ್ರೀಗಳ ಜೀವನದುದ್ದಕ್ಕೂ ನಡೆದಿದೆ.

ಇನ್ನೊಂದು ಸಂದರ್ಭ. ರಾಜೇಂದ್ರರಿಗೆ 5 ವರ್ಷವಾದ ಕೂಡಲೇ ಶ್ರೀ ಸುತ್ತೂರು ಮಠಕ್ಕೆ ಅರ್ಪಿಸಲು ಹೆತ್ತವರು ಶ್ರೀ ಪೂಜ್ಯ ಶಿವರಾತ್ರೀಶ್ವರರಿಗೆ ಮಾತುಕೊಟ್ಟಿದ್ದರು. ಈಗ 5 ವರ್ಷಗಳಾಗಿದ್ದವು. ಆಗ ಒಂದು ದಿನ ಅಜ್ಜಿ ಮಲ್ಲಾಜಮ್ಮ ಅವರನ್ನು ಕುರಿತು "ಇನ್ಮೇಲೆ ನೀನು ಬುದ್ಯೋರತ್ರ ಇರಬೇಕು. ಇರ್ತೀಯಾ?" ಎಂದು ಕೇಳಿದರು. 'ಇರ್ತೀನಿ' ಎಂದರು. "ಹಗಲೂ ರಾತ್ರಿ ಇರಬೇಕು". 'ಆಗಲಿ ಅಜ್ಜಿ' ಎಂಬ ಉತ್ತರ. 'ನಮ್ಮನ್ನೆಲ್ಲಾ ಬಿಟ್ಟು ಅಲ್ಲಿರ್ತೀಯಾ?' ಅದಕ್ಕೆ "ಹತ್ತಿರದಲ್ಲೇ ಇದೆಯಲ್ಲ ಅಜ್ಜಿ-ಮಠ. ರಾಜೇಂದ್ರ ಅಂದ್ರೆ ಓಡಿ ಬರ್ತೀನಿ" ಎಂದರು. 'ಕರೀದಿದ್ರೆ ಬರಲ್ವಾ?' ಎಂದು ಕೇಳಿದ್ದಕ್ಕೆ "ಬುದ್ಯೋರ್ನ ಕೇಳಿಕೊಂಡು ಬರ್ತೀನಿ" ಎಂದರು. 'ಬುದ್ಯೋರು ಬ್ಯಾಡಾ ಅಂದ್ರೆ' ಎಂದರು ಅಜ್ಜಿ. ಅದಕ್ಕೆ ಈ ಮಗು

ಹೇಳುತ್ತದೆ: "ನೀವೇ ಬಂದ್ಬಿಡಿ ಅಜ್ಜಿ". "ನಾವು ಬರೋದು ಬ್ಯಾಡಾ ಅಂತ ಗುರುಗಳು ಹೇಳಿದ್ರೆ" ಮತ್ತೆ ಅಜ್ಜಿಯ ಪ್ರಶ್ನೆ. "ನಾನು ಅಲ್ಲಿಂದಲೇ ಅಜ್ಜಿ ಅಂತ ಮಾತಾಡಿಸ್ತೀನಿ" ಎಂದರು. "ಅದನ್ನೂ ಬ್ಯಾಡ ಅಂದ್ರೆ" ಎಂದಾಗ, "ಮನಸ್ಸಿನಲ್ಲೇ ಮಾತಾಡಿಸ್ತೀನಿ" ಎಂದಿತು ಆ ಮಾಗಿದ ಮನಸ್ಸು!

ಪೂಜ್ಯರ ಬಾಲ್ಯದ ಈ ಎರಡು ಸಂದರ್ಭಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವರ ಭವಿಷ್ಯದ ಬೆಳವಣಿಗೆಯ ಸುಳಿವನ್ನೆಲ್ಲಾ ಕಾಣಬಹುದು. ಇನ್ನು ಅವರು ಪೀಠಾಧಿಕಾರ ಪಡೆದ ನಂತರದ ಸಂಗತಿಗಳು ನೂರಾರಿವೆ. ಉನ್ನತ ಶಿಕ್ಷಣ ಪಡೆಯಬೇಕೆಂಬ ಮಹದಾಸೆಯಿಂದ ಹಿರಿಯ ಗುರುಗಳಿಗೆ ಹೇಳದೆ ಕಾಶಿಗೆ ಹೋದುದು, ಬೆಂಗಳೂರಿನ ಬೇಲಿಮಠದ ಸಂಪರ್ಕ, ಕಾಶಿಯಲ್ಲಿದ್ದ ಮಹಾದಾರ್ಶನಿಕ, ಸಂಸ್ಕೃತಪಾಂಡಿತ್ಯದ ಮೇರು, ಅಧ್ಯಾತ್ಮ ಜ್ಞಾನಿ ಶ್ರೀ ಗೌರೀಶಂಕರರ ದರ್ಶನ, ಕ್ಷೇತ್ರದಲ್ಲಿ ನಡೆಸಬೇಕಾಗಿದ್ದ ಅಕ್ಷರಕ್ರಾಂತಿ, ದಾಸೋಹ ಕ್ರಾಂತಿ ಮತ್ತು ಶರಣಕ್ರಾಂತಿಗಳ ಬಗೆಗೆ ಮನವರಿಕೆ, ಹಿರಿಯ ಗುರುಗಳು ಕಿರಿಯ ಗುರುಗಳನ್ನು ಹುಡುಕಿಕೊಂಡು ಕಾಶಿಗೇ ಹೋದದ್ದು, ಗೌರೀಶಂಕರ ಸ್ವಾಮಿಗಳಿಗೆ ಹೇಳಿ ಶ್ರೀ ರಾಜೇಂದ್ರ ಸ್ವಾಮಿಗಳನ್ನು ಹಿಂದಕ್ಕೆ ಕರೆತಂದದ್ದು, ಪೂಜ್ಯರು ಲೋಕಸೇವೆಯ ಮಣಿಹದಲ್ಲಿ ತೊಡಗಿದ್ದು, ಮೊದಲ ಹೆಜ್ಜೆಯಾಗಿ ವಿದ್ಯಾರ್ಥಿನಿಲಯ ಸ್ಥಾಪಿಸಿದ್ದು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಸಾಲ ಮಾಡಿ, ಕೊರಳ ಬಂಗಾರದ ಕರಡಿಗೆ ಮಾರಿ ಮಕ್ಕಳಿಗೆ ಪ್ರಸಾದ ವ್ಯವಸ್ಥೆ ಮಾಡಿಸುತ್ತಿದ್ದುದು, ಕೆಲವರು ಅವರ ಕಷ್ಟ ನೋಡಿ, ಕಳವಳ ವ್ಯಕ್ತಪಡಿಸಿ "ನೀವು ಹೀಗೆ ಸಾಲ ಮಾಡುತ್ತಾ ಹೋದರೆ ಹೇಗೆ" ಎಂದು ಕೇಳಿದಾಗ, "ಸಾಲ ಕೊಡಿಸಿದ ಗುರುವಿಗೆ ಅದನ್ನು ತೀರಿಸುವ ಕ್ರಮವೂ ತಿಳಿದಿದೆ. ನೀವು ಕಳವಳ ಪಡಬೇಡಿ" ಎಂದು ಹೇಳುತ್ತಿದ್ದುದು, "ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಮೆ ಮಾಡಿ" ಎಂದಾಗ, "ನೀವೆಲ್ಲ ವಿದ್ಯಾವಂತರು. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದೀರಿ. ಆದರೆ ಹಳ್ಳಿಯ ಬಡಮಕ್ಕಳ ಗತಿಯೇನು? ಇಲ್ಲಿ ಬೆಳಗಿದ ದೀಪ ಮತ್ತೊಂದು ದೀಪವನ್ನು ಬೆಳಗುವುದೆಂಬ ವಿಶ್ವಾಸ ನಮಗಿದೆ" ಎನ್ನುತ್ತಿದ್ದುದು, ಮೈಸೂರು ಮಹಾರಾಜರ ಸಂಪರ್ಕ ಬಂದದ್ದು, ವಿದ್ಯಾರ್ಥಿನಿಲಯ ಮತ್ತು ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಿಸಿದ್ದು, ಅವರ ದಣಿವರಿಯದ ಸೇವೆಗೆ ಅರಮನೆಯಿಂದ 'ರಾಜಗುರುತಿಲಕ' ಎಂಬ ಬಿರುದು ಬಂದಿದ್ದು, ದೂರದೃಷ್ಟಿ ಇಟ್ಟುಕೊಂಡು ಜೆಎಸ್ಎಸ್ ಮಹಾವಿದ್ಯಾಪೀಠ ಸ್ಥಾಪಿಸಿದ್ದು, ವಿದೇಶ ಪ್ರವಾಸ ಮಾಡಿ ಬಂದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ್ದು, ಜೀವನವಿಡೀ ದೈಹಿಕ ಮತ್ತು ಮಾನಸಿಕ ದುಡಿಮೆಯಿಂದ ಬಳಲಿ ಅಸ್ವಸ್ಥರಾದದ್ದು, ಅಂತಿಮವಾಗಿ ಅನಂತದಲ್ಲಿ ಐಕ್ಯವಾದದ್ದು - ಹೀಗೆ ಅವರ ಬದುಕಿನ ಘಟನೆಗಳನ್ನೆಲ್ಲ ಸಂಗ್ರಹವಾಗಿ ಹೇಳಬಹುದು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಇಷ್ಟೆಲ್ಲ ಸಾಧನೆ ಮಾಡಿದ್ದರೂ, ಅವರ ಇನ್ನೊಂದು ಅನನ್ಯ ಮತ್ತು ಅದ್ಭುತವೆನಿಸುವ ಕೊಡುಗೆಯಿಂದರೆ, ಅವರ ಉತ್ತರಾಧಿಕಾರಿಗಳ ಆಯ್ಕೆ. ಎಷ್ಟೋ ಮಠಗಳು ಸಮರ್ಥ ಉತ್ತರಾಧಿಕಾರಿಗಳಿಲ್ಲದೆ ನಾಮಾವಶೇಷವಾಗಿರುವುದುಂಟು. ಆದರೆ ಶ್ರೀ ರಾಜೇಂದ್ರ ಗುರುಗಳು ಪ್ರತಿಭಾವಂತರಾದ ಶ್ರೀ ಶಿವರಾತ್ರಿ ದೇಶಿಕೇಂದ್ರರನ್ನು ಶ್ರೀಮಠದ ಉತ್ತರಾಧಿಕಾರಿಗಳನ್ನಾಗಿ ಮಾಡಿ, ಅವರಿಗೆ ಅಗತ್ಯವಾದ ಎಲ್ಲ ರೀತಿಯ ಶಿಕ್ಷಣ ಮತ್ತು ಅಡಳಿತದ ಅನುಭವಗಳನ್ನು ಧಾರೆ ಎರೆದು ಅತ್ಯಂತ ಸಮರ್ಥರನ್ನಾಗಿ ಮಾಡಿ ಹೋಗಿರುವುದು. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಅಧಿಕಾರ ಸ್ವೀಕರಿಸಿದ ಮೇಲೆ ನಡೆದಿರುವ ಅಭಿವೃದ್ಧಿ ಕಾರ್ಯಗಳು ಯಾರಿಗಾದರೂ ಸೋಜಿಗವುಂಟುಮಾಡುತ್ತವೆ. ಪೂಜ್ಯರು ಇಂದು ಭಾರತದ ಧರ್ಮಗುರುಗಳ ಪ್ರಥಮ ಪಂಕ್ತಿಯಲ್ಲಿದ್ದಾರೆಂಬುದು ನಮ್ಮ ಅಭಿಮಾನ.

ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮಹಾ ಧೈರ್ಯವಂತರು; ಅವರಲ್ಲಿ ಕ್ರೌರ್ಯವಿರಲಿಲ್ಲ. ಅವರು ವಿನಯವಂತರು, ಅವರಲ್ಲಿ ವಂಚನೆ ಇರಲಿಲ್ಲ. ಅವರು ಅಭಿಮಾನಿಗಳು; ಅವರಲ್ಲಿ ಅಹಂಕಾರವಿರಲಿಲ್ಲ. ಅವರದು ಮೃದು ಸ್ವಭಾವ, ಆದರೆ ದೌರ್ಬಲ್ಯವಿರಲಿಲ್ಲ. ಅವರು ಸ್ಥಾವರವಲ್ಲ; ಜಂಗಮರು! ಪ್ರಾಮಾಣಿಕತೆ, ನಿಷ್ಠೆ, ಅನುಕಂಪ, ಸಜ್ಜನಿಕೆ ಮತ್ತು ಬದ್ಧತೆಗಳ ಮೊತ್ತವಾಗಿದ್ದರು.

ಪೂಜ್ಯರು ಬಸವಣ್ಣನ ಭಕ್ತಿಗೆ ಬೆರಗಾದವರು. ಅಕ್ಕಮಹಾದೇವಿಯ ವೈರಾಗ್ಯಕ್ಕೆ ಮಂತ್ರಮುಗ್ಧರಾದವರು. ಪ್ರಭುವಿನ ಆತ್ಮಜ್ಞಾನಕ್ಕೆ ನಮೋ ಎಂದವರು. ಹಾಗೆಯೇ, ಸಮಾಜದ ದುಃಸ್ಥಿತಿಗೆ ಮಮ್ಮಲ ಮರುಗಿದವರು. ಸಮುದಾಯ ಜಾಗೃತಿಗೆ ದನಿ ನೀಡಿದವರು. ಮಣ್ಣಾಗಿದ್ದವರನ್ನು ಮಡಕೆ ಮಾಡಿದವರು. ಕಲ್ಲಾಗಿದ್ದವರನ್ನು ಕಟೆದು ಮೂರ್ತಿ ಮಾಡಿದವರು. ಬೀಜವಾಗಿದ್ದವರನ್ನು ಬಿತ್ತಿ ಬೆಳೆದವರು. ಕಸವಾಗಿದ್ದವರನ್ನು ರಸವನ್ನಾಗಿ ಮಾಡಿದವರು. ಈ ಕಾರಣದಿಂದಲೇ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನಾವು ಮತ್ತೆ ಮತ್ತೆ ಸ್ಮರಿಸಬೇಕು.

ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)

□

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಕಂ॥ ಮುನಿಕೋಟಿ ಮುಗಿದ ಕೈಗಳಿ ।
ನನುನಯದಿಂ ಪೊಗಳಿ ಜಯಜಯ ಧ್ವನಿಯಂ ಪಾ ।
ವನಪದದಿಂ ಮೆಟ್ಟಿದನೊ ।
ಯ್ಯನೆ ಗಿರೀಶಂ ವಿಧಿನಿಷೇಧಮಯ ಪಾದುಕೆಯಂ ॥ ೨೦ ॥

ಟೀಕೆ ॥ ಮುನಿಕೋಟಿ – ಜ್ಞಾನಾಧಿಕರಾದವರ ಸಂಘವು, ಮುಗಿದ – ಅಂಜಲಿಬದ್ಧವಾದ, ಕೈಗಳಿಂ – ಕೈಗಳಿಂದಲೂ, ಅನುನಯದಿಂ – ನಮ್ರಭಾವದಿಂದಲೂ, ಜಯಜಯಯೆಂಬ ಧ್ವನಿಯಿಂದಲೂ, ಪೊಗಳಿ – ಕೊಂಡಾಡುತ್ತಿರಲಾಗಿ, ಗಿರೀಶಂ – ಶಿವನು (ಪರ್ವತದಲ್ಲಿ ಮಲಗಿರುವವನು), ವಿಧಿನಿಷೇಧಮಯಪಾದುಕೆಯಂ – ವಿಧಿ ಹೀಗೆಯೇ ಮಾಡಬೇಕೆಂಬುವ ನಿಯಮ, ನಿಷೇಧ – ಹೀಗೆ ಮಾಡಕೂಡದೆಂಬ ನಿಯಮ ಇವೆರಡೂ ಎರಡು ಹಾವುಗೆಗಳಾಗಿ ಪರಿಣಮಿಸಿ ತೋರುತ್ತಿದ್ದವಾಗಿ, ಅಂತಾ ಪಾದುಕೆಯಂ – ಪಾದರಕ್ಷೆಯನ್ನು (ಮಯಟ್ತ್ರತ್ಯಯವು ವಿಕಾರಾರ್ಥಕವಾಗಿದೆ), ಪಾವನಪದದಿಂ – ಲೋಕವಂ ಶುದ್ಧಿಗೊಳಿಸುವ ಪಾದದಿಂದ, ಒಯ್ಯನೆ – ಮೆಲ್ಲಗೆ, ಮೆಟ್ಟಿದಂ – ತುಳಿದನು.

ವಿಷ್ಣು ಬ್ರಹ್ಮೇಂದ್ರಾದಿ ಸಕಲ ಚೇತನಕೋಟಿಗಳೂ ವೇದಲೋಕಸಿದ್ಧಂಗಳಾದ ವಿಧಿನಿಷೇಧಂಗಳಿಗೆ ಬದ್ಧರಾಗಿರುವರು. ಅಂತಾ ವಿಧಿನಿಷೇಧಂಗಳನ್ನು ಲೋಕಾತೀತನಾದ ಶಿವನು ಕೆರಗಳಂ ಮೆಟ್ಟಿದಂತೆ ತಿರಸ್ಕರಿಸಿ ಸ್ವತಂತ್ರನಾಗಿರುವನು. ಅಂತಾ ಶಿವಮಹಿಮೆಯನ್ನು ಮುನಿಕೋಟಿಗಳು ಕೊಂಡಾಡುತ್ತಿರುವವು. ಈ ಶಿವಸ್ವಭಾವವನ್ನು ಈ ಶಬರಲೀಲೆಯಲ್ಲಿ ಕಂಡರು.

ಚಂ॥ ಮೊಳಗಿದುದಭ್ರದೋಳ್ದಿವಿಜಭೇರಿಯ ಭೂರಿಗಭೀರರಾವಮು ।
ಳಸಿತ ಶಂಖನಾದದೊಡನಾನಕ ಘೋಷಣಮುಣ್ಮಿದತ್ತು ಮಂ ॥
ಗಳರವದಿಂದೆ ಪೊಂಬರಿಯಣಂಗಳೊಳಾರತಿಯೆತ್ತಿ ಪಾಡಿದ ।
ರ್ವಿಳಸಿತಭಾರ್ಗವೀ ವಿಧಿವಧೂರತಿಮುಖ್ಯನಿಳಿಂಪಕಾಂತೆಯರ್ ॥ ೨೨ ॥

ಟೀಕೆ ॥ ಅಭ್ರದೋಳ್ – ಮೇಘಮಾರ್ಗದೋಳ್, ದಿವಿಜಭೇರಿಯು – ದೇವದುಂದುಭಿಯ, ಭೂರಿ – ಬಹುವಾದ, ಗಭೀರ – ಗಂಭೀರವಾದ, ರಾವಂ –

ಧ್ವನಿಯು, ಮೊಳಗಿದುದು – ಸಪ್ಪಳಾಯ್ತು, ಉಜ್ವಲ – ಪ್ರಕಾಶಿಸುವ, ಸಿತಶಂಖನಾದದೊಡನೆ – ಧವಳ ಶಂಖಧ್ವನಿಯ ಕೂಡೆ, ಆನಘ ಘೋಷಣಂ – ತಮಟೆಯ ಧ್ವನಿಯು, ಉಣ್ಮಿದತ್ತು – ಹೊರಟಿತು, ವಿಳಸಿತ – ವಿಳಸಗೊಂಡು, ಭಾರ್ಗವಿ – ಭೃಗುಪುತ್ರಿಯಾದ ಲಕ್ಷ್ಮಿ, ವಿಧಿವಧು – ಬ್ರಹ್ಮನ ಸತಿಯಾದ ಸರಸ್ವತಿ, ರತಿ – ಮನ್ಮಥನ ಪತ್ನಿ, ಮುಖ್ಯ – ಮೊದಲಾದ, ನಿಳಿಂಪಕಾಂತೆಯರ್ – ದೇವಸ್ತ್ರೀಯರು, ಮಂಗಳರವದಿಂದೆ – ಮಂಗಳದ ಹಾಡುಗಳಿಂದ, ಅಥವಾ ಶುಭಸ್ವರದಿಂದ, ಪೊಂಬರಿಯಣಂಗಳೊಳು – ಚಿನ್ನದ ಹರಿವಾಣಗಳಲ್ಲಿ, ಆರತಿಯೆತ್ತಿ– ನೀರಾಜನವಂಗೈದು, ಪಾಡಿದರ್ – ಹಾಡಿದರು. ಉದಾತ್ತಾಲಂಕಾರವು ॥ ೨೨ ॥

ಮ॥ ಮಿಡಿವಿಲ್ಮೀಂಟಿ ತುಪಾಕಮೀಟಿ ಪದವಿಲ್ಕೂರಂಬುಜೆಂಗಳ್ತಿಕೈ।
ಪೊಡೆಗಾಳಂ ತಿರುಗೂಳಿಬೀಸುವಲೆ ಬೆಳ್ಕಾರಂನೊಡರ್ಮಡ್ಡಿಕ ॥
ರ್ಪಡ ಮಂಕಡ್ಡಣಮುಲ್ಬಣಂ ಕವಣೆನಾರಾಚಂಕದಲ್ಗಂಣಿಪೇ।
ರಡಿಖಡ್ಗಂ ಬಡಿಕೋಲ್ಗಳೊಪ್ಪಿ ಜವದಿಂದೇಳ್ತಂದರಾಧೀವರರ್ ॥ ೨೩ ॥

ಟೀಕೆ ॥ ಮಿಡಿವಿಲ್ – ಬೆರಳಿನಿಂದ ಹೊಡೆಯುವ ಬಿಲ್ಲು ಅಥವಾ ಮಣ್ಣಿನುಂಡೆಗಳಂ ಬಿಲ್ಲಿನಂತೆ ಬಿದುರಂ ಬಗ್ಗಿಸಿ ಹೊಡೆಯುವ ಆಯುಧಗಳಂ, ಮೀಂಟಿ – ಮೀಟುವ ಸನ್ನೆ, ತುಪಾಕಂ – ಕೊಳವಿಬಾಣ ಅಥವಾ ಮದ್ದಿನಲಳೀಗೆ, ಈಟಿ – ತಿವಿಯುವ ಕೋಲು, ಪದವಿಲ್ – ಕೈಬಿಲ್ಲು, ಕೂರಂಬು – ಮೊನೆಸರಳು, ಬೆಳ್ತಿ – ಬೆನ್ನಿನ ಕತ್ತಿ, ಕೈವೊಡೆ – ಕೈಮಚ್ಚು ಅಥವಾ ಸರಳಗಿರಿ, ಗಾಳಂ – ಗಂಟಳ ಮುಳ್ಳು, ತಿರಗೂಳಿ – ಸಣ್ಣ ವನಿಕೆ, ಬೀಸುವಲೆ – ಬೀಸುವ ಬಲೆ, ಬೆಳ್ಕಾರಂ – ಮೋಸಗೊಳಿಸುವ ಮೀಲು ಅಥವಾ ದೊಡ್ಡ ಬಲೆ, ಸೊಡರ್ – ಭ್ರಾಂತಿಯನ್ನುಂಟುಮಾಡುವ ದೀವಿಗೆ, ಕರ್ಪಡಂ – ಕಪ್ಪುರ ತೆರೆ, ಮಂಕಡ್ಡಣಂ – ಮಂಕುಬೂದಿ ಅಥವಾ ತಡೆಕಟ್ಟು, ಉಲ್ಬಣಂ – ರೇಗಿಸುವ ವಾದ್ಯ, ಕವಣೆ – ಕಲ್ಲುಕಣ್ಣಿ, ನಾರಾಚಂ – ಸಲಾಕಿ, ಕವಲ್ಗಣ್ಣಿ– ಕಣ್ಣಿಚಿಕ್ಕವೇರಡಿ, ದೊಡ್ಡ ದೊಣ್ಣೆ, ಖಡ್ಗ – ಕತ್ತಿ, ಬಡಿಕೋಲ್ಗಲೋಳ್ – ಬಡಿಯುವ ಕೋಲುಗಳು, ಒಪ್ಪೆ – ಶೋಭಿಸಲು, ಆ ಧೀವರರ್ – ಆ ಬಿಯದರು, ಜವದಿಂದ – ಬೇಗನೆ, ಏಳ್ತಂದರ್ – ಬಂದರು ॥೨೩॥

ಕ ॥ ಇಡುವಲೆ ಸಿಡುವಲೆ ಕಿರುವಲೆ।
ನಡೆವಲೆ ಪೇರ್ವಲೆ ತೊಡಂಕುವಲೆ ಕೋಲ್ವಲೆ ಕ ॥
ಕ್ಕಡವಲೆ ನಿಡುವಲೆ ಸಾಲ್ಬಲ್।
ಬಿಡುವಲೆಗಳೆನಿಪ್ಪವೆಸೆದವಾ ಬೇಂಟಿಗರೋಳ್ ॥ ೨೪ ॥

ಟೀಕೆ ॥ ಇಡುವಲೆ – ಇಡುವ ಬಲೆ, ಸಿಡುವಲೆ – ಸಿಡಿಯುವ ಬಲೆ, ಕಿರುಬಲೆ ಸಣ್ಣ ಬಲೆ, ನಡೆವಲೆ – ನಡೆಯುತ್ತಾ ಹಾಕುವ ಬಲೆ, ಪೇರ್ವಲೆ – ಉದ್ದವಾದ ಬಲೆ, ತೊಡಂಕುವಲೆ – ಸಿಕ್ಕಿಸಿ ಜೀರುವ ಬಲೆ, ಕೋಲ್ವಲೆ – ಕೋಲುಗಳಂ ಹೂಡಿ ಕಟ್ಟುವ

ಬಲೆ, ಜೋಡಿಸುವ ಬಲೆ, ನಿಡುವಲೆ – ದಾರಿಯನ್ನು ಬಿಟ್ಟು ಸಿಕ್ಕಿಸಿಕೊಳ್ಳುವ ಬಲೆ, ಎನಿಪ್ಪ – ಎನಿಸಿಕೊಳ್ಳುವ, ಆ ಬೇಟಿಗರೋಳ್ – ಆ ಬೇಟೆಗಾರರಲ್ಲಿ ಎಸೆದವು ॥ ೨೪ ॥

ವ ॥ ಮತ್ತು ಇದಲ್ಲದೆ –

ಮ ॥ ಪ್ರಣವಂ ಶಂಖಿಲೆ ಸಾರಮೇಯಮಮರ್ದಾಮ್ನಾಯಂ ಪುರಾಣವ್ರಜಂ ।
ಚಣಸೂತ್ರಂ ಸ್ಮೃತಿಜಂತ್ರಮಾಗಮಮೆ ಬೆಳ್ಕಾರಂ ಮಹಾದೀಕ್ಷೆ ಕೂ ॥
ರ್ಗಣೆತರ್ಕಂ ಬಡಿಕೋಲ್ಸಮಾಧಿ ಸಬಳಂ ಕೂರಿಟ್ಟ ಯೋಗಂ ಸಲ ।
ಕ್ಷಣಮಂತ್ರಂ ಧನುಜಾನಮೇ ಕವಣೆ ನಾರಾಚಂ ತಪೋವಿಸ್ತರಂ ॥

ಟೀಕೆ ॥ ಪ್ರಣವಂ – ಓಂಕಾರವೆ, ಶೃಂಖಿಲೆ – ಸಂಕೋಲೆಯ ಸರಪಳಿ, ಅಮರ್ದ ಆಮ್ನಾ ಯಂ – ಸಿದ್ಧವಾಗಿರುವ ವೇದವೇ, ಸಾರಮೇಯಂ – ನಾಯಿ, ಪುರಾಣವ್ರಜಂ – ಪುರಾಣಗಳ ಗುಂಪು, ಚಣಸೂತ್ರಂ – ಮಿಣಿ, ಸ್ಮೃತಿ – ಮನ್ವಾದಿ ಸ್ಮೃತಿಯೆ, ಜಂತ್ರಂ – ಬೋನು, ಆಗಮಮೇ – ಕಾಮಿಕಾದ್ಯಾಗಮವೆ, ಬೆಳ್ಕಾರಂ – ದೊಡ್ಡ ಬಲೆ, ಮಹಾದೀಕ್ಷೆ ಲಿಂಗದೀಕ್ಷೆಯೆ, ಕೂರ್ಗಣೆ – ಹರಿತವಾದ ಸರಳು, ತರ್ಕಂ – ತರ್ಕಶಾಸ್ತ್ರವೆ, ಬಡಿಕೋಲ್ – ಬಡಿಯುವ ಕೋಲು, ಸಮಾಧಿ – ಯೋಗದೊಳಗಣ ಚಿತ್ತದ ನಿಲುಕಡೆಯೆ, ಸಬಳಂ – ಶೂಲ, ಯೋಗ – ಯೋಗವಿದ್ಯೆಯೆ, ಕೂರಿಟ್ಟು – ಕ್ರೂರವಾದ ಈಟಿ, ಸಲಕ್ಷಣಮತ್ರಂ – ಸ್ವಲಕ್ಷಣಕ್ಕೆ ಸರಿಯಾದ ಮಂತ್ರವೆ, ಧನು – ಬಿಲ್ಲು, ಜಾನಮೇ – ಧ್ಯಾನವೆ, ಕವಣೆ – ಕಲ್ಲುಗಂಣಿ, ತಪೋವಿಸ್ತರಂ – ವ್ರತವಿಸಾರವೆ, ನಾರಾಚಂ – ಸಲಾಕಿ ॥ ೨೫ ॥

ಚಂ॥ ಸುರಗಿ ವಿರಕ್ತಿ ಸುವ್ರತಮಡಾಯುಧಮಡ್ಡಣಮಾತ್ಮವಿದ್ಯೆ ಸ ।
ಚ್ಚರಿತಮ ಬೋಳೆಯಂಬು ಕಿರುಗೇಣ್‌ಶ್ರವಣಂ ಮನನಂಕರಾಸಿ ಶಾಂ ॥
ಕರನವಭಕ್ತಿದೇಹದ ಮೃಗಾದಿಗಳಾಗೆಗಣಾಳಿತಾಳ್ದು ವಿ ।
ಸ್ಫುರಿತ ವಿಳಾಸದಿಂ ನಡೆದರೊಲ್ದೊಡಗೂಡಿ ಕಿರಾತರುದ್ರನ ॥ ೨೬ ॥

ಟೀಕೆ ॥ ವಿರಕ್ತಿ – ವೈರಾಗೈವೆ, ಸುರಗಿ – ಸೂನಗಿ ಕತ್ತಿ, ಸುವ್ರತಂ – ಉತ್ತಮ ವ್ರತವೇ, ಅಡಾಯುಧಂ – ವಡ್ಡಾಣ, ಆತ್ಮವಿದ್ಯೆ – ಶಿವಜ್ಞಾನವೆ, ಅಡ್ಡಣಂ – ಗುರಾಣಿ, ಸಚ್ಚರಿತಮೆ – ಸದಾಚಾರವೆ, ಬೋಳೆಯಂಬು – ಮೋಸದ ಬಾಣ, ಶ್ರವಣಂ – ಶಾಸ್ತ್ರವನ್ನು ಕೇಳುವ ವಿಧಿಯೆ, ಕಿರುಗೇಣ್ – ಸೊಂಟಿ ಅಥವಾ ಚಿಳ್ಳೆಗೋಲು, ಮನನಂ – ಶಾಸ್ತ್ರಚಿಂತನವೆ, ಕರಾಶಿ – ಕೈಕತ್ತಿ, ಶಾಂಕರ ನವಭಕ್ತಿ – ಶಿವಸಂಬಂಧವಾದ ನವವಿಧ ಭಕ್ತಿಯೆ, ದೇಹದ ಮೃಗಾಳಿಗಳು – ಮೃಗಗಳನ್ನು ನೆಚ್ಚಿಸುವದಕ್ಕೆ ಸಾಕಿದ ಮೃಗಂಗಳು, ಆಗೆ – ಆಗುತಲೂ, ಗಣಾಳಿ – ಪ್ರಮಥರು, ತಾಳ್ದು – ಅವುಗಳನ್ನು ಧರಿಸಿ, ವಿಸ್ಫುರಿತ ವಿಲಾಸದಿಂ – ಪ್ರಕಟವಾದ ವಿನೋದದಿಂದ, ಒಲ್ದು – ಒಪ್ಪಿಗೆಯಾಗಿ, ಕಿರಾತರುದ್ರನ – ಶಬರಶಂಕರನ, ಒಡಗೂಡಿ – ಸಂಗಡ ಸೇರಿ ನಡದರ್ ॥ ೨೬ ॥

ತಾ ॥ ಪರಮೇಶ್ವರನನ್ನು ಭಜಿಸುವುದಕ್ಕೆ ಸಾಧನಗಳಾಗಿರುವ ನಿಗಮಾಗಮ

ಪುರಾಣಗಳಾದಿ ಶಾಸ್ತ್ರತತ್ವಗಳೆಲ್ಲವು ಪರಮೇಶ್ವರನ ಶಬರಲೀಲೆಯಲ್ಲಿ ಬೇಡರು ಬೇಂಟಿಯಾಡುವದಕ್ಕೆ ಬೇಕಾಗುವ ಉಪಕರಣಂಗಳಾಗಿ ಪರಿಣಮಿಸಿದವೂ ॥ ೨೬ ॥

ಚಂ॥ ಗರಿಗಣೆಬೆನ್ನ ಬತ್ತಳಿಕೆಮೆಟ್ಟಿದಕೆರ್ಪುತಮಾಲವಲ್ಲವಂ ।
ತುರುಗಿದಗೊಂಡೆಯಂಮಿಸುಪಬಿಲ್‌ಗುರುಗಂಜಿಯದಂಡಮಂಡೆಯೋ ॥
ಳ್ಬಿರುವಪೀಲಿಗಟ್ಟುವೊಸನಿಗ್ಗವದೋಲ್ಬಲೆಪಚ್ಚೆಗುಪ್ಪಸಂ ।
ಕಿರುದಳೀರಾಂತಚಲ್ಲಣಮದೇಬಗೆಗೊಂಡುದೊತಕ್ಕಿರಾತರಂ ॥ ೨೭ ॥

ಟೀಕ ॥ ಕಿರಾತರ – ಬೇಡರ – ಗರಿಗಣೆ ರೆಕ್ಕೆಗಳಂಕಟ್ಟಿದಬಾಣಗಳು ಬೆನ್ನಬೆತ್ತಳಿಕೆ – ಬೆನ್ನಿನಲ್ಲಿರುವಹಂಬಿನಹೊದರು – ಮೆಟ್ಟಿದ – ಕಾಲಿಗೆತೊಟ್ಟ – ಕೆರ್ಪು – ಕೆರೆಗಳು – ತಮಾಲಪಲ್ಲವತರುಗಿದ – ಹೊಂಗೆಯಚಿಗುರುತುಂಬಿದ – ಗೊಂಡೆಯಂ ಕುಚ್ಚು – ಮಿಸುವಬಿಲ್ – ಹೊಳೆಯುವಧನಸ್ಸು ಗುರುಗುಂಜಿಯದಂಡೆಯು – ಮಂಡೆಯೋಳ್ – ತಲೆಯಲ್ಲಿ – ಮಿರುಗುವ ಬೆಳಗುವ ಪೀಲಿಗಟ್ಟು – ನವಿಲುಗರಿಯಟೊಪ್ಪಿಗೆ – ವೊಸನಿಗ್ಗವದ – ಹೊಸತಾದಗಜದಂತದ ಒಳ್ಬಳೆ ಒಳ್ಳೆಯಬಳೆ ಪಚ್ಚೆ ಗುಪ್ಪಸಂ – ಹಸುರಂಗಿಯು – ಕಿರುದಳಿರಾಂತ –ಸಂಣಚಿಗುರುಗಳಂಪಡೆದ – ಚಲ್ಲಣಂ – ಚಡ್ಡಿಯೂ ಅದೇಂಭಗೆಗೊಂಡದು ಚನ್ನಾಗಿತ್ತು ॥ ೨೭ ॥

ಚಂ॥ ಕರಿರಿಪುಮತ್ಸರಂ ಮದಮೆ ದಂತಿವಿಮೋಹಮೆ ಖಡ್ಗಿಕಾಮಮೆ ।
ಹರಿಣಮಸೂಯೆಸೂಕರಮನೆಲ್ಬತರಕ್ಷುವೆ ರೋಷಮಾನೆ ಕಾ ।
ಳ್ಮರೆಫನದಂಭಮೇಕರಡಿಲೋಭಮೆಸೈರಿಭಮನ್ಯಪಾತ ಕೋ ।
ದ್ಧರಮೆವಿಹಂಗಸಂಗಮೆನಿಸಿರ್ದುದುತದ್ವನದೋಳ್ ಮೃಡಾಜ್ಞೆಯಿಂ ॥

ಟೀಕ ॥ ಮತ್ಸರಂ – ದೀರ್ಘ ದ್ವೇಷವೆಂಬುವ ದೋಷವೇ, ಕರಿರಿಪು – ಸಿಂಗವಾಗಯಿತು, ಮದುವೆ – ಗರ್ವವೆ, ದಂತಿ – ಆನೆಯಾದುದು, ವಿಮೋಹವೆ – ವಿಶೇಷವಾದ ಮರುಕವೇ, ಖಡ್ಗಿ – ಗಂಡಕ ಮೃಗವಾಯಿತು, ಕಾಮವೆ ಹರಿಣ – ಜಿಂಕೆಯಾಯಿತು, ಅಸೂಯೆ – ಗುಣಗಳಲ್ಲಿ ದೋಷಾರೋಪಣವೆಂಬ ದೋಷವೆ, ಸೂಕರಂ – ಹಂದಿಯಾಯಿತು, ರೋಷಂ – ಸಿಟ್ಟೆ, ಅನಲ್ಪತರಕ್ಷು – ದೊಡ್ಡ ಹುಲಿಯಾಯಿತು. ಆಶೆ – ದುರಾಶೆಯೆ, ಕಾಳ್ಮರೆ – ಕ್ಷುದ್ರಜಂತು (ಅಥವಾ ನರಿ), ದಂಭಮೆ – ಕರಡಿಯಾಯಿತು, ಲೋಭವೆ – ಸೈರಿಭಂ – ಕಾಡುಕೋಣವಾಯಿತು, ಅನ್ಯಪಾತಕೋತ್ತರಮೆ – ಇತರ ಪಾಪಗಳ ಗುಂಪೆ, ವಿಹಂಗಸಂಗಂ – ಹಕ್ಕಿಗಳ ಹಿಂಡಾಯಿತು, ಎನಿಸಿಕೊಡ ಮೃಡಾಜ್ಞೆಯಿಂ – ಸುಖಕರನಾದ ಶಿವನ ಶಾಸನದಿಂದ, ತದ್ವನದೋಳ್ – ಆ ಕಾಡಿನಲ್ಲಿ, ಇರ್ದುದು – ಇದ್ದವು.

ತಾ ॥ ಪರಮೇಶ್ವರನೆ ಕಿರಾತರೂಪನಾದಾಗ ಆತನಾಜ್ಞೆಯಿಂದ ಆತನಿಂದ ಪರಿಹರಿಸಲ್ಪಡತಕ್ಕ ದುರ್ಗುಣ ಪಾತಕಾದಿ ದೋಷಗಳೆಲ್ಲವು ಬೇಂಟೆಯಾಡಲ್ಪಡತಕ್ಕ ಕ್ಷುದ್ರ ಮೃಗಾದಿಗಳಾಗಿರ್ದವೆಂದು ಭಾವವು. ರೂಪಕಾಲಂಕಾರವು.

ವ॥ ಆಗಳ್ವಿಪುಳ ಪುಳಿಂದವೇಷದಗಣೀ ತಗಣಪ್ರತಾನಮುಮ
ಪರಿಮಿತನಿರ್ಜರವಿತಾನಮುಂ ಬೆನ್ನನೇಳ್ತರೆ ಬಿಂಕದ ಬೆಡಂಗಿನ ಬಿಯದ
ವೆಣ್ಗಲೊಡನೆ ಸಂಭ್ರಮಾಡಂಬರಂ ಮಿಗೆ ಬಂದ ಗಿರಿತನುಜೆವೆರಸಿ
ಕಿರಾತಮಹೇಶ್ವರಂ ವಿಪುಳತರೋತ್ಸಾಹದಿ ನಡಿದಾವರೆಯ ಸೋಂಕಿನಿಂ
ಪೊಡವಿವೆಣ್ಣೊಡಲ್ಗೆ ಪುಳಕಾಕುರಮನೊಡರ್ಚುತಂ ನಡತಂದಿಂದ್ರಕೀಲಕುಟ್ಟೀಲ
ಕಟಕಪೇರಡವಿಯಂ ಪೊಕ್ಕುನಿಂದು ನಿರೀಕ್ಷಿಪಾಗಳ್ ॥ ೨ ॥

ಟೀಕ ॥ ಆಗಳ್ - ಆಗ, ವಿಪುಳ - ವಿಸ್ತಾರವಾದ, ಪುಳಿಂದವೇಷದ – ಕಿರಾತ ರೂಪವುಳ್ಳ, ಅಗಣಿತ – ಅಸಂಖ್ಯಾತರಾದ, ಗಣ – ಪ್ರಮಥರ, ಪ್ರತಾನಮು – ಸಂಘವು, ಅಪರಿಮಿತ – ಲೆಕ್ಕಿಸದಷ್ಟು, ನಿರ್ಜರವಿತಾನಮುಂ - ದೇವಸಂಘವು, ಬೆನ್ನನೇಳ್ತರೆ – ಹಿಂದೆ ಬರಲು, ಬಿಂಕದ – ಗರ್ವದ, ಬೆಡಂಗಿನ – ಸೊಗಸುಳ್ಳ, ಬಿಯದವೆಣ್ಗಳೊಡನೆ – ಕಿರಾತಸ್ತ್ರೀಯರ ಕೂಡೆ, ಸಂಭ್ರಮಾಡಂಬರಂ – ಉತ್ಸವಾತಿಶಯವು, ಮಿಗೆ – ಅತಿಶಯವಾಗುತ್ತಿರಲು, ಬಂದ ಗಿರಿತನುಜೆ – ಪಾರ್ವತಿಯೊಡನೆ, ವೆರಸಿ – ಸೇರಿ, ಕಿರಾತಮಹೇಶ್ವರಂ – ಶಬರಶಂಕರನು, ವಿಪುಳತರೋತ್ಸಾಹದಿಂ – ಅತಿವಿಸ್ತಾರವಾದ ಉಲ್ಲಾಸದಿಂದ, ಅಡಿದಾವರೆಯ – ತನ್ನ ಚರಣಕಮಲದ, ಸೋಂಕಿನಿಂ – ಸ್ಪರ್ಶದಿಂದ, ಪೊಡವಿವೆಣ್ಣೊಡಲ್ಗೆ – ಭೂದೇವಿಯ ಮೆಯ್ಗೆ, ತನ್ನ ಪುಳಕಾಂಕುರಮಂ – ರೋಮಾಂಚವನ್ನು, ಒಡರ್ಚುತ – ಮಾಡುತ್ತ, ನಡೆತಂದು – ಬಂದು, ಇಂದ್ರಕೀಲಕುಟ್ಟೀಲ ಇಂದ್ರಕೀಲವೆಂಬ ಪರ್ವತದ, ಕಟಕದ – ಜರಿಯ, ಪೇರಡವಿಯಂ – ದೊಡ್ಡ ಕಾಡನ್ನು, ಪೊಕ್ಕು – ಪ್ರವೇಶಿಸಿ, ನಿಂದು ನಿರೀಕ್ಷಿಪಾಗಳ್ – ಚನ್ನಾಗಿ ನೊಡುತ್ತಿರುವಲ್ಲಿ ॥ ೨ ॥

(ಮುಂದುವರಿಯುವುದು)

ತನುವೆಂಬ ಹೇಳಿಗೆಗೆ ಮನಸರ್ಪನಾವರಿಸಿ
ಇನಿದು ಬಂದಡೆ ಅದಕ್ಕಿಂಬುಗೊಡದೆ
ಇರುತಿರ್ಪ ಸರ್ಪವನು ತೆಗೆದು
ಶಿವಲಿಂಗವನು ನೆಲೆಗೊಳಿಸಿದ ಶ್ರೀ ಗುರುವೆ ಶರಣು ಶರಣೆಂಬ
ವಾಕ್ಯಂಗಳ ಆಕಾರ ಚತುಷ್ಟಯಮಾನಂದದದಲ್ಲಿರಿಸಿದ
ಏಕೋ ರುದ್ರ ಶಿಷ್ಟ ಕಪಿಲಸಿದ್ಧಮಲ್ಲಿಕಾರ್ಜುನ

ಸಿದ್ಧರಾಮೇಶ್ವರ

ಜಕ್ಕಣಾರ್ಯ ಸಂಕಲಿತ ಏಕೋತ್ತರ ಶತಸ್ಥಲೀ

ಡಾ. ಬಿ. ನಂಜುಂಡಸ್ವಾಮಿ

ಪ್ರಪಂಚದ ಇತಿಹಾಸದಲ್ಲಿ ಭಾರತದೇಶಕ್ಕೆ ವಿಶೇಷವಾದ ಸ್ಥಾನ. ಈ ದೇಶದಲ್ಲಿ ಹುಟ್ಟಿದ ಸಹಸ್ರಾರು ಗ್ರಂಥಗಳು ಇನ್ನೂ ಮುದ್ರಣದ ಮುಖ ಕಾಣದೆ ಹಸ್ತಪ್ರತಿ ಭಂಡಾರದಲ್ಲೇ ಉಳಿದಿವೆ. ಸಂಸ್ಕೃತ ಭಾಷೆಯಲ್ಲಿ ರಚನೆಯಾದ ಸಾವಿರಾರು ಗ್ರಂಥಗಳು ವಿದ್ವಾಂಸರ ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಟ್ಟು ಪ್ರಪಂಚದ ಜನಕ್ಕೆ ಅದರ ವಿಶೇಷತೆಯನ್ನು ತಿಳಿಸುವ ಸಮಯ ಇದಾಗಿದೆ. ಸದಾ ಕಂಪ್ಯೂಟರ್‌ನಲ್ಲಿ ಅಧ್ಯಯನ ಮಾಡುವ ಇಂದಿನ ಯುವಕರ ಅಧ್ಯಯನ ಆಮೆವೇಗದ್ದು. ಮುದ್ರಿತ ಪುಸ್ತಕಗಳ ವಿವರವಾದ ಪರಿಚಯ ಲೇಖನವನ್ನು ಆಂಗ್ಲ ಭಾಷೆಯಲ್ಲಿ ನಮ್ಮ ಯುವ ವಿದ್ವಾಂಸರು ಬರೆದು ವಿದ್ವತ್‌ಲೋಕಕ್ಕೆ ನಮ್ಮ ಇತಿಹಾಸ, ಸಾಹಿತ್ಯದ ಮಹತ್ವವನ್ನು ತಿಳಿಸಬೇಕು.

ಜಕ್ಕಣಾರ್ಯನ ಬಗ್ಗೆ ಎಸ್. ಶಿವಣ್ಣನವರು ಈ ಮಾಹಿತಿ ನೀಡಿದ್ದಾರೆ.

ಜಕ್ಕಣಾರ್ಯ (ಸು. 1430) : ಮಹಾಲಿಂಗದೇವನ ಶಿಷ್ಯ ಕುಮಾರ ಬಂಕನಾಥನ ಕರಜಾತ, ವಿಜಯನಗರದ ಪ್ರೌಢದೇವರಾಯನಲ್ಲಿ (1416–47) ದಂಡನಾಯಕನಾಗಿದ್ದನು. ಭಕ್ತಿಭಂಡಾರಿ ಎಂದು ಖ್ಯಾತನಾಗಿದ್ದಾನೆ. ನೂರೊಂದು ವಿರಕ್ತರ ಸಮಕಾಲೀನ, ಗುಬ್ಬಿಯ ಮಲ್ಲಣಾರ್ಯನು (1530) ವೀರಶೈವಾಮೃತ ಮಹಾಪುರಾಣದಲ್ಲಿ ಈತ ವೀರಶೈವ ವಾಙ್ಮಯದ ಅಭಿವೃದ್ಧಿಗಾಗಿ ಅಪರಿಮಿತ ದ್ರವ್ಯವನ್ನು ವ್ಯಯಿಸಿದ ಸಂಗತಿಯನ್ನು ತಿಳಿಸಿದ್ದಾನೆ.

ಕೃತಿಗಳು : 1. ಏಕೋತ್ತರ ಶತಸ್ಥಲ : ಮಹಾಲಿಂಗದೇವನ ಏಕೋತ್ತರ ಶತಸ್ಥಲದಲ್ಲಿನ ವಚನಗಳನ್ನು ಬಿಟ್ಟು ಉಳಿದ ಸೂತ್ರ–ಸ್ವರವಚನಗಳನ್ನು ಸಂಗ್ರಹಿಸಿದ್ದಾನೆ. ಒಟ್ಟು 550 ಪದಗಳಿವೆ. ಈ ಕೃತಿಗೆ ಹಲವಾರು ಟೀಕೆಗಳು ರಚಿತವಾಗಿವೆ.

2. ಏಕೋತ್ತರ ಶತಸ್ಥಲೀ : ಸಂಸ್ಕೃತ ಕೃತಿ. ಶ್ರೀಗಿರೀಂದ್ರನು ಕನ್ನಡದಲ್ಲಿ ಟೀಕೆ ಬರೆದಿದ್ದಾನೆ.

3. ಮಹಾಲಿಂಗದೇವನ ಏಕೋತ್ತರ ಶತಸ್ಥಲದ 550 ವಚನಗಳಿಗೆ ಜಕ್ಕಣ ಟೀಕೆ ಬರೆದಿರುವ ಸಂಗತಿಯನ್ನು ಪ್ರೊ. ಸಿ. ಮಹಾದೇವಪ್ಪನವರು ಬೆಳಕಿಗೆ ತಂದಿದ್ದಾರೆ.[1]

ಕವಿಚರಿತೆಗಾರರಾದ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ಗುಬ್ಬಿ ಮಲ್ಲಣಾರ್ಯನ 'ವೀರಶೈವಾಮೃತಪುರಾಣ'ವನ್ನು ಪರಿಚಯ ಮಾಡಿ ಕೊಡುವಾಗ... "ಪೂರ್ವದಲ್ಲಿ ಲಕ್ಕಣ್ಣ ದಣ್ಣಾಯಕರು, ಭಂಡಾರಿ ಜಕ್ಕಪ್ಪ, ಕಲೆಹದ ಕೇತಿಸೆಟ್ಟಿ ಇವರುಗಳು ಲಕ್ಷಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದರೆಂಬುದು ಹೆಚ್ಚಲ್ಲ" ಎಂದಿದ್ದಾರೆ.

ಗರಣಿ ಬಸವಲಿಂಗನು (ಸು. 1600) ರಚಿಸಿದ ಬಸವೇಶ್ವರ ಕಾವ್ಯದಲ್ಲಿ :

ಗುರುಮೂರ್ತಿ ಪ್ರಭುದೇವರ ಸದ್ವಚನಗೀತ ।
ಕಿರದೆ ವ್ಯಾಖ್ಯಾನವ ಬರೆದು ।
ಪಿರಿದಾದುದಕುತ್ತರವ ಬರೆದ ಶುಭ ।
ಕರ ಜಕ್ಕಣಾರ್ಯರ್ಗೆ ಶರಣು ॥ (1–23)

ಗರಣಿ ಬಸವಲಿಂಗನ ಕಾಲದಲ್ಲಿ ಪ್ರಭುದೇವರ ವಚನಗಳಿಗೆ ವ್ಯಾಖ್ಯಾನವನ್ನು ಜಕ್ಕಣಾರ್ಯ ಬರೆದ ವಿಷಯವನ್ನೂ ದಾಖಲಿಸಿದ್ದಾನೆ. ನಮಗೆ ಇದುವರೆಗೂ ಹಸ್ತಪ್ರತಿ ಲಭ್ಯವಾಗಿಲ್ಲ.

ವಿರಕ್ತ ತೋಂಟದಾರ್ಯ (ಸು. 1616) ವಿರಚಿತ 'ನೂತನ ಪುರಾತನ ರಗಳೆ'ಯಲ್ಲಿ

ಉರುತರದ ಷಡುಸ್ಥಲದಜ್ಞಾನಿಯೆಂದೆನಿಸುತಿಹ
ವರವೀರಶೈವ ಜಕ್ಕಣ್ಣರಾಳಾನಯ್ಯ[4] ॥ 11 ॥

ಜಕ್ಕಣ್ಣಾರ್ಯ ಸಂಕಲಿತ "ಸ್ವರ ಏಕೋತ್ತರಶತಸ್ಥಲ" ಗ್ರಂಥಕ್ಕೆ ಟೀಕೆ ಇದ್ದು, ಈ ಗ್ರಂಥವನ್ನು ಸಂಪಾದಿಸಿದ ಡಾ. ಬಿ.ವಿ. ಶಿರೂರ ಅವರು ಮುನ್ನುಡಿಯಲ್ಲಿ "ಜಕ್ಕಣ್ಣಾರ್ಯನಿಗೆ, ಜಕ್ಕಣ್ಣ, ಜಕ್ಕಪ್ಪ ಎಂಬ ಹೆಸರುಗಳೂ ಉಂಟು. "ಭಕ್ತಿಭಂಡಾರಿ" ಎಂಬ ಬಿರುದಿದ್ದಂತೆಯೂ ತಿಳಿಯುತ್ತದೆ. ಇವನು ವಿಜಯನಗರದ ಪ್ರೌಢರಾಯನ (1419–46) ದಂಡನಾಯಕನಾಗಿದ್ದನು. ಇವನ ಕಾಲ ಸು. 1430 ಆಗಿರಬಹುದು. ಮಹಾಲಿಂಗದೇವನು ಈತನ ಉಪದೇಶಾರ್ಥವಾಗಿ ಎರಡು ಗ್ರಂಥಗಳನ್ನು ಬರೆದ. ಚಾಮರಸ, ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಮುಂತಾದ ವಿರಕ್ತರು ಈತನ ಸಮಕಾಲೀನರಾಗಿದ್ದಂತೆ ತೋರುತ್ತದೆ. ಇವನು ವೀರಶೈವ ಗ್ರಂಥಗಳ ರಚನೆಗಾಗಿ ಅಪರಿಮಿತ ದ್ರವ್ಯವನ್ನು ವೆಚ್ಚ ಮಾಡಿದಂತೆ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣದಲ್ಲಿ (1530) ಹೇಳಿದೆ (ಕ.ಕ.ಚ. ಸಂಪುಟ 2, ಪು. 52). ಅದ್ರೀಶಕವಿಯ 'ಪ್ರೌಢದೇವರಾಯನ ಕಾವ್ಯ'ದ ಪ್ರಕಾರ ಇವನು ತಾನು ದೊರೆಯಿಂದ ಪಡೆದ ಸನ್ಮಾನವನ್ನು ಚಾಮರಸನಿಗೆ ಕೊಡಿಸಿದನು. 'ಪ್ರಭುಲಿಂಗಲೀಲೆ'ಯನ್ನು ಆನೆಯ ಮೇಲಿಟ್ಟು ಮೆರವಣಿಗೆ ಮಾಡಿಸಿದನು. ತನಗೆ ದೊರೆತಿದ್ದ ಮಂತ್ರಿ ಪದವಿಯು ಇನ್ನು ತನುಗುಚಿತವಲ್ಲವೆಂದು ಬಗೆದು ಅದನ್ನು ಜಕ್ಕಣಾರ್ಯನಿಗೆ ಕೊಡಿಸಿದನು. ಪ್ರಭುವಿನ ವೈರಾಗ್ಯವನ್ನು ಅವನ ವಚನದ ಮೂಲಕ ಮುಕುಂದ ಪೆದ್ದಿ

ಅಣಕಿಸಲು, ಜಕ್ಕಣಾರ್ಯನು ಆ ವಚನದ ಸರಿಯಾದ ಅರ್ಥವನ್ನು ಹೇಳಿ ಪ್ರೌಢರಾಯನ ಸನ್ಮಾನಕ್ಕೆ ಪಾತ್ರವಾದನು (ಪ್ರೌಢಾರ್ಯ ಕಾವ್ಯ 1–48, 49). ಹೀಗೆ ಜಕ್ಕಣಾರ್ಯನು ಕವಿ, ಕಾವ್ಯಗಳ ಪೋಷಕನಾಗಿದ್ದಂತೆ ರಾಜನಲ್ಲಿ ಒಳ್ಳೆಯ ಪ್ರಭಾವ ಹೊಂದಿದವನಾಗಿದ್ದನು, ಪರರಿಗೆ ಉಪಕಾರ ಮಾಡುವ ಗುಣವುಳ್ಳವನಾಗಿದ್ದನು. ಒಟ್ಟಾರೆ ಜಕ್ಕಣಾರ್ಯ ತನ್ನ ಕಾಲದ ವೀರಶೈವ ಸಂಘಟನೆಗೆ ತನು, ಧನ, ಮನಂಗಳನ್ನು ಸಲ್ಲಿಸಿದ ಧೀರ ಭಕ್ತಿಭಂಡಾರಿ....

ಪ್ರೊ. ಸಿ. ಮಹಾದೇವಪ್ಪನವರು ಮಹಾಲಿಂಗದೇವ ಮತ್ತು ಅವನ ಶಿಷ್ಯ ಪರಂಪರೆಯವರು ಇದ್ದ ಪುಲಿಗೆರೆಯ ಉತ್ತರದಲ್ಲಿ ಅಲ್ಲ ಅದು ಇದ್ದದ್ದು ದಕ್ಷಿಣದಲ್ಲಿ ಎಂದು ಸ್ಪಷ್ಟಪಡಿಸಿದ್ದಾರೆ. ಮಹಾಲಿಂಗದೇವನ ಕೃತಿಗಳ ಆರಂಭದ ಗದ್ಯದಲ್ಲಿ...." ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯಶ್ರೀಪಾದ ಪದ್ಮಾರಾಧಕರುಂ....

ಈ ಗದ್ಯದ ಅಧ್ಯಯನದಿಂದ "ಚೆನ್ನದಕ್ಷಿಣ" ಅಂದರೆ ದಕ್ಷಿಣಭಾಗದ ಪುಲಿಗೆರೆ ಅರ್ಥಾತ್ ಹುಲಿಕೆರೆಯಾಗಿದ್ದು ಅಲ್ಲಿ ಶ್ರೀ ಸೋಮನಾಥನ ಸನ್ನಿಧಾನ ಇರುವುದು ತಿಳಿದುಬರುತ್ತದೆ. ಲಕ್ಕಣದಂಡೇಶನು 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾನೆ. ಉತ್ತರದ ಪುಲಿಗೆರೆಯ ಉಲ್ಲೇಖ 37ನೇ ಸಂಧಿ 206ನೇ ಪದ್ಯ ಇದರಲ್ಲಿ 'ಆದಯ್ಯಗಳ ಹುಲಿಗೆರೆಯ ಸೋಮೇಶ್ವರನ ಚರಣಾಂಬುಜಕ್ಕೆ ಶರಣು' ಮತ್ತು 38ನೇ ಸಂಧಿ 197ನೇ ಪದ್ಯದಲ್ಲಿ "ಹುಲಿಗೆರೆಯ ಪುರದ ವೀರಮಾಹೇಶ್ವರರ ಚರಣಾಂಬುಜಕ್ಕೆ ಶರಣು" ಎಂದಿದೆ. ಮಹಾಲಿಂಗದೇವರ ಆರಾಧ್ಯದೈವ ಸೋಮನಾಥದೇವರ ವ್ಯಾಪ್ತಪಟಾಕವೇ ಇಂದಿನ ವಾಗಟ್ಟ ಇಲ್ಲವೆ ವಾಗಟ; ಮಹಾಲಿಂಗದೇವರ ಮಠಪುರವಾಗಿದ್ದ ಈ ವಾರಣಾಸಿ ಹಾಗೂ ವಾಗಟಗಳೆರಡೂ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿಗೆ ಸೇರಿದ ಊರುಗಳು.

ವಿಜಯನಗರದ ಸಂಗಮ ವಂಶದ ದೊರೆಗಳ ಕಾಲ ವೀರಶೈವ ಧರ್ಮದ ಸುವರ್ಣಯುಗ. ಈ ಕಾಲದಲ್ಲಿ ರಚನೆಯಾದ ಸಾಹಿತ್ಯವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ನಮಗೆ ಇನ್ನಷ್ಟು ಹೊಸ ವಿಷಯಗಳು ತಿಳಿಯುತ್ತವೆ.

Development of Sanskrit Literature under Vijayanagara by Prof. S. Srikantha Sastri, Maharaja's College, Mysore, ಇವರ ಲೇಖನದಲ್ಲಿ "..... Deva Raya II is spoken of as Vira-saivagama-sampanna, in a record of s 1340 Vilambi. Virasaivism was re-promulgated by ministers of Devaraya like Lakkanna, Jakkanna, Chamarasa etc., mostly this literature was in the vernaculars, but Sanskrit scholars were no less prominent".[7]

ಜಕ್ಕಣಾರ್ಯವಿರಚಿತ 'ಏಕೋತ್ತರ ಶತಸ್ಥಲೀ' ಗ್ರಂಥಕ್ಕೆ ಶ್ರೀಗಿರೀಂದ್ರನ ಟೀಕೆ ಇದೆ. ಈಗ ಅದೇ ಗ್ರಂಥ ಅಚ್ಚಾಗಿದೆ. ನಮಗೆ ಇಲ್ಲಿಯವರೆಗೂ ಟೀಕಾರಹಿತವಾದ ಜಕ್ಕಣ್ಣಾರ್ಯನ ಮೂಲ ಏಕೋತ್ತರ ಶತಸ್ಥಲೀ ಗ್ರಂಥದ ಬಗ್ಗೆ ಮಾಹಿತಿ ಇರಲಿಲ್ಲ. ಸುದೈವ ಹೈದರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಮೂಲ ಗ್ರಂಥದ ಹಸ್ತಪ್ರತಿ ಇದೆ. (ಸಂಖ್ಯೆ MS.No. 1053 (B) ಈ ಹಸ್ತಪ್ರತಿಯನ್ನು ಪರಿಶೀಲಿಸಿದರೆ ಇನ್ನಷ್ಟು ಖಚಿತವಾದ ಮಾಹಿತಿ ದೊರಕುತ್ತದೆ. ಉಲ್ಲೇಖವಾಗಿರುವ ಮೊದಲ ಶ್ಲೋಕ ಪೀಠಿಕಾಪ್ರಕರಣದ 13ನೇ ಶ್ಲೋಕ, ಅಂತ್ಯದಲ್ಲಿ ಉಲ್ಲೇಖವಾಗಿರುವುದು ಜ್ಞಾನಶೂನ್ಯಸ್ಥಲದ 6ನೇ ಶ್ಲೋಕ ಮತ್ತು 12ನೇ ಶ್ಲೋಕ.[8]

ಜಕ್ಕಣ್ಣಾರ್ಯ ತನ್ನ ಗ್ರಂಥಕ್ಕೆ ತಾನೇ ಸಂಸ್ಕೃತ ಭಾಷೆಯಲ್ಲಿ ಟೀಕೆ ಬರೆದಿರುವುದು ಪ್ರಕಟಿತ ಗ್ರಂಥದ ಅಧ್ಯಯನದಿಂದ ತಿಳಿದುಬರುತ್ತದೆ. ಜೊತೆಗೆ ಈ ವಿಷಯವನ್ನು ವಿದ್ವಾನ್ ಡಾ. ಎಂ.ಎಸ್. ಬಸವರಾಜಯ್ಯನವರು ತಾವು ಸಂಪಾದಿಸಿರುವ "ಏಕೋತ್ತರಶತಸ್ಥಲ ಸಾರಚಿಂತಾಮಣಿಃ" ಎಂಬ ಗ್ರಂಥದ ಪ್ರಸ್ತಾವನೆ ಪುಟ ಹನ್ನೊಂದರಲ್ಲಿ ತಿಳಿಸಿದ್ದಾರೆ.

ಮಹಾಲಿಂಗದೇವನ ಗುರುಕುಲ ಬಹಳ ಮಹತ್ತ್ವಪೂರ್ಣವಾದದ್ದು. ಅಲ್ಲಿ ಸದಾ ಅಧ್ಯಯನ, ಅಧ್ಯಾಪನ ನಡೆಯುತ್ತ ಇತ್ತು. ಮಹಾಲಿಂಗದೇವ ದೀರ್ಘಾಯು ಕೂಡ. ಕವಿಚರಿತೆಗಾರರು ಹೇಳಿದಂತೆ ಆತನಿಗೆ ವಾರಣಾಸೀಂದ್ರನೆಂಬ ಇನ್ನೊಂದು ಹೆಸರಿತ್ತು. ಈ ವಿಷಯವನ್ನು ಸ್ಪಷ್ಟಪಡಿಸುವಂತಹ ಶ್ಲೋಕಗಳನ್ನು ಜಕ್ಕಣ್ಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ ಗ್ರಂಥವನ್ನು ನೋಡಬಹುದು. ಏಕೋತ್ತರ ಶತಸ್ಥಲೀಯ ಪೀಠಿಕಾ ಪ್ರಕರಣದ ಶ್ಲೋಕಗಳನ್ನು ಶ್ರೀ ಗಿರೀಂದ್ರನೆ ರಚಿಸಿ ಆ ಶ್ಲೋಕಗಳಿಗೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ಪೀಠಿಕಾ ಪ್ರಕರಣದಲ್ಲಿ ಅವನು ಕನ್ನಡ ಟೀಕೆ ರಚಿಸಿದ್ದಕ್ಕೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ.

ವೀರಶೈವಾಚಾರ ನಿಯಮಗಳನ್ನು ಪಾಲಿಸುವಂತಹ ವಾರಣಾಸೀಶ ಒಡೆಯನೆಂಬ ಗುರುವು, ಶಿವಸ್ವರೂಪಿಯಾದ ಈ ಗುರುವು ಜ್ಞಾನಾನುಭವಮಂಟಪದಲ್ಲಿ ಮಂಡಿಸಿದಾಗ ಭಕ್ತನಾದ 'ಪರ್ವತನು' ಬಂದು ದೀರ್ಘದಂಡ ಪ್ರಣಾಮ ಮಾಡಿದನು. ಪರ್ವತನು ಸಿರಿಯಾಳ ತ್ರಿಪುರಾರಿಯ ಸುಪುತ್ರ. ಆತನು ಏಕೋತ್ತರ ಶತಸ್ಥಲದ ಬಗ್ಗೆ ತಿಳಿದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸಿದನು. ಪರ್ವತನ ಬಿನ್ನಹವನ್ನು ಕೇಳಿ ವಾರಣಾಸೀಶ್ವರನು ತನ್ನ ಪ್ರಿಯ ಶಿಷ್ಯನಾದ ಶ್ರೀಗಿರೀಂದ್ರನನ್ನು ಕರುಣಾಕಟಾಕ್ಷದಿಂದ ನೋಡಿದನು. ಗುರುವಿನ ಕಟಾಕ್ಷದ ಅಭಿಪ್ರಾಯವನ್ನು ಗ್ರಹಿಸಿದ ಶ್ರೀಗಿರಿನಾಥನು ಜಕ್ಕಣಾರ್ಯನಿಂದ ನಾನಾ ಪುರಾಣಾಗಮಗಳ ಸಾರವನ್ನು ತೆಗೆದುಕೊಂಡು ಮಾಡಲ್ಪಟ್ಟ 'ಏಕೋತ್ತರ ಶತಸ್ಥಲೀ' ಗ್ರಂಥಕ್ಕೆ ವ್ಯಾಖ್ಯಾನವನ್ನು ಮಾಡುತ್ತೇನೆ ಎಂದು ಬಿನ್ನೈಸಿಕೊಂಡನು. ಆಗ ಆ ಜ್ಞಾನಾನುಭವ ಮಂಟಪದಲ್ಲಿದ್ದ ಪರ್ವತ ಮತ್ತು ಇತರ ಭಕ್ತರುಗಳು ಸಂತೋಷಗೊಂಡು ವ್ಯಾಖ್ಯಾನವನ್ನು ಕೇಳಲು ಸಿದ್ಧರಾದರು. ಶ್ರೀಗಿರೀಂದ್ರನು ಭಕ್ತಿಯಿಂದ ವಾರಣಾಸಿ ಒಡೆಯನಿಗೆ

ದಂಡಪ್ರಣಾಮವನ್ನು ಮಾಡಿ ಮನಸ್ಸಿನಲ್ಲಿ ಗುರುವನ್ನು ನೆನೆಯುತ್ತಾ "ಏಕೋತ್ತರ ಶತಸ್ಥಲೀ" ಗ್ರಂಥಕ್ಕೆ ವ್ಯಾಖ್ಯಾನ ಮಾಡಲು ಪ್ರಾರಂಭಿಸಿದನು.[10]

ಏಕೋತ್ತರಶತಸ್ಥಲೀ ಗ್ರಂಥವನ್ನು ಟೀಕಾಸಹಿತ ಪ್ರತಿ ಮಾಡಿಕೊಂಡು ಅಧ್ಯಯನ ಮಾಡಿದವರು ಪ್ರೊ. ಸಿ. ಮಹಾದೇವಪ್ಪನವರು. ತಮ್ಮ ಅಧ್ಯಯನದ ಫಲದಿಂದ "ಜ್ಞಾನಾನುಭವ ಮಂಟಪ ಮತ್ತು ವಾಗಟ" ಎಂಬ ಸಂಶೋಧನಾ ಲೇಖನ ಬರೆದಿದ್ದಾರೆ. ಈ ಲೇಖನ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ "ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು" (2000) ಗ್ರಂಥದಲ್ಲಿ ಪ್ರಕಟಿತವಾಗಿದೆ.[11]

ದಕ್ಷಿಣ ಕರ್ನಾಟಕದ ಹುಲಿಕೆರೆ ಅಥವಾ ವ್ಯಾಘ್ರತಟಾಕ ಅಥವಾ ವಾಕಟದ ಆಸುಪಾಸಿನಲ್ಲಿ ಜಕ್ಕಣ್ಣಾರ್ಯ ಬಹಳ ವರ್ಷ ವಾಸವಾಗಿರಬೇಕು. ಪ್ರಕಟಿತ ಶಾಸನಗಳಲ್ಲಿ ಜಕ್ಕಣ್ಣಾರ್ಯನ ವಿವರ ಸಂಗ್ರಹಿಸಬೇಕು. ಲಕ್ಕಣ್ಣದಂಡೇಶ ಹುಟ್ಟಿ ಬೆಳೆದದ್ದು ಕೋಲಾರ ಜಿಲ್ಲೆ ಮುಳುಬಾಗಿಲು ಹತ್ತಿರದ ವಿರೂಪಾಕ್ಷಿಪುರ ಎಂಬುದು ಸರ್ವವಿದಿತ. ಹೀಗೆ ಯಾವುದೋ ಒಂದು ಸುಸಮಯದಲ್ಲಿ ಜಕ್ಕಣ್ಣಾರ್ಯ ಮತ್ತು ಲಕ್ಕಣದಂಡೇಶನ ಭೇಟಿಯಾಗಿರಬೇಕು. ಜಕ್ಕಣಾರ್ಯನು ದಂಡನಾಯಕನಾಗಿದ್ದುದರಿಂದ ಸಾಹಿತ್ಯ, ಸಂಸ್ಕೃತಿಯ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಅವಕಾಶವಾಯಿತು. ಈ ಎಲ್ಲಾ ಮಾಹಿತಿಯಿಂದ ಹುಲಿಗೆರೆಯು ಉತ್ತರದಲ್ಲಿ ಇರದೆ ದಕ್ಷಿಣದಲ್ಲಿ ಇತ್ತು ಅನ್ನುವ ಸುಳಿವು ದೊರೆಯುತ್ತದೆ. ಈ ವಾಕಟದ ಪಕ್ಕ ವಾರಣಾಸಿ ಇತ್ತು, ಜನ ಅದನ್ನು ವಾನರಾಶಿ ಎಂದು ಕರೆಯುತ್ತಾರೆ ಎಂದು ಪ್ರೊ. ಸಿ. ಮಹಾದೇವಪ್ಪನವರು ತಿಳಿಸಿದ್ದಾರೆ.

ಶಂಭೋಃ ಕರ್ಣಾದಭೂದ್ವೀರಶೈವಂ ನಂದೀ ತದಗೃಹೀತ್ ।
ದಂಡೇಶಪ್ರಭುರೂಪೇಣ ವ್ಯಾಖ್ಯಾತುಂ ತಚ್ಛಿವೋಽಭವತ್ ॥ (ಪೀಠಿಕಾ ಪ್ರಕರಣ 22)

ವೀರಶೈವಶಾಸ್ತ್ರವು ಪರಮೇಶ್ವರನ ಕಿವಿಯ ಮೂಲಕ ಉದ್ಭವವಾಯಿತು. ಆ ವೀರಶೈವವನ್ನು ನಂದೀಶ್ವರನು ಪರಿಗ್ರಹಿಸಿದನು. ಆ ನಂದೀಶ್ವರನು ಗ್ರಹಿಸಿದ ಶಾಸ್ತ್ರವನ್ನು ವ್ಯಾಖ್ಯಾನ ಮಾಡಲೋಸುಗ ಬಸವದಂಡನಾಯಕನು ಪ್ರಭುರೂಪದಿಂದ ಉದಯಿಸಿದನು.

ಶಿವಧರ್ಮೋತ್ತರದಲ್ಲಿ

ತಥಾ ಶರೀರಂ ನಿಸ್ಸಾರಂ ಯೋಗಿಯಂತ್ರಪ್ರಪೀಡಿತಮ್ ।
ಸಂವರ್ತಿ ಸಾಂಗಪ್ರತ್ಯಂಗಂ ಜರಾಯುಪರಿವೇಷ್ಟಿತಮ್ ॥
(ಸಂಸಾರ ಹೇಯಸ್ಥಲಮ್ 4)

ಅಂಗಪ್ರತ್ಯಂಗಂಗಳೊಡನೆ ಕೂಡಿದುದಾಗಿ ಜರಾಯುವಿನಿಂದ ಅರ್ಥಾತ್ ಮಾಸಿನಿಂದ ಸುತ್ತಲ್ಪಟ್ಟದಾಗಿ ಜನಕ್ಕೆ ಸಮ್ಮುಖವಾಗಿ ವರ್ತಿಸುತ್ತಿದ್ದಾಗಿ ಯೋಗಿಯು ಗಾಣದಿಂದ ಪೀಡಿಸಲ್ಪಟ್ಟದ್ದಾದ ಆ ಪರಿಯಾದ ದೇಹವು ಸಾರವಿಲ್ಲದುದು.

ಸೋಮಶಂಭುವಿರಚಿತ ಗ್ರಂಥದಲ್ಲಿಯ ವಚನವು

ಉತ್ತಮಾಂಗೇ ಜಟಾಜೂಟೇ ನಿಟಿಲೇ ಚ ಗಲೇ ತಥಾ ।
ವಕ್ಷಸ್ಥಲೇ ಕರೇ ನಾಭೌ ಕಕ್ಷೇಽತಿ ಚ ವಿಧಾನತಃ ॥
(ಲಿಂಗಧಾರಣಸ್ಥಲಮ್ – 8)

ಉತ್ತಮಾಂಗದಲ್ಲೂ ಅರ್ಥಾತ್ ತಲೆಯ ಜಟಾಮಕುಟದಲ್ಲಿಯೂ ಹಣೆಯಲ್ಲಿಯೂ, ಗಳದಲ್ಲಿಯೂ (ಕತ್ತಿನಲ್ಲಿಯೂ), ವಕ್ಷಸ್ಥಲದಲ್ಲಿಯೂ, ಹಸ್ತದಲ್ಲಿಯೂ, ಹೊಕ್ಕಳಿನ (ಎದೆಯ ಭಾಗ) ಮೇಲೆಯೂ, ಕಂಕುಳಲ್ಲಿಯೂ, ವಿಧಾನದಿಂದ ಲಿಂಗವ ಧರಿಸುವಾತನು

ಭಗವದ್ಗೀತೆಯಲ್ಲಿಯೂ

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶುಬುದ್ಧಿಃ ಪರ್ಯವತಿಷ್ಠತೇ ॥
(ಪ್ರಸಾದಮಾಹಾತ್ಮ್ಯಸ್ಥಲಮ್–4)

ಶಿವಪ್ರಸನ್ನತೆ ಉಂಟಾಗುತ್ತಿರಲು ಈ ಪ್ರಾಣಿಗೆ ಆಧ್ಯಾತ್ಮಿಕವೇ ಮೊದಲಾದ ಸರ್ವದುಃಖಗಳ ನಾಶವು ಉತ್ಪನ್ನವಾಗುತ್ತಿಹುದು. ಯಾವುದಾದರೊಂದು ಕಾರಣವಾಗಿ, ನಿರ್ಮಲವಾದ ಚಿತ್ರವನುಳ್ಳ ಪುರುಷನ ಬುದ್ಧಿಯು ಬೇಗನೆ ಎಲ್ಲಾ ಕಡೆಯಲ್ಲಿಯೂ ಸ್ಥಿರವಾಗಿ ವರ್ತಿಸುತ್ತಿಹುದು.[12]

ಹೀಗೆ ವೀರಶೈವ ಧರ್ಮವನ್ನು ಈ ಹಿಂದೆ ಲಭ್ಯವಿದ್ದ ಪ್ರಮಾಣಗ್ರಂಥಗಳ ಶ್ಲೋಕಗಳ ಸಂಕಲನ ಗ್ರಂಥ "ಏಕೋತ್ತರ ಶತಸ್ಥಲೀ". ಇಂತಹ ಮಹತ್ತ್ವದ ಗ್ರಂಥ ಕನ್ನಡ ಟೀಕೆಯೊಡನೆ ಕರ್ನಾಟಕದಲ್ಲಿ ಮಾತ್ರ ಪ್ರಚಾರವಾದರೆ ಸಾಲದು, ದೇವನಾಗರಿ ಲಿಪಿಯಲ್ಲಿ ಮತ್ತು ಇಂಗ್ಲೀಷ್ ಭಾಷೆಯ ಟೀಕೆಯೊಡನೆ ಮುದ್ರಣವಾದರೆ ಕನ್ನಡ ಭಾಷೆ ಬಾರದವರಿಗೂ ಈ ಗ್ರಂಥದ ಪರಿಚಯವಾಗುತ್ತದೆ. ವಿಜಯನಗರ ಸಂಗಮ ವಂಶದವರ ಕಾಲದಲ್ಲಿ ಸಂಕಲಿತವಾದ ಈ ಗ್ರಂಥವನ್ನು ಸುಮಾರು 1910ರಲ್ಲಿ ಆಸ್ಥಾನ ವಿದ್ವಾನ್ ಎನ್.ಆರ್. ಕವಿಬಸವಶಾಸ್ತ್ರಿಗಳು ಪ್ರಕಟಿಸಿದ್ದಾರೆ. ಮುದ್ರಿತ ಪುಸ್ತಕ ಲಭ್ಯವಾಗಿಲ್ಲ. ಮೈಸೂರು ನಗರದ ಲಿಂ. ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸುವಲ್ಲಿ ಆಸಕ್ತಿ ವಹಿಸಿದ್ದರು. ಆದರೆ ಗ್ರಂಥ ಮುದ್ರಣವಾಗಲಿಲ್ಲ.

ಏಕೋತ್ತರ ಶತಸ್ಥಲೀ ಗ್ರಂಥವು ಪ್ರಮುಖವಾಗಿ ಎರಡು ವಿಭಾಗಗಳಲ್ಲಿವೆ. "ಅಂಗಸ್ಥಲ", "ಲಿಂಗಸ್ಥಲ" ಎಂದು. ಅಂಗಸ್ಥಲದಲ್ಲಿ ಮೊದಲ ಪ್ರಕರಣವನ್ನು ಪೀಠಿಕಾ ಪ್ರಕರಣಮ್ ಎಂದು ಸಂಪಾದಕರು ಕರೆದಿದ್ದಾರೆ. ನನ್ನ ಅಧ್ಯಯನದಿಂದ ತಿಳಿದು ಬರುವುದು ಏನೆಂದರೆ ಪೀಠಿಕಾ ಪ್ರಕರಣವನ್ನು ಶ್ರೀಗಿರೀಂದ್ರನು ಬರೆದಿರಬೇಕು. "ವೀರಶೈವ ಶಾಸ್ತ್ರಮ್" ಎಂದು ಪ್ರಾರಂಭವಾಗುವ ಪ್ರಕರಣದಿಂದ ಮೂಲಕೃತಿ ಜಕ್ಕಣ್ಣಾರ್ಯನದು ಇರಬೇಕು. ಈ ಎಲ್ಲ ಗೊಂದಲ ನಿವಾರಣೆಯಾಗಬೇಕು. ಅಂದರೆ ಹೈದರಾಬಾದ್ ಉಸ್ಮಾನಿಯ

ವಿಶ್ವವಿದ್ಯಾನಿಲಯದಲ್ಲಿ ಲಭ್ಯವಾಗಿರುವ ಟೀಕಾರಹಿತ "ಏಕೋತ್ತರ ಶತಸ್ಥಲೀ" ಗ್ರಂಥ ಪರಿಶೀಲನೆಗೆ ಅವಕಾಶವಾಗಬೇಕು.

ಅಂಗಸ್ಥಲದಲ್ಲಿ :

1) ಭಕ್ತಸ್ಥಲ : ಇದರಲ್ಲಿ ಹದಿನೈದು ಸ್ಥಲಗಳ ವಿವರಣೆ ಇದೆ. ಪಿಂಡಸ್ಥಲದಿಂದ ಸಹಜದಾನಸ್ಥಲಮ್ ವರೆಗೆ ;
2) ಮಾಹೇಶ್ವರಸ್ಥಲಮ್ : ಇದರಲ್ಲಿ ಎಂಟು ಸ್ಥಲಗಳ ವಿವರಣೆ ಇದೆ. ಮಹೇಶ್ವರಸ್ಥಲಮ್ – ಶಿವಜಗನ್ಮಯಸ್ಥಲಮ್ ;
3) ಪ್ರಸಾದಿಸ್ಥಲಮ್ : ಇದರಲ್ಲಿ ಏಳು ಸ್ಥಲಗಳ ವಿವರಣೆ ಇದೆ. ಪ್ರಸಾದಿಸ್ಥಲಮ್ – ಪ್ರಸಾದ ಮಹಾತ್ಮ್ಯಸ್ಥಲಮ್ ;
4) ಪ್ರಾಣಲಿಂಗಿಸ್ಥಲಮ್ : ಇದರಲ್ಲಿ ಒಂದು ಸ್ಥಲದ ವಿವರಣೆ ಇದೆ. ಪ್ರಾಣಲಿಂಗಸ್ಥಲಮ್ – ಅಂಗಲಿಂಗಸ್ಥಲಮ್ ;
5) ಶರಣಸ್ಥಲಮ್ : ಇದರಲ್ಲಿ ನಾಲ್ಕು ಸ್ಥಲಗಳ ವಿವರಣೆ ಶರಣ ಇದೆ. ಸ್ಥಲಮ್ – ಶೀಲಸಂಪಾದನಸ್ಥಲಮ್ ; ಮತ್ತು
6) ಐಕ್ಯಸ್ಥಲಮ್ : ಇದರಲ್ಲಿ ನಾಲ್ಕು ಸ್ಥಲಗಳ ವಿವರಣೆ ಇದೆ.

ಲಿಂಗಸ್ಥಲದಲ್ಲಿ :

1) ಆಚಾರಲಿಂಗ : ಇದರಲ್ಲಿ ದೀಕ್ಷಾಗುರುಸ್ಥಲಮ್ ನಿಂದ ಪರಸ್ಥಲದವರೆಗೆ ಒಂಬತ್ತು ಸ್ಥಲದ ವಿವರಣೆ ಬಂದಿದೆ ;
2) ಗುರುಲಿಂಗ : ಇದರಲ್ಲಿ ಕ್ರಿಯಾಗಮಸ್ಥಲಮ್‌ನಿಂದ ಜ್ಞಾನಾಚಾರಸ್ಥಲಮ್‌ವರೆಗೆ ಒಂಭತ್ತು ಸ್ಥಲದ ವಿವರಣೆ ಬಂದಿದೆ ;
3) ಶಿವಲಿಂಗ : ಇದರಲ್ಲಿ ಕಾಯಾನುಗ್ರಹಸ್ಥಲಮ್ ನಿಂದ ಸೇವ್ಯಸ್ಥಲಮ್‌ವರೆಗೆ ಒಂಭತ್ತು ಸ್ಥಲಗಳ ವಿವರಣೆ ಬಂದಿದೆ ;
4) ಜಂಗಮಲಿಂಗ : ಇದರಲ್ಲಿ ಜೀವಾತ್ಮಸ್ಥಲಮ್ ನಿಂದ ಶಿಕ್ಷಾಪಾದೋದಕ ಸ್ಥಲಮ್ ವರೆಗೆ ಹನ್ನೊಂದು ಸ್ಥಲಗಳ ವಿವರಣೆ ಬಂದಿದೆ ;
5) ಪ್ರಸಾದಲಿಂಗ : ಇದರಲ್ಲಿ ಜ್ಞಾನಪಾದೋದಕಸ್ಥಲಮ್‌ನಿಂದ ಜ್ಞಾನಪ್ರಕಾಶಸ್ಥಲಮ್ ವರೆಗೆ ಹತ್ತು ಸ್ಥಲಗಳ ವಿವರಣೆ ಬಂದಿದೆ; ಮತ್ತು
6) ಮಹಾಲಿಂಗ : ಇದರಲ್ಲಿ ಸ್ವೀಕೃತಪ್ರಸಾದಸ್ಥಲಮ್ ನಿಂದ ಜ್ಞಾನಶೂನ್ಯಸ್ಥಲಮ್ ವರೆಗೆ ಒಂಭತ್ತು ಸ್ಥಲಗಳ ವಿವರಣೆ ಬಂದಿದೆ.

ಅಂಗಸ್ಥಲದಲ್ಲಿ 44 ಸ್ಥಲಗಳು, ಲಿಂಗಸ್ಥಲದಲ್ಲಿ 57 ಸ್ಥಲಗಳು ಒಟ್ಟು ನೂರೊಂದು ಸ್ಥಳಗಳ ವಿವರಣೆ ಬಂದಿದೆ.

ಏಕೋತ್ತರ ಶತಸ್ಥಲೀ ಗ್ರಂಥವನ್ನು ಅಂದಿನ ದಿನಮಾನಕ್ಕೆ ಅಧ್ಯಯನದಲ್ಲಿ, ಲಭ್ಯವಿದ್ದ ಕೆಳಕಂಡ ಗ್ರಂಥಗಳಿಂದ ಸಂಗ್ರಹಿಸಿದೆ.

1. ಅಂಬಾಸ್ತವಃ 2. ಅಚಿಂತ್ಯವಿಶ್ವಸಾದಾಖ್ಯಃ 3. ಆದಿತ್ಯ ಪುರಾಣಮ್ 4. ಈಶ್ವರಗೀತಾ 5. ಕಾರಣಃ 6 ಕಾರಣಾಗಮಃ 7. ಕಾಮಿಕಾಗಮಃ 8. ಕ್ರಿಯಾಕಾಂಡಶೇಖರಃ 9. ಕಿರಣಾಗಮಃ 10. ಕೂರ್ಮಪುರಾಣಮ್ 11. ಗರುಡಪುರಾಣಮ್ 12.ಚಂದ್ರಜ್ಞಾನಮ್ 13. ಚಂದ್ರಜ್ಞಾನಾಗಮಃ 14. ಚಂದ್ರಾವಲೋಕನಮ್ 15. ಜಾಬಾಲಮುನಿಸ್ಮೃತಿಃ 16. ಜ್ಞಾನೋತ್ತರಾಗಮಃ 17. ತಂತ್ರಸಾರಮ್ 18. ತತ್ತ್ವಪ್ರದೀಪಿಕಾ 19. ತತ್ತ್ವೋದ್ಬೋಧಃ 20. ತ್ರಿಕಾಂಡಸಾರಕಿ 21. ದಕ್ಷಿಣಾಮೂತಿಸ್ತವಃ 22. ದ್ವಾದಶಸಾಹಸ್ರೀ 23. ದೇವೀವಾಕ್ಯಮ್ 24. ನೇತ್ರೋದ್ಯೋತಃ 25. ಪದ್ಮನಾಭಃ 26. ಪರಮಾರ್ಥಸಾರಃ 27. ಪುರಾತಮಾಕ್ಯಃ 28. ಬ್ರಹ್ಮಗೀತಾ 29. ಬ್ರಹ್ಮಪ್ರೋಕ್ತೇ 30. ಬ್ರಹ್ಮಾಂಡ ಪುರಾಣಮ್ 31. ಬೃಹತ್ಯಾಮೋತ್ತರಮ್ 32. ಭಗವದ್ಗೀತಾ 33. ಭರ್ಗಶಿಖಾ 34. ಭಾಗವತಮ್ 35. ಮಂತ್ರಾರ್ಣನಮ್ 36. ಮಹಾಭಾರತಮ್ 37. ಮಹಾಲಿಂಗ ಪುರಾಣಮ್ 38. ಮಹಿಮ್ನಸ್ತೋತ್ರ 39. ಮಾನವಗ್ರಂಥಃ 40. ಮೂಲತಂತ್ರಮ್ 41. ಯಾಜ್ಞವಲ್ಕ್ಯ ಸ್ಮೃತಿಃ 42. ಯೋಗಜಾಗಮಃ 43. ಯೋಗದೀಪಿಕಾ 44. ಯೋಗಮಂಜರೀ 45. ಯೋಗವಾಸಿಷ್ಠಃ 46. ಯೋಗಶತಕಮ್ 47. ಯೋಗಶಾಸ್ತ್ರಮ್ 48. ಯೋಗಷಟ್ಸಹಸ್ರಿಕಾ 49. ಯೋಗಸಂಗ್ರಹಃ 50. ಯೋಗಸಾಗರಃ 51. ಯೋಗನಾರಸಂಗ್ರಹಃ 52. ಯೋಗಸಾರಸಮುಚ್ಚಯಃ 53. ಯೋಗಾರ್ಣವಮ್ 54. ರಾಮಾಯಣಮ್ 55. ರುದ್ರಯಾಮಳಮ್ 56. ಲಿಂಗಪುರಾಣಮ್ 47. ಲೈಂಗ್ಲಮ್ 58. ವಾಕ್ಯವೃತ್ತಿಃ 59. ವಾತುಲತಂತ್ರಮ್ 60. ವಾತುಲತಂತ್ರಮ್ 61. ವಾಸಿಷ್ಠಃ 62. ವಾಸಿಷ್ಠಾಗಮಃ 63. ವಿಜ್ಞಾನಭೈರವಃ 64. ವಿಷ್ಣುಧರ್ಮೋತ್ತರಃ 65. ವಿಷ್ಣುಪುರಾಣಮ್ 66. ವೇದಾಂತಶಾಸ್ತ್ರಮ್ 67. ಶಂಭುಪ್ರಭಾ 68. ಶಿವಗತಾ 69. ಶಿವಜ್ಞಾನದೀಪಿಕಾ 70. ಶಿವಧರ್ಮ 71. ಶಿವಧರ್ಮೋತ್ತರಮ್ 72 ಶಿವನಿರ್ಣಯಃ 73. ಶಿವಪುರಾಣಮ್ 74. ಶಿವದೀಪಿಕಾ 75. ಶೀವಯೋಗದೀಪಿಕಾ 76. ಶಿವರಹಸ್ಯಮ್ 77. ಶಿವಸೂತ್ರಮ್ 78. ಶಿವಾದ್ವೈತಃ 79. ಶೈವರತ್ನಾಕರಃ 80. ಶೈವಾಗಮಃ 81. ಷಟ್ಸಹಸ್ತಿಕಾ 82. ಸರ್ವಜ್ಞಾನೋತ್ತರಮ್ 83 ಸ್ಪಂದಶಾಸ್ತ್ರಮ್ 84. ಸ್ವಚ್ಛಂದಲಲಿತಭೈರವೀ 85 ಸ್ಕಾಂದಪುರಾಣಮ್ 86. ಸ್ವಾತ್ಮಯೋಗಪ್ರದೀಪಿಕಾ 87. ಸ್ವಾನುಬೋಧಃ 88. ಸಿದ್ಧಾಂತರಹಪೂರ್ವ 89. ಸಿದ್ಧಾಂತಶೇಖರಃ 90. ಸೂಕ್ತಾವಳೀ 91. ಸೂತಸಂಹಿತಾ 92. ಸೋಮಶಂಭು ವಿರಚಿತ ಗ್ರಂಥಃ 93. ಸ್ತೋತ್ರಾರ್ಣವಃ 94. ಸೌರಪುರಾಣಮ್

ಅಡಿಟಿಪ್ಪಣಿ

1. 'ವಚನ ಸಂಕಲನಗಳು' : ಎಸ್. ಶಿವಣ್ಣ, ವಚನ ಸಾಹಿತ್ಯ – ದ್ವಿತೀಯ ಘಟ್ಟ, 1999, ಸಂ. ಡಾ. ಎಸ್. ವಿದ್ಯಾಶಂಕರ, ಪ್ರ. ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ, ಬೆಂಗಳೂರು.
2. ಕರ್ನಾಟಕ ಕವಿಚರಿತೆ : ದ್ವಿತೀಯ ಸಂಪುಟ, ಆರ್. ನರಸಿಂಹಾಚಾರ್ಯ, ದ್ವಿತೀಯ ಸಂಪುಟ, 1973, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು 590008
3. ಗರಣಿ ಬಸವಲಿಂಗ ವಿರಚಿತ 'ಬಸವೇಶ್ವರ ಕಾವ್ಯ': ಸಂ. ಹ.ಕ. ರಾಜೇಗೌಡ, 1982, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವಿರಕ್ತ ತೋಂಟದಾರ್ಯರ "ನೂತನ ಪುರಾತನ ರಗಳೆ": ಸಂ. ಎಸ್. ಶಿವಣ್ಣ, ಬಸವಪಥ ಸಂಪುಟ 15, ಸಂಚಿಕೆ 9, ಡಿಸೆಂಬರ್ 1993.
5. ಸ್ವರ ಏಕೋತ್ತರ ಶತಸ್ಥಲ ಟೀಕೆ : ಸಂ. ಡಾ. ಬಿ.ವಿ. ಶಿರೂರ, 2007, ಪ್ರ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.
6. ಬೆಂಗಳೂರು ನಗರ ಪ್ರಥಮ ಶರಣ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಪ್ರೊ. ಸಿ. ಮಹಾದೇವಪ್ಪ ನವರು ಮಾಡಿದ ಆಶಯ ಭಾಷಣ: 'ಕಲ್ಯಾಣ ಸಿರಿ', ಸಂ. ಎಚ್.ಎಸ್. ಸಿದ್ಧಗಂಗಪ್ಪ, ಎನ್. ಸಿದ್ಧಲಿಂಗಯ್ಯ, 1999, ಪ್ರಕಾಶಕರು: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.
7. Development of Sanskrit Literature under Vijayanagara by Sri Srikanta Sastri, Lecturer, Maharaja's College, Mysore Vijayanagara Sexcentenary Commemoration, Volume 1936, Dharwar.
8. A descriptive catalogue of the Kannada Manuscripts in the Osmania University Library, editors B. Ramachandra Rao Dr. T.V. Venkatachala Sastry, Osmania University, Hyderabad, 1966.
9. ಪರ್ವತ ಶಿವಯೋಗಿ ಸಂಗೃಹೀತಃ "ಏಕೋತ್ತರಶತಸ್ಥಲ ಸಾರಚಿಂತಾಮಣಿ" (ಜಕ್ಕಣಾರ್ಯ ಕೃತ ಏಕೋತ್ತರ ಶತಸ್ಥಲೀ ಸಂಗ್ರಹಃ ಶ್ರೀ ಗಿರೀಂದ್ರ ರಚಿತ ಕನ್ನಡ ವ್ಯಾಖ್ಯಾನ ಸಹಿತಃ): ಸಂ. ವಿದ್ವಾನ್ ಡಾ. ಎಂ.ಎಸ್. ಬಸವರಾಜಯ್ಯ, ಮೈಸೂರು, ಪ್ರ. ಗುರುಕುಲ ಪ್ರಕಾಶನ, ತಿಪಟೂರು 2005.
10. ಜಕ್ಕಣಾರ್ಯ ವಿರಚಿತ 'ಏಕೋತ್ತರ ಶತಸ್ಥಲೀ' ಕೃತಿಯ ಬಗ್ಗೆ ಕೆಲವು ಸ್ಪಷ್ಟನೆಗಳು : ಡಾ. ಬಿ. ನಂಜುಂಡಸ್ವಾಮಿ, ದೇಗುಲ ಪ್ರಭೆ, ಸಂಪುಟ 1, ಸಂಚಿಕೆ 10, 11, ಸಂಪುಟ 2, ಸಂಚಿಕೆ 12, 2010, ಸಂ. ಡಾ. ಸಿ. ಶಿವಕುಮಾರಸ್ವಾಮಿ, ಶ್ರೀದೇಗುಲ ಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
11. ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು: ಪ್ರೊ. ಸಿ. ಮಹಾದೇವಪ್ಪ, 2000, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು 560018.
12. ಜಕ್ಕಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ, ಸಂ. ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು, 2007, ಪ್ರ. ಕರ್ನಾಟಕ ಜಿಲ್ಲಾ ಪತ್ರಾಗಾರ ಇಲಾಖೆ, ಬೆಂಗಳೂರು.

ನೀತಿಶಾಸ್ತ್ರದ ದೃಷ್ಟಿಯಲ್ಲಿ ಸಾಂಕ್ರಾಮಿಕ ರೋಗದ ಆರೈಕೆ

ಸಿ.ಎಂ. ಲಿಂಗರಾಜು

ಅಂದು ದಿನಾಂಕ 19.12.2019. ಚೀನಾದ ಹೂಹಾನ್ ಪ್ರಾಂತ್ಯದಲ್ಲಿ ಸಾಂಕ್ರಾಮಿಕ ಕ್ರಿಮಿಯೊಂದು ಸ್ಫೋಟಗೊಂಡಿತು. ನೋಡನೋಡುತ್ತಿದ್ದಂತೆ ವಿಶ್ವದಾದ್ಯಂತ ಹರಡಿ, ಸಾವಿನ ಹಟ್ಟಹಾಸ ಮೆರೆಯತೊಡಗಿತು. ಜಗತ್ತಿನ ಉದ್ದಗಲಕ್ಕೂ ಹರಡಿದ ಇದರ ಸೋಂಕು ದಿನದಿಂದ ದಿನಕ್ಕೆ ಪರಿಸ್ಥಿತಿಯನ್ನು ಗಂಭೀರವಾಗಿಸಿ ಮರಣಮೃದಂಗ ಬಾರಿಸಿದಾಗ, ಮನುಕುಲದ ಉಳಿವಿಗಾಗಿ ಟೊಂಕ ಕಟ್ಟಿ ನಿಂತವರು ಪ್ರಾಥಮಿಕ ಹಂತದ ಬೇರುಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಕಾರ್ಯಕರ್ತರು, ಪ್ರಮುಖವಾಗಿ ಶುಶ್ರೂಷಕರು. ಇಂದು ಸಾವಿನ ಮಾರಿ ಬಾಗಿಲು ತಟ್ಟಿದಾಗ ಅದರ ಮುಂದೆ ನಿಂತು ಹೋರಾಡಿದ ಈ ಆರೋಗ್ಯ ಸೈನಿಕರ ಸ್ಥೈರ್ಯ, ನೈತಿಕ ಹಕ್ಕು, ಬಾಧ್ಯತೆ, ಮೌಲ್ಯ, ಕರ್ತವ್ಯಪ್ರಜ್ಞೆ, ಬದ್ಧತೆಯ ಬಗೆಗೆ ಅವಲೋಕನ ಮಾಡಲು ಕಾಲ ಪಕ್ವವಾಗಿದೆ.

ಯಾವುದೇ ಸ್ಥಾನಮಾನವಿಲ್ಲದೆ, ಪ್ರತಿಫಲದ ಅಪೇಕ್ಷೆ ಇಲ್ಲದೆ ಪ್ರಚಾರದ ಸೋಗಿಲ್ಲದೆ ಯಾವುದೇ ಸರ್ಕಾರದ ಶಕ್ತಿಯ(Power) ಉನ್ನತ ಹುದ್ದೆಗಳಿಲ್ಲದೆ, ಗಾಣದ ಎತ್ತಿನ ಹಾಗೆ ಸಮಾಜಕ್ಕೆ ದುಡಿಯುವ ಈ ವರ್ಗ ಕೋವಿಡ್–19 ನಂತಹ ಸಾಂಕ್ರಾಮಿಕ ಪಿಡುಗು ಸ್ಫೋಟಗೊಂಡಾಗ ನೈತಿಕ ದೃಷ್ಟಿಕೋನದಲ್ಲಿ ಅವರ ಸೇವೆಯ ಬಗೆಗೆ ಬೆಳಕು ಚೆಲ್ಲೋಣ.

ನರ್ಸಿಂಗ್ ಕ್ಷೇತ್ರದ ಇತಿಹಾಸದಲ್ಲಿ ರೋಗದಿಂದ ಬಳಲುತ್ತಿರುವವರ ಮುಕ್ತಿ, ಆರೋಗ್ಯವರ್ಧನೆ, ಸಂರಕ್ಷಣೆಯಲ್ಲಿ ಶುಶ್ರೂಷಕರ ಪಾತ್ರ ಹೆಮ್ಮೆ ಪಡುವ ಅಧ್ಯಾಯವಾಗಿದೆ. ಯಾವುದೇ ಸಂಸ್ಥೆ, ವೃತ್ತಿಯ ಘನತೆ ಅದನ್ನು ಅನುಸರಿಸುತ್ತಿರುವವರ ನಡವಳಿಕೆಯಲ್ಲಿ ಅಡಗಿದೆ. ಆದುದರಿಂದ ವೃತ್ತಿ ನಿರತ ಸ್ಥಳದಲ್ಲಿ ನೈತಿಕವಾಗಿ ನಡೆದುಕೊಳ್ಳುವುದು ಅಂಥ ಉದ್ಯೋಗಿಗಳ ದೊಡ್ಡ ಬಾಧ್ಯತೆಯಾಗಿರುತ್ತದೆ.

ಇದು ಆರೋಗ್ಯ ಕ್ಷೇತ್ರದ ಬೇರೆ ಬೇರೆ ಸ್ತರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರಿಗೂ ಸಮಾನವಾಗಿ ಅನ್ವಯಿಸುತ್ತದೆ ಮತ್ತು ಅವರ ನಡವಳಿಕೆ ಆಯಾ ಸಂಸ್ಥೆಗಳ ಚಿತ್ರಣವನ್ನು ಪ್ರತಿಫಲಿಸುತ್ತಿದೆ. ಇಂದು ಹಿಂದೆಂದಿಗಿಂತಲೂ ಶುಶ್ರೂಷಕರು ಭಿನ್ನವಾದ ನೈತಿಕ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಕೋವಿಡ್–19 ರೋಗಿಗಳ ಆರೈಕೆಯಲ್ಲಿ ನೈತಿಕ ಸಂದಿಗ್ಧತೆ : ಕೋವಿಡ್–19ರ ನಿಯಂತ್ರಣದಲ್ಲಿ ಶುಶ್ರೂಷಕರ ಸೇವೆ, ಕಾರ್ಯವೈಖರಿ, ಅದಮ್ಯ ಆತ್ಮವಿಶ್ವಾಸ, ಕರ್ತವ್ಯ

ಬದ್ಧತೆ ಜಗಜ್ಜಾಹೀರಾಗಿದೆ. ಆದರೆ ಅವರು ಆಗ ನೈತಿಕ ಸಂದಿಗ್ಧತೆಯನ್ನು ಎದುರಿಸಿದ್ದಾರೆ. ಮೊದಲನೆಯದಾಗಿ ಶುಶ್ರೂಷಕರೇ ಹೇಳುವಂತೆ, ಅವರ ಪ್ರಾಥಮಿಕ ಆದ್ಯತೆ ರೋಗಿಗಳ ಆರೈಕೆಯಾಗಿದೆ. ಅವರು ತಮ್ಮ ಕರ್ತವ್ಯಕ್ಕೆ ಋಣಿಯಾಗಿರಬೇಕು ಹಾಗೂ ಇತರರಿಗೂ ಪ್ರೇರಣೆಯಾಗಬೇಕು. ಸಾಂಕ್ರಾಮಿಕ ಪಿಡುಗು ಸ್ಫೋಟಗೊಂಡ ಸಂದರ್ಭದಲ್ಲಿ ಶುಶ್ರೂಷಕರು ನಿರಂತರವಾಗಿ ತೀವ್ರ ನಿಗಾ ಸೋಂಕಿತ ರೋಗಿಗಳಿಗೆ, ಅಸಮರ್ಪಕ ಸೌಲಭ್ಯಗಳ ನಡುವೆಯೂ, ಉತ್ಕೃಷ್ಟ ಸೇವೆ ಸಲ್ಲಿಸಿದ್ದಾರೆ. ಆದುದರಿಂದ, ಇಂತಹ ಸಂದರ್ಭದಲ್ಲಿ ಶುಶ್ರೂಷಕರು ಮತ್ತು ಸಹೊದ್ಯೋಗಿಗಳು ತಮ್ಮ ರಕ್ಷಣೆಯ ಜೊತೆಗೆ ಎಷ್ಟು ಮತ್ತು ಹೇಗೆ ಸೇವೆ ಮಾಡಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶುಶ್ರೂಷಕರು ದೈಹಿಕವಾಗಿ ಸುರಕ್ಷಿತವಲ್ಲದ ಪರಿಸ್ಥಿತಿಯಲ್ಲಿ ಅಗತ್ಯ ಸಂರಕ್ಷಕ ಉಪಕರಣಗಳಿಲ್ಲದೆ ಹೋರಾಡಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಸೇವೆ ಸಲ್ಲಿಸುವ ಶುಶ್ರೂಷಕರಿಗೆ ವೃತ್ತಿಪರ, ನೈತಿಕ, ಕಾನೂನಾತ್ಮಕ ರಕ್ಷಣೆ ಅವಶ್ಯವಿರುತ್ತದೆ.

ಶುಶ್ರೂಷಕರ ನೀತಿಸಂಹಿತೆಗಳು ಅಂತಹ ಪರಿಸ್ಥಿತಿಯಲ್ಲಿ ಹೋರಾಡಲು ಬೇಕಾದ ಮಾರ್ಗದರ್ಶನ ಕೊಡುತ್ತದೆ. ಅಂತಹ ಸಾಂಕ್ರಾಮಿಕ ಸಂದರ್ಭದಲ್ಲಿ ನೋಂದಾಯಿತ ಶುಶ್ರೂಷಕರು ನೈತಿಕ ತಳಹದಿಯ ಮೇಲೆ ವೃತ್ತಿಯ ಸಮಗ್ರತೆಗಾಗಿ ಎಲ್ಲಿ, ಹೇಗೆ, ಎಷ್ಟು ಸೇವೆ ನೀಡಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಯಾವುದೇ ಸಂಸ್ಥೆ, ಆಸ್ಪತ್ರೆ, ವ್ಯವಸ್ಥಾಪಕರು, ಆಡಳಿತಾಧಿಕಾರಿಗಳು, ಶುಶ್ರೂಷಕರು, ಆರೋಗ್ಯ ಕಾರ್ಯಕರ್ತರು, ಉದ್ಯೋಗಿಗಳು ಮತ್ತು ಅವರ ನಿರೀಕ್ಷೆಗಳನ್ನು ಅರ್ಥ ಮಾಡಿಕೊಂಡು ಸಾಂಕ್ರಾಮಿಕ ಪಿಡುಗಿನ ಕಾಲದಲ್ಲಿ ಶುಶ್ರೂಷಕರನ್ನು ನಿಯೋಜಿಸುವ ಕುರಿತು ಅರ್ಥ ಮಾಡಿಕೊಳ್ಳಬೇಕು.

ಶುಶ್ರೂಷಕರು ತಾವು ಅಶಕ್ತರೆನಿಸಿದಾಗ, ಶಾರೀರಿಕವಾಗಿ ಅಸುರಕ್ಷಿತರು ಎನಿಸಿದಾಗ ಹಾಗೂ ಯಾವುದೇ ಸುರಕ್ಷಿತ ಉಪಕರಣಗಳಿಲ್ಲದಿರುವಾಗ, ಪರೀಕ್ಷಾ ಪರಿಕರಗಳಿಲ್ಲದಿರುವಾಗ, ಅವರ ವೈಯಕ್ತಿಕ ಹಾಗೂ ಕೌಟುಂಬಿಕ ಒಳಿತನ್ನು ಪರಿಗಣಿಸಿ ನೈತಿಕ ಬೆಂಬಲದೊಂದಿಗೆ ಸರಿಯಾದುದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ನೋಂದಾಯಿತ ಶುಶ್ರೂಷಕರಿಗೆ ಸಾಂಕ್ರಾಮಿಕ ಕಾಲದಲ್ಲಿ ಆಯಾ ಪ್ರದೇಶದ ಕಾನೂನು ಸಂಹಿತೆಯ ಬಗೆಗೆ ಜವಾಬ್ದಾರಿಯುತ ಅರಿವಿರಬೇಕು. ಕಾನೂನುಗಳು ತೀವ್ರ ಕಠಿಣ ಪರಿಸ್ಥಿತಿಗಳಲ್ಲಿಯೂ ಅಪಾಯವನ್ನು ಲೆಕ್ಕಿಸದೆ ಸೇವೆ ನೀಡಬೇಕೆಂದು ಆದೇಶಿಸುತ್ತದೆಯೇ?

ಶುಶ್ರೂಷಕರು ಸಾಂಕ್ರಾಮಿಕ ಪಿಡುಗಿನಂಥ ಕ್ಲಿಷ್ಟಕರ ಸಮಯದಲ್ಲಿ ಸೇವೆ ನೀಡಲು ಹೇಗೆ ರಕ್ಷಿಸಲ್ಪಡುತ್ತಾರೆ?

ಶುಶ್ರೂಷಕರೇನಾದರೂ ಆಕಸ್ಮಿಕ ಲೋಪವೆಸಗಿದಾಗ ಸಂರಕ್ಷಣೆ ವಿಧಾನಗಳಿವೆಯೇ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಆರೋಗ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಶುಶ್ರೂಷಕರು ಕೋವಿಡ್–19ರಂಥ ಸಮಯದಲ್ಲಿ ಉತ್ಕೃಷ್ಟ ದರ್ಜೆಯ ಆರೋಗ್ಯ ನೀತಿನಿಯಮಗಳನ್ನು ರೂಪಿಸುವಲ್ಲಿ ಮತ್ತು ಕಾರ್ಯಕ್ರಮ ರೂಪುರೇಷೆಗಳ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಸಮುದಾಯದ ವೈದ್ಯಕೀಯ ಅಗತ್ಯಗಳನ್ನು ರಚಿಸುವ, ಒದಗಿಸುವ, ನಿರ್ವಹಿಸುವ ಮೂಲಕ ಶುಶ್ರೂಷಕರು, ಉದ್ಯೋಗಿಗಳು, ಸ್ವಯಂಸೇವಕರು, ಸಮುದಾಯ ಇವೆಲ್ಲವನ್ನೂ ನಿಭಾಯಿಸುವ ಗುರುತರವಾದ ಜವಾಬ್ದಾರಿ ಹೊಂದಿರುತ್ತಾರೆ.

ಇಂಥ ಜವಾಬ್ದಾರಿಯು ಅವಶ್ಯಕವೂ ಆದ ವೈಯಕ್ತಿಕ ಜೀವರಕ್ಷಕ ಸಲಕರಣೆಗಳನ್ನು ಒದಗಿಸುವುದು, ಲಸಿಕೆ, ಶಾರೀರಿಕ ರಕ್ಷಣೆ ಹಾಗೂ ಶಸ್ತ್ರಕ್ರಿಯೆ ಶಿಷ್ಟಾಚಾರವನ್ನು ಒಳಗೊಂಡಿರುತ್ತದೆ. ಶುಶ್ರೂಷಕ ನೀತಿಸಂಹಿತೆ ಹೇಳುವುದೇನೆಂದರೆ, ಎಲ್ಲಾ ಕಾರ್ಯ ಚಟುವಟಿಕೆಗಳ ಅನಪೇಕ್ಷಿತ ಅಪಾಯವು ಮಾನವ ಹಕ್ಕುಗಳ ಉಲ್ಲಂಘನೆಯ ಸೂಚ್ಯಂಕವಾಗಿದೆ.

ಶುಶ್ರೂಷಕರಾದವರು ವಿವೇಚನೆ, ಎಚ್ಚರಿಕೆಯಿಂದ ಉದ್ದೇಶದ ಮೌಲ್ಯಮಾಪನ ಮಾಡಿ ಅದಕ್ಕೆ ಪ್ರತಿಯಾಗಿ ಲಭ್ಯವಿರುವ ಎಲ್ಲಾ ಆಯ್ಕೆಗಳು ಮತ್ತು ತಾರ್ಕಿಕತೆಗಳನ್ನು ಪರಿಗಣಿಸಿ ಸೂಕ್ತವಾದ ನೈತಿಕ ಸಮರ್ಥನೆಯನ್ನು ಅನಿರ್ಬಂಧಿತವಾಗಿ ಒದಗಿಸಿಕೊಡಬೇಕು.

ಅಸಾಧಾರಣವೂ ತೀವ್ರತರವೂ ಆದ ಸ್ಥಿತಿಗಳಲ್ಲಿ ಅಂತಾರಾಷ್ಟ್ರೀಯ ಪ್ರಮಾಣಿತ ಸೇವೆಯನ್ನು ಜಾರಿಗೊಳಿಸುವಲ್ಲಿ ಮತ್ತು ಸೂಕ್ತ ಪಾರದರ್ಶಿಕ ಪ್ರಕ್ರಿಯೆಯನ್ನು ಶುಶ್ರೂಷಕರು, ಮಾನವ ಹಕ್ಕುಗಳೆಂದು ಪರಿಗಣಿಸಬಹುದು.

ಶುಶ್ರೂಷಕರು ನೈತಿಕ ಬಾಧ್ಯತೆಯನ್ನು ಸಂರಕ್ಷಿಸುವ ಹಾಗೂ ಪುಷ್ಟೀಕರಿಸುವ ಶಿಷ್ಟಾಚಾರವನ್ನು ಕಡ್ಡಾಯವಾಗಿ ಮುಂದುವರಿಸಬೇಕು.

ಆಡಳಿತಾತ್ಮಕ ಸಮಸ್ಯೆಗಳು, ವೃತ್ತಿ ಶಾಖೆಗಳ ನಿರ್ದಾರ ಎದುರಿಸುವಲ್ಲಿ ವ್ಯವಸ್ಥಿತ ವಿಧಾನವನ್ನು ಅನುಸರಿಸುವುದು.

ಶುಶ್ರೂಷಕರಿಗೆ ನಾಲ್ಕು ಮುಖ್ಯವಾದ ಜವಾಬ್ದಾರಿಗಳಿರುತ್ತದೆ: ಆರೋಗ್ಯವರ್ದನೆ, ರೋಗ ನಿವಾರಣೆ, ಆರೋಗ್ಯದ ಮರುಸ್ಥಾಪನೆ, ಆಯಾಸವನ್ನು ತಗ್ಗಿಸುವುದು.

ಶುಶ್ರೂಷೆ ಮಾಡುವಾಗ ಮಾನವ ಹಕ್ಕುಗಳನ್ನು ಗೌರವಿಸುವುದು ಶುಶ್ರೂಷಕರ ವಂಶವಾಹಿಯಲ್ಲೇ ಬೆಳೆದು ಬಂದಿದೆ. ಇದು ಸಾಂಸ್ಕೃತಿಕ ಹಕ್ಕು, ಜೀವನ ಸ್ವಾತಂತ್ರದ ಹಕ್ಕು, ಕೋವಿಡ್‌ನಂತಹ ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿ ಘನತೆಯಿಂದ ಚಿಕಿತ್ಸೆ ನೀಡುವುದನ್ನು ಒಳಗೊಂಡಿದೆ.

ಶುಶ್ರೂಷಕರ ಆರೈಕೆಯು ವಯಸ್ಸು, ಗುಣ, ಪಂಥ, ಸಂಸ್ಕೃತಿ, ಅಂಗವೈಕಲ್ಯ, ಲೈಂಗಿಕ ದೃಷ್ಟಿಕೋನ, ರಾಷ್ಟ್ರೀಯತೆ, ರಾಜಕೀಯ, ಬುಡಕಟ್ಟು, ಸಾಮಾಜಿಕ ಸ್ಥಾನಮಾನ ಈ ವಿಚಾರಗಳನ್ನು ಗೌರವಪೂರ್ವಕವಾಗಿ ಅನಿರ್ಬಂಧಿಸುತ್ತದೆ.

ಉತ್ತಮ ಗುಣಮಟ್ಟದ ಸೇವೆ ನೀಡುವಾಗ, ಸಮಸ್ಯೆಗಳನ್ನು ಪರಿಹರಿಸುವಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾದಾಗ ಋಣಾತ್ಮಕ ಫಲಿತಾಂಶ ಬಂದರೂ ಅದನ್ನು ಸಹಜವಾಗಿ ಒಪ್ಪಿಕೊಳ್ಳಬೇಕು.

ನೈತಿಕ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಶುಶ್ರೂಷಕರು ಅಪಾಯವನ್ನೆದುರಿಸಲು ಸಿದ್ಧವಾಗಿರಬೇಕು, ಪ್ರತಿವಾದಿಸಬೇಕು. ಭೌತಿಕ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಅಸ್ಪಷ್ಟವೂ ಅನಿಶ್ಚಿತವೂ ಆದ ವಿಚಾರಗಳನ್ನು ಸರಿಯಾಗಿ ಪರಿಶೀಲಿಸಿ ಅನಂತರ ಒಪ್ಪಿಕೊಳ್ಳಬೇಕು.

ಮಾನವರ ನಂಬಿಕೆ, ಹಕ್ಕು, ಕರ್ತವ್ಯಗಳು ಮತ್ತು ಗುರಿಯ ಬಗೆಗೆ ಶುಶ್ರೂಷಕರಿಗೆ ಸಂಪೂರ್ಣ ಅರಿವಿರಬೇಕು.

ನೈತಿಕ ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ನೀತಿಸಂಹಿತೆ ಆಯಾ ಹೇಳಿಕೆಗಳನ್ನು ಸಮಾನವಾಗಿ ಗ್ರಹಿಸಿ ಪರಿಶೀಲಿಸಿ ಮುನ್ನಡೆಯಬೇಕಾಗುತ್ತದೆ.

ರೋಗಿಗಳ ಆರೈಕೆಯಲ್ಲಿ ಸಹವರ್ತಿಗಳು ಮತ್ತು ವೃತ್ತಿಯನ್ನು ವಿಶೇಷತೆಯನ್ನು ಸಮರ್ಥವಾಗಿ ಪ್ರತಿಪಾದಿಸಬೇಕು. ನೈತಿಕತೆಯ ಗುಣಮಟ್ಟವನ್ನು ಸ್ಪಷ್ಟವಾಗಿ ಸಂವಹನ ಮಾಡಬೇಕು.

ಶುಶ್ರೂಷಕರಿಗೆ ನೈತಿಕ ಸಂಕಟವಾಗುವುದು (Moral Distress) ಅವರು ನಂಬಿದ ಮೌಲ್ಯಗಳಿಗೆ ಬಲವಾದ ಪೆಟ್ಟು ಬಿದ್ದಾಗ, ಸೇವೆ ನೀಡುವ ಸಂದರ್ಭದಲ್ಲಿ ಅವಶ್ಯ ತುರ್ತು ಉಪಕರಣಗಳ ಲಭ್ಯವಾದಾಗದಿದ್ದಾಗ ಅಸಮರ್ಪಕ ಆರೋಗ್ಯ ವ್ಯವಸ್ಥೆಯಲ್ಲಿ ಅನಿವಾರ್ಯವಾಗಿ ಕೆಲಸ ಮಾಡಬೇಕಾದಾಗ.

ಶುಶ್ರೂಷಕ ವೃತ್ತಿಯವರು ನೈತಿಕ ಸಂಕಟವನ್ನು ಅನುಭವಿಸಬಹುದಾದ ಇನ್ನಿತರ ಸಂಗತಿಗಳೆಂದರೆ, ಕೆಲಸದ ಹೊರೆ ಜಾಸ್ತಿಯಾದಾಗ, ಕೆಲಸದ ನಿಗದಿತ ಬದಲಾವಣೆಯಿಂದಾಗಿ ಬಳಲಿಕೆಯಾದಾಗ, ಅವಶ್ಯ ಆರೈಕೆಗಾಗಿ ಉಪಕರಣಗಳ ಅಲಭ್ಯವಾದಾಗ ಕುಟುಂಬದವರ ಒತ್ತಡದಿಂದ ಸದಾ ರೋಗಿಗಳೊಡನೆ ಇರಬೇಕಾದಾಗ, ವೈಯಕ್ತಿಕ ನಷ್ಟವನ್ನು ಅನುಭವಿಸಿದಾಗ – ಇಂತಹ ಸಂದರ್ಭಗಳಲ್ಲಿ ನೈತಿಕ ಸ್ಥಿತಿಸ್ಥಾಪಕತ್ವವನ್ನು (Moral Resilience) ಬೆಳೆಸಿಕೊಳ್ಳುವ ಅಗತ್ಯವಿದೆ.

ಸ್ವಯಂಜಾಗೃತಿಯನ್ನು ಬೆಳೆಸಿಕೊಳ್ಳುವುದು, ಸ್ವಯಂನಿಯಂತ್ರಣ ಸಾಮರ್ಥ್ಯ, ನೈತಿಕ ಸಾಮರ್ಥ್ಯ, ಸ್ಪಷ್ಟತೆ ಮತ್ತು ಆತ್ಮವಿಶ್ವಾಸದಿಂದ ಮಾತನಾಡುವುದು, ಸಂಪೂರ್ಣವಾಗಿ

ಶ್ರದ್ಧೆಯಿಂದ ಕಲಿಕೆಯಲ್ಲಿ ತೊಡಗುವುದು, ಇತರರೊಂದಿಗೆ ಸೌಹಾರ್ದಯುತವಾಗಿ ತೊಡಗಿಸಿಕೊಳ್ಳುವುದು, ನೈತಿಕ, ಸಾಂಸ್ಕೃತಿಕ ವಿಷಯಗಳ ಕುರಿತು ಅಭ್ಯಾಸ ಮಾಡುವುದು ಸೇರಿದಂತೆ ಬಹಳಷ್ಟು ಕೌಶಲ್ಯಗಳನ್ನು ಬೆಳೆಸಿಕೊಂಡರೆ ನೈತಿಕ ಸ್ಥಿತಿಸ್ಥಾಪಕತೆಯನ್ನು (Moral Resilience) ಬೆಳೆಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ.

ಶುಶ್ರೂಷಕರ ಮೂಲ ಉದ್ದೇಶ ಸೇವೆ ಸಲ್ಲಿಸುವುದೇ ಆದರೂ ಸಾಂಕ್ರಾಮಿಕ ಸ್ಫೋಟದಂತಹ ತುರ್ತು ಸಂದರ್ಭಗಳಲ್ಲಿ ಅಪಾಯಕಾರಿ ಹಾಗೂ ಆತಂಕಕಾರಿ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುವುದರಲ್ಲಿ ಮೌಲ್ಯವರ್ಧಿತ ಸಂಹಿತೆಯನ್ನು ಅವರು ಅನಿವಾರ್ಯವಾಗಿ ಪಾಲಿಸಬೇಕಾಗುತ್ತದೆ. ಅದರ ಜೊತೆಗೆ ಸಮುದಾಯ ಮತ್ತು ಸಮಾಜವನ್ನು ರಕ್ಷಿಸಲು ನೈತಿಕತೆಯ ದೃಷ್ಟಿಕೋನ ಇರಬೇಕಾದುದು ಅತ್ಯಗತ್ಯ. ಆರೋಗ್ಯಕ್ಷೇತ್ರದ ಅಗ್ರಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿರುವ ಶುಶ್ರೂಷಕರ ಅನುಭವ, ಜ್ಞಾನದ ಸದುಪಯೋಗವಾಗಬೇಕಾದರೆ ಅವರಿಗೆ ನೈತಿಕ ನೆಲೆಗಟ್ಟಿನಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡಬೇಕಾಗುತ್ತದೆ.

□

ಎನ್ನ ಕರಸ್ಥಲದಲ್ಲಿಯ ಲಿಂಗಕ್ಕೆ ಬಂದ
ಪದಾರ್ಥಂಗಳನರ್ಪಿಸುವೆನೆ? ಅರ್ಪಿಸಲಮ್ಮೆ
ಅದೇನು ಕಾರಣವೆಂದಡೆ:
ಎನ್ನ ಕಂಗಳು ಕಂಡವಾಗಿ, ಎನ್ನ ಶ್ರೋತ್ರಗಳು ಕೇಳಿದವಾಗಿ
ಎನ್ನ ಕೈಗಳು ಮುಟ್ಟಿದವಾಗಿ, ಎನ್ನ ನಾಸಿಕ ವಾಸಿಸಿತ್ತಾಗಿ
ಎನ್ನ ಜಿಹ್ವೆ ರುಚಿಸಿತ್ತಾಗಿ
ಇಂತಪ್ಪ ಎನ್ನ ಅಂಜಿಕೆಯ ನಿಮ್ಮ ಶರಣರು ಬಿಡಿಸಿದರಾಗಿ.
ಅದೆಂತೆಂದಡೆ:
ಎನ್ನ ಶ್ರೋತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ
ಎನ್ನ ನೇತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ
ಎನ್ನ ತ್ವಕ್ಕಿನಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ
ಎನ್ನ ಜಿಹ್ವೆಯಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ
ಎನ್ನ ನಾಸಿಕದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ
ಅಲ್ಲಲ್ಲಿ ಅರ್ಪಿತಂಗಳಾಗುತ್ತಿರ್ದವಾಗಿ
ಇನ್ನಂಜೆ ಅಂಜೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

ಉರಿಲಿಂಗಪೆದ್ದಿ

ಕಾಯಕದ ಬೆವರಲ್ಲಿದೆ ಕೈಲಾಸದ ಸಂತೃಪ್ತಿ

ವೆಂಕಟೇಶ ಕೆ. ಜನಾದ್ರಿ

ಈ ಜೀವಜಗತ್ತಿನಲ್ಲಿ ಪ್ರತಿಯೊಂದು ಜೀವಿಗೂ ಬೇಕಿರುವುದು ಬದುಕಿನ ಸಂತೃಪ್ತಿ. ಆ ಸಂತೃಪ್ತಿ ನಿಜವಾಗಿ ನೆಲೆಯಾಗಿರುವುದೇ ಆ ಜೀವಿಯ ಚಲನಶೀಲತೆಯಿಂದ. ಅಂದರೆ ಆ ಜೀವಿ ಮಾಡುವ ಕಾಯಕದಿಂದ. ಆ ಕಾಯಕ ಸ್ವತಃ ಆ ಜೀವಿ ತನ್ನ ಕಾಯ (ಶರೀರ) ದಿಂದಲೇ ಮಾಡಿರಬೇಕು. ಅಂತಹ ಕಾಯಕದ ಬೆವರಿನಲ್ಲಿರುವುದೇ ನಿಜವಾದ ಸಂತೃಪ್ತಿ. ಈ ಬಗೆಯ ಸಂತೃಪ್ತಿಯೇ ಕೈಲಾಸಕ್ಕೆ ಸಮಾನವಾಗಿರುತ್ತದೆ.

ಜೀವಿಗಳ ಈ ಬಗೆಯ ಕಾಯಕದ ನಡೆ ಜೀವಿಯೊಳಗೇ ಇರುವ ಶಿವನಿಗೆ ಮೆಚ್ಚುಗೆಯಾಗಿ ಆತ ಅಹುದಹುದೆಂದು ನೀಡುವ ಪ್ರತಿಫಲದಲ್ಲೊಂದಿಷ್ಟು ಭಾಗವನ್ನು ಅಗತ್ಯವಿದ್ದವರಿಗೆ ದಾಸೋಹಿಸಿದ ನಂತರ ತನಗಾಗಿ ಉಳಿಯುವುದೇ ಆ ಜೀವಿಗೆ ಪ್ರಸಾದವಾಗಿರುತ್ತದೆ. ಅದಕ್ಕೆ ಶರಣರ ಧ್ಯೇಯವಾಕ್ಯವೇ **"ಕಾಯಕವೇ ಕೈಲಾಸ"** ಎಂಬುದಾಗಿತ್ತು. ಇದನ್ನು ಸಾಧಿಸಲು ಕಾಯಕ–ದಾಸೋಹ–ಪ್ರಸಾದ ಎಂಬ ತತ್ವವನ್ನು ಪಾಲಿಸಬೇಕಿತ್ತು. ಈ ರೀತಿ ಕಾಯಕ ಮಾಡುವ ಕಾಯವೇ ಆ ಶ್ರಮಜೀವಿಯ ದೇವಾಲಯವಾಗಿತ್ತು. ಈ ಕಾಯವೆಂಬ ದೇವಾಲಯದೊಳಗಿರುವ ಜೀವಾತ್ಮವೇ ಆ ಜೀವಿಗೆ ದೇವರಾಗಿತ್ತು. ಅದಕ್ಕೆ ಶರಣರು ಕಂಡುಕೊಂಡಂತೆ **"ಕಾಯವೇ ಕೈಲಾಸ"** ಎಂದರೂ ಒಪ್ಪಿಕೊಳ್ಳಬೇಕಾಗಿರುತ್ತದೆ.

ಬದುಕಿನ ಸುಖಕರವಾದ ವೃತ್ತದಲ್ಲಿ ಸಮೃದ್ಧಿಯಿಂದ ಜೀವಿಸುತ್ತಿರುವಾಗ ಅಲ್ಲಿ ಪ್ರಗತಿಗೆ ಅವಕಾಶವಿರುವುದಿಲ್ಲ. ಕೇವಲ ಸುಖದಿಂದ ನಮ್ಮದೇ ವ್ಯೂಹದಲ್ಲಿ ನಾವುಳಿದುಕೊಂಡು ನೆಮ್ಮದಿಯಾಗಿದ್ದರೆ ಅದು ಕೇವಲ ಬೆಳವಣಿಗೆಯಾಗಬಹುದೇ ಹೊರತು ಪ್ರಗತಿಯಾಗಲು ಸಾಧ್ಯವಿಲ್ಲ. ಅದಕ್ಕೆ ನಮ್ಮ ಹಿರಿಯರು ಹೇಳುತ್ತಾರೆ ನೋಡಿ, **"ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು"**. ಕುಳಿತು ಉಂಡರೆ ಜೀವನ ರುಚಿಸದು, ಅದು ಕೇವಲ ತಿಂದುಂಡು ಬದುಕಿದ ಒಂದು ಜೀವ ಎಂಬ ಯಂತ್ರವಾಗಿರುತ್ತದೆ. ಈ ಕಾಯವೆಂಬ ಯಂತ್ರಕ್ಕೆ ಕಾಯಕವೆಂಬ ಚಲನಶೀಲತೆ ಬೇಕು. ಕಾಯಕ ಮಾಡುತ್ತಾ ಚಲನಶೀಲವಾಗಿ ಹೋರಾಟದ ಭಾವದಲ್ಲಿ ಕಾಯವು ಜಂಗಮಗೊಳ್ಳುತ್ತಿದ್ದರೆ ಆ ಬದುಕು ಮತ್ತು ಬದುಕಿನ ಕ್ರಮವೆರಡೂ ಹೆಚ್ಚು ಸಾರ್ಥಕವಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಒಂದಂಶವೆಂದರೆ ಕಾಯಕವನ್ನು ಎಲ್ಲ ಜೀವಿಗಳು ತಮ್ಮ ಕಾಯದಿಂದಲೇ ಮಾಡಿದಾಗ ಅಲ್ಲೊಂದು ಸಂತೃಪ್ತಿಯ ಉಂಟಾಗಿ ಆ ಜೀವಿಯೊಳಗೇ ಇರುವ ದೇವ ಮೆಚ್ಚಿ ಅಹುದಹುದೆನ್ನುತ್ತಿರುತ್ತಾನೆ. ಹಸಿವಿನಿಂದ ಕಂಗೆಟ್ಟಾಗ ಯಾರೋ ಊಟ ಮಾಡುವುದನ್ನು ನೋಡಿದಾಗ ನಮ್ಮ ಹಸಿವು ಹಿಂಗಲಾರದು. ಹಾಗೆಯೇ ಯಾರೋ ಒಬ್ಬರು ಯಾವುದೋ ಒಂದು ಒಳ್ಳೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನೋಡಿದಾಗ ಅವರು ಮಾಡಿದ ಆ ಕಾರ್ಯದ ಸಂತೃಪ್ತಿ ನಮ್ಮದಾಗಲು ಸಾಧ್ಯವಿಲ್ಲ.

ಭಾರತಕ್ಕೆ ಬ್ರಿಟೀಷರು ಬರುವ ಮುಂಚೆ ನಮ್ಮವರಿಗೆ ಸ್ವಾತಂತ್ರ್ಯ ಎಂದರೆ ಏನೆಂಬ ಪರಿಪೂರ್ಣ ಕಲ್ಪನೆ, ಅದರ ನಿಜವಾದ ರುಚಿಯ ಪರಿಚಯ ಇರಲಿಲ್ಲ. ಅವರು ಬಂದು ನಮ್ಮ ಸ್ವಾತಂತ್ರ್ಯ ಕಿತ್ತುಕೊಂಡು ತಮ್ಮ ಅಧಿಕಾರ ಚಲಾಯಿಸಿದಾಗ ನಾವೇನೋ ಕಳೆದುಕೊಂಡಿರುವ ಅರಿವು ಮೂಡತೊಡಗಿ ನಾವು ಕಳೆದುಕೊಂಡ ಸ್ವಾತಂತ್ರ್ಯದ ಅರಿವಾಗತೊಡಗಿತು. ಅದನ್ನು ಮರಳಿ ಪಡೆಯುವ ಹೋರಾಟದಲ್ಲಿ ಭಾಗಿಯಾಗಿ ಅದನ್ನು ಪಡೆದುಕೊಂಡಾಗ ಸ್ವಾತಂತ್ರ್ಯದ ಅರ್ಥ ಹೆಚ್ಚಿನ ರೀತಿಯಲ್ಲಿ ಅರಿವಾಗಿ ಅದರ ಫಲಿತ ಮತ್ತಷ್ಟು ವಿಸ್ತಾರವಾಗತೊಡಗಿತು. ನಮ್ಮ ಪರಿಶ್ರಮದಿಂದ ಪಡೆದಿರುವುದರಲ್ಲಿ ಯಾವಾಗಲೂ ಹೆಚ್ಚಿನ ಸಂತೃಪ್ತಿ ಇರುತ್ತದೆ ಎಂಬುದೇ ಕಾಯಕಪ್ರಜ್ಞೆ.

ಹೀಗೆ ಪ್ರತಿಯೊಂದನ್ನು ನಮ್ಮ ಸ್ವಪ್ರಯತ್ನದಿಂದಲೇ ಪಡೆದುಕೊಂಡಾಗ ಅದರಲ್ಲಿಯ ತನುಮನಭಾವದ ಸಂತೃಪ್ತಿಗೆ ಬೆಲೆಕಟ್ಟಲಾಗದು. ಈ ತತ್ವವನ್ನು ಮನುಷ್ಯರಿಗಿಂತ ಸಕಲ ಜೀವಿಗಳು ಚೆನ್ನಾಗಿ ತಿಳಿದುಕೊಂಡಿವೆ ಎನಿಸುತ್ತದೆ. ಅದಕ್ಕೇ ಅವೆಲ್ಲ ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಂಡು ನೆಮ್ಮದಿಯಿಂದ ಸೇವಿಸಿ, ತಮ್ಮೊಂದಿಗಿನ ಇತರೆ ಜೀವಿಗಳಿಗೂ ಸಾಧ್ಯವಾದಷ್ಟು ಹಂಚಿಕೊಂಡು ತಮಗೆ ಅರಿವಿಲ್ಲದಂತೆ ಅರ್ಥಪೂರ್ಣವಾಗಿ ಜಂಗಮ ದಾಸೋಹ ಮಾಡುವ ಮೂಲಕ ಶರಣತ್ವದ ಬದುಕನ್ನು ಬದುಕುತ್ತಿವೆ. ಅವು ಮನುಷ್ಯರಿಗಿಂತ ಹೆಚ್ಚು ನೆಮ್ಮದಿಯಾಗಿ ಬದುಕಿನ ಪ್ರತಿ ಕ್ಷಣವೂ ತಮಗೆ ತಿಳಿದ ಕಾಯಕ ಮಾಡುವ ಮೂಲಕ ಜಂಗಮಕ್ಕೆ ತಮ್ಮ ಕಾಯವನ್ನು ಸವೆಸುತ್ತಾ ಜಂಗಮಗೊಳ್ಳುತ್ತಲೇ ತಮ್ಮಿರುವಿಕೆಯನ್ನು ಸತ್ಪಾತ್ರಕ್ಕೀಡಾಗಿಸಿಕೊಳ್ಳುತ್ತಿರುತ್ತವೆ.

ಕೊರೊನಾ ದುರಿತ ಕಾಲದಲ್ಲಿ ಮುನಿಸಿಕೊಂಡಿದ್ದ ಪ್ರಕೃತಿ ಮನುಷ್ಯರಿಗೆ ಪಾಠ ಕಲಿಸುವುದಕ್ಕಾಗಿಯೇ ಕೊರೊನಾ ಎಂಬ ಜಾಡ್ಯದ ಮೂಲಕ ತನ್ನ ದರ್ಶನ ಮಾಡಿಸಿದೆ ಎನಿಸುತ್ತದೆ. ಕೋವಿಡ್ ವೈರಾಣು ಪಸರಿಸುತ್ತಿರುವ ದುರಿತ ಕಾಲದಲ್ಲಿ ಎಲ್ಲರನ್ನು ಸುಮ್ಮನೇ ಕಟ್ಟಿಹಾಕಿ ಕೂರಿಸಿಬಿಟ್ಟಿತ್ತು. ಇದರಿಂದ ಕ್ರಮೇಣ ಶ್ರಮದ ದುಡಿಮೆ ಕಡಿಮೆಯಾಗಿ ದೈಹಿಕ ಶ್ರಮವಿಲ್ಲದೇ ಆರೋಗ್ಯ ಹದಗೆಡುವುದರ ಜೊತೆಗೆ, ನಮ್ಮ ಪರಿಶ್ರಮದಿಂದ ಏನನ್ನಾದರೂ ಪಡೆದುಕೊಂಡಾಗ ಸಿಗುವ ಸಂತೃಪ್ತಿ ಸಿಗದೇ ಬದುಕಿನಲ್ಲಿ ನೀರಸತನ ಕಾಣಿಸಿತು. ನಕಾರಾತ್ಮಕತೆ ಹೆಚ್ಚು ಮುನ್ನೆಲೆಗೆ ಬಂತು.

ಕೆಲಸದ ಬದುಕನ್ನು ಬಹಳಷ್ಟು ಪ್ರೀತಿಸಿ ಸತ್ಯನಿಷ್ಠೆಯಿಂದ ಅಪ್ಪಿಕೊಂಡಾಗ ಅದುವೇ ಕಾಯಕವಾಗಿ ಆ ಕಾಯಕವೇ ಒಂದು ಧ್ಯಾನವಾಗುತ್ತದೆ. ಆ ಧ್ಯಾನವೇ ಪೂಜೆಯಾಗಿ ಒಳಗಿರುವಾತನನ್ನು ಮೆಚ್ಚಿಸಿ ಅಹುದಹುದೆನ್ನುವಂತೆ ಮಾಡುವ ಶಿವಯೋಗವಾಗುತ್ತದೆ. ನಮ್ಮನ್ನು ನಾವು ಕಾಯಕದಲ್ಲಿ ತೊಡಗಿಸಿಕೊಂಡಾಗ ನಮ್ಮ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ನಮಗೆ ಅಗತ್ಯವಿರುವ ರೋಗ ನಿರೋಧಕ ಶಕ್ತಿಯು ನಮ್ಮ ಕಾಯಕದಲ್ಲಿಯೇ ಲಭ್ಯವಿರುವುದನ್ನರಿಯದ ನಾವು ನಮ್ಮ ರೋಗ ನಿರೋಧಕ ಶಕ್ತಿ ವೃದ್ಧಿಸಿಕೊಳ್ಳಲು ಮತ್ತೊಂದಕ್ಕೆ ಮೊರೆಹೋಗುತ್ತಿರುವುದು ನಮ್ಮ ಜ್ಞಾನದ ಕೊರತೆಯನ್ನು ತೋರುತ್ತದೆ.

ಇತರೆ ಜೀವಿಗಳಂತೆ ವ್ಯಕ್ತಿ ಸದಾ ಏನನ್ನಾದರೂ ಸಂಪಾದಿಸಬೇಕು, ಸಾಧಿಸಬೇಕು. ಕೀರ್ತಿ, ಹಣ, ಅಂತಸ್ತು, ಅಧಿಕಾರ ಗಳಿಸಬೇಕೆಂಬ ತುಡಿತದಲ್ಲಿ ಕಾಯಕ ಪ್ರಜ್ಞೆ ಬೆಳೆಸಿಕೊಂಡಾಗಲೇ ಆತನ ಇರುವಿಕೆಯಲ್ಲಿ ಜೀವಂತಿಕೆಯ ಲಕ್ಷಣವಿರುತ್ತದೆ. ಕಾಯಕ ಮಾಡಲು ಅಗತ್ಯವಿರುವ ಹಲವು ಪರಿಕರಗಳಲ್ಲಿ ನಮ್ಮೊಳಗಿರುವ ಕಾಯಕ ಮಾಡಬೇಕೆನ್ನುವ ಉತ್ಸಾಹದ ಪ್ರೇರಣೆಯೇ ಬಂಡವಾಳವಾಗಿರುತ್ತದೆ. ಈ ಬಗೆಯ ಕಾಯಕ ಮಾರ್ಗದಿಂದ ಶರಣತ್ವವನ್ನು ಕಂಡುಕೊಳ್ಳುವ ಪರಿಯನ್ನು ಹನ್ನೆರಡನೇ ಶತಮಾನದ ಶರಣರು ಅರಿತಿದ್ದರು.

ವಿಶೇಷವಾಗಿ ಶರಣೆ ಆಯ್ದಕ್ಕಿ ಲಕ್ಕಮ್ಮ ಮತ್ತವಳ ಶರಣ ಪತಿ ಆಯ್ದಕ್ಕಿ ಮಾರಯ್ಯ "ಕಾಯಕ" ಪ್ರಜ್ಞೆಯನ್ನು ಅನುಭವಿಸಿ ಆಧ್ಯಾತ್ಮಿಕ ನೆಲೆಯಲ್ಲಿ ಅನುಭಾವಿಸಿ ಅದ್ಭುತವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದವರು. ತಮ್ಮದೇ ಕಾಯದಿಂದ ಮಾಡುವ ಕಾಯಕದಲ್ಲಿ ಕಂಡುಕೊಳ್ಳುವ ಕೈಲಾಸದ ಮುಂದೆ ಅವರಿಗೆ ಉಳಿದೆಲ್ಲವೂ ಶೂನ್ಯವಾಗಿತ್ತು. ಆಯ್ದಕ್ಕಿ ಮಾರಯ್ಯನ ಒಂದು ವಚನ ಹೀಗಿದೆ.

ಕಾಯಕದಲ್ಲಿ ನಿರತನಾದಡೆ,
ಗುರು ದರ್ಶನವಾದಡೂ ಮರೆಯಬೇಕು.
ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದರೂ ಹಂಗೂ ಹರಿಯಬೇಕು,
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

ಎಂದು "ಅಮರೇಶ್ವರ ಲಿಂಗ" ಎಂಬ ವಚನಾಂಕಿತದಲ್ಲಿ ಕಾಯಕವೆಂದರೆ ಏನು, ಮತ್ತದು ಹೇಗಿರಬೇಕೆಂದಿದ್ದಾರೆ. ಇಲ್ಲಿ ಕಾಯಕ ಮತ್ತು ದಾಸೋಹಂಭಾವಕ್ಕೆ ಹೆಚ್ಚಿನ ಮಹತ್ವವಿದೆ. ನಿಸರ್ಗದತ್ತವಾದ ಎಲ್ಲವೂ ತಮ್ಮ ತಮ್ಮ ಪಾಲಿನ ಕಾಯಕವನ್ನು ಮಾಡುತ್ತಿವೆ. ಸೂರ್ಯನಿಗೆ ಬೆಳಕು ನೀಡುವ, ಚಂದ್ರನಿಗೆ ಬೆಳದಿಂಗಳನ್ನು ಕೊಡುವ, ಭೂಮಿಗೆ ಸೃಷ್ಟಿಕ್ರಿಯೆಯ, ಪಶುಪಕ್ಷಿಗಳಿಗೆ ಜೀವ ಜಾಲದ ಕೊಂಡಿಗಳಾಗುವ, ಕೀಟಗಳಿಗೆ ಪರಾಗಸ್ಪರ್ಶದ ಕಾಯಕ... ಹೀಗೆ ಎಲ್ಲವೂ ತಮ್ಮ ತಮ್ಮ ಕಾಯದಿಂದಲೇ ತಮ್ಮ ತಮ್ಮ ಕಾಯಕದಲ್ಲಿ ತಲ್ಲೀನವಾಗಿರುವಾಗ ಇವರೆಲ್ಲರೊಳಗೊಂದಾಗಿರುವ ಮನುಷ್ಯ ಸಹ ಕಾಯಕ

ಜೀವಿಯಾಗಿರಲೇಬೇಕಲ್ಲವೆ? ಮತ್ತೆ ಅವುಗಳಂತೆ ಇತರರಿಗಾಗಿ ತಮ್ಮನ್ನು ಸವೆಸಿಕೊಳ್ಳುವ ಮೂಲಕ ದಾಸೋಹಿಯಾಗಬೇಕಲ್ಲವೆ?

ಕಾಯಕವೇ ಎಲ್ಲದಕ್ಕೂ ಆಧಾರವಾಗಿರುವುದು ಕಾಯಕವಿಲ್ಲದ ಜೀವ ಜಗತ್ತು ನಿಷ್ಕ್ರಿಯೆಯಾಗಿಬಿಡುತ್ತದೆ. ಶರಣರ ಪರಿಕಲ್ಪನೆಯಲ್ಲಿ ಗುರು, ಲಿಂಗ, ಜಂಗಮವೆಲ್ಲವೂ ಆಧಾರವಿಲ್ಲದಂತಾಗುತ್ತದೆ. ಈ ಮೂರರ ಇರುವಿಕೆ ಮತ್ತು ರಕ್ಷಣೆಯೂ ಕಾಯಕದಲ್ಲಿದೆ. ಕಾರಣ ಕಾಯಕದಲ್ಲಿ ತಲ್ಲೀನವಾದಾಗ ಗುರುದರ್ಶನ, ಲಿಂಗಪೂಜೆ, ಜಂಗಮಸೇವೆಯ ಯೋಚನೆಯನ್ನು ಸಹ ಮಾಡಬೇಡ. ಏಕೆಂದರೆ ಕಾಯಕದಲ್ಲಿಯೇ ಇವೆಲ್ಲವೂ ಒಳಗೊಂಡಿವೆ. ಕಾಯಕ ಬಿಟ್ಟರೆ ಇವೆಲ್ಲವೂ ದೂರವಾದಂತೆಯೇ ಎಂಬ ತತ್ವವಿಲ್ಲಿದೆ. ಇಡೀ ಅಮರೇಶ್ವರ ಲಿಂಗವೇ (ಮಾರಯ್ಯನ ವಚನಾಂಕಿತ ಮತ್ತು ಆತ ನಂಬಿರುವ ದೈವಸ್ವರೂಪ) ಕಾಯಕದೊಳಗಿಂಬಿಟ್ಟುಕೊಂಡಿದೆ ಎನ್ನುತ್ತಾರೆ.

ಕಾಯಕ ಅನ್ನೋದನ್ನು ನಮ್ಮ ಕಾಯದಿಂದ ಮಾಡುವ ಒಂದು ಪೂಜೆಯನ್ನಾಗಿಸಿಕೊಳ್ಳಬೇಕು. ಕಾಯಕದಲ್ಲಿ ಸಾಕ್ಷಿಪ್ರಜ್ಞೆ ಇರಬೇಕು. ಸತ್ಯನಿಷ್ಠವಾದ ಕಾಯಕದಿಂದಲೇ ನಮಗೆ ಒಂದಿಷ್ಟು ಸಂತೃಪ್ತಿ ದೊರೆಯುತ್ತದೆ. ಅದರಲ್ಲಿ ಬಂದಿರುವುದನ್ನು ಅಗತ್ಯವಿದ್ದವರಿಗೆ ಹಂಚಿಕೊಂಡು ನಾವು ಉಪಯೋಗಿಸಿದಾಗಲೇ ಅದು ನಮಗೆ ಪ್ರಸಾದವಾಗುತ್ತದೆ ಎಂಬ ಶರಣರ ಸೂತ್ರವನ್ನರಿಯಬೇಕಿದೆ. ಈ ರೀತಿಯ ಕಾಯಕದಲ್ಲಿ ನಿರತರಾದಾಗ ಲಿಂಗಪೂಜೆಯನ್ನು ಮರೆತರೂ ಚಿಂತೆಯಿಲ್ಲ. ಜಂಗಮ ಮುಂದಿದ್ದರೂ ಆತನಿರುವಿಕೆಯ ಹಂಗು ಹರಿಯಬೇಕೆನ್ನುತ್ತಾರೆ.

ಈ ಎಲ್ಲಾ ಸಂದರ್ಭದಲ್ಲಿ ನಮ್ಮರಿವಿನಲ್ಲಿರಬೇಕಾಗಿರುವುದು ಕೇವಲ ಕಾಯಕ. ಮತ್ತಂತಹ ಕಾಯಕವೇ ಕೈಲಾಸವೆಂಬ ಸರಳ ತತ್ವವನ್ನರಿಯಬೇಕು. ಮಾರಯ್ಯನ ಜೀವಾತ್ಮದ ದೇವರಾಗಿದ್ದ ಅಮರೇಶ್ವರಲಿಂಗವೇ ಆತನ ಕಾಯಕದೊಳಗೊಂದಾಗಿರುವಾಗ ಆತನಿಗೆ ಮತ್ತಾವ ದೇವನಿದ್ದಾನೆ? ಕಾಯಕದಿಂದ ಹೊರತಾದ ಬೇರೆ ದೇವರಿದ್ದರೂ, ಬೇರೊಂದು ದೈವವಿದ್ದರೂ ಅದಕ್ಕಿಂತ ಕಾಯಕವೆಂಬ ಕೈಲಾಸದಲ್ಲಿ ನಾವು ನಿರತರಾಗಿ ಪೂಜೆ ಮಾಡುತ್ತಿರುವ ಕಾರಣ ನಮಗದೇ ಅಂತಿಮ ಸತ್ಯ. ಲೋಕ ಚುಂಬಕ ಶಕ್ತಿಯಾಗಿರುವ ಬಸವಣ್ಣ ಎಂದಾಕ್ಷಣ ಕಾಯಕವೇ ಕೈಲಾಸ ಎಂಬ ಮಾತು ನೆನಪಾಗುತ್ತದೆ. ಆದರೆ ಈ ಪರಿಕಲ್ಪನೆಯನ್ನು ಕೊಟ್ಟವರು ಆಯ್ದಕ್ಕಿ ಮಾರಯ್ಯ ಶರಣರು. ಬಸವಣ್ಣ ವಚಿಸಿದ್ದು ಕಾಯವೇ ಕೈಲಾಸ ಎಂದು.

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಗಾಂಧೀಜಿ, ವಿನೋಬಾ ಭಾವೆಯವರಂತಹ ನಾಯಕರೆಲ್ಲ ಹೋರಾಟದ ಜೊತೆಗೆ ತಮ್ಮೊಂದಿಗಿರಿಸಿಕೊಂಡಿದ್ದ ಕ್ರಿಯಾಶೀಲತೆ ಎಂದರೆ ನೂಲುವ ಕಾಯಕ, ಜನಜಾಗೃತಿಯ ಲೇಖನಗಳನ್ನು ಬರೆಯುವ ಕಾಯಕ ಇತ್ಯಾದಿ ಕ್ರಿಯೆಗಳನ್ನು ಮೈಗೂಡಿಸಿಕೊಂಡಿದ್ದರು. ನಮ್ಮ ನಮ್ಮ ಕಾರ್ಯಗಳನ್ನು ಸ್ವತಃ ನಾವೇ

ಮಾಡಿಕೊಳ್ಳುವಿಕೆಯಲ್ಲಿ ಅದೆಷ್ಟೋ ಸಂತೃಪ್ತಿ ಇರುತ್ತದೆ. ನಡೆದುಕೊಂಡು ಹೋಗುವುದು, ಬಟ್ಟೆಗಳನ್ನು ಶುಚಿಗೊಳಿಸಿಕೊಳ್ಳುವುದು, ಇವೆಲ್ಲ ಬಹುವಾಗಿ ಸಂತಸ ನೀಡುವವು. ರೋಗ ನಿರೋಧಕ ಶಕ್ತಿ ವೃದ್ಧಿಸಲು ಪ್ರಮುಖವಾಗಿ ನಾವೆಲ್ಲ ಕಾಯಕ ಜೀವಿಗಳಾಗಬೇಕು. ಸಕಲ ಜೀವಿಗಳೂ ಸಹ ತಮ್ಮದೇ ಕಾಯದ ಮೂಲಕ ಒಂದಲ್ಲ ಒಂದು ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತವೆ. ಆದರೆ ಬಹಳಷ್ಟು ಸಂದರ್ಭದಲ್ಲಿ ಮನುಷ್ಯ ಪರಾವಲಂಭಿಯಾಗಿರುವದನ್ನು ಗಮನಿಸಬೇಕಿದೆ. ಹೀಗಾಗಿಯೇ ಲೋಭಿತನ ಹೆಚ್ಚುತ್ತಿದೆ.

ಇಂತಿಪ್ಪ ಆಯ್ದಕ್ಕಿ ಮಾರಯ್ಯ ಮತ್ತವರ ಶರಣ ಸತಿ ಲಕ್ಕಮ್ಮನವರು ಪ್ರತಿಪಾದಿಸಿದ ಕಾಯಕವನ್ನು ತಮ್ಮ ಕಾಯದಲ್ಲಿ ಮೈಗೂಡಿಸಿಕೊಂಡಿದ್ದ ಅಂದಿನ ಶರಣರ ಬದುಕು, ಮತ್ತವರು ಕಂಡುಕೊಂಡಿದ್ದ ಅನುಭಾವಿಕ ಜೀವನ ದರ್ಶನ ಇಂದಿಗೂ ಸಕಲ ಜೀವಿಗಳಿಗೆ ಮಾದರಿಯಾಗಿದೆ. ಶರಣರ ಈ ಬಗೆಯ ತತ್ವವೇ ಪದಾರ್ಥ ಕಾಯವಾಗಿದ್ದ ಜೀವಿಯೊಂದು ತನ್ನ ಕಾಯಕದಿಂದ ತನ್ನ ನಡೆನುಡಿಯಿಂದ ತನ್ನ ಇರುವಿಕೆಯಿಂದ ತನ್ನನ್ನು ಮತ್ತು ತನ್ನ ಕಾಯವನ್ನು ಪ್ರಸಾದವಾಗಿಸಿಕೊಂಡು ಸತ್ಪಾತ್ರಕ್ಕೀಡಾಗ ಬೇಕೆಂಬಾಶಯದಿಂದ ಜಂಗಮಕ್ಕೆಡೆಯಾಗುವುದನ್ನು ಅರಿಯಬೇಕಾಗಿದೆ.

"ಕಾಯಕದ ಬೆವರಲ್ಲಿದೆ ಕೈಲಾಸದ ಸಂತೃಪ್ತಿ" ಎಂಬಂತೆ ಶರಣರ ದೃಷ್ಟಿಯಲ್ಲಿ ಪ್ರತಿ ಜೀವಿ ತನ್ನ ಕಾಯದಿಂದ ಮಾಡುವ ಕಾಯಕವೇ ದಿವ್ಯ ಔಷಧಿಯಾಗಿತ್ತು. ಮತ್ತದೇ ದೇವಪೂಜೆಯಾಗಿತ್ತು. ಯಾವುದೇ ಕಾರ್ಖಾನೆ, ಕಛೇರಿಯಲ್ಲಿ ತನಗೆ ವಹಿಸಿದ ಕೆಲಸವನ್ನು ಮಾಡದಿರುವ ತಪ್ಪಿತಸ್ಥ ಕೆಲಸಗಾರರಿಗೆ ನಿಯಮಾನುಸಾರ ಯಾವುದೇ ದಂಡ ವಿಧಿಸದೇ ಶಿಸ್ತಿನ ಕ್ರಮ ಜರುಗಿಸದೇ ಅವರಿಗೆ ಯಾವುದೇ "ಕೆಲಸ ಕೊಡದೇ ಸುಮ್ಮನೆ ಕುಳಿತು ಹೋಗುವ ಶಿಕ್ಷೆ" ವಿಧಿಸುವ ಪದ್ದತಿ ಅನುಸರಿಸಬೇಕು.

ಕಾಯಕವೇ ಕೈಲಾಸವೆಂದರಿತ ಕೆಲಸಗಾರರಿಗೆ ಕೆಲಸ ಕೊಡದೇ ಇರುವಂತಹ ಪರಿಣಾಮಕಾರಿ ಶಿಕ್ಷೆ ಮತ್ತೊಂದಿಲ್ಲ. ಕೊರೊನಾ ಕಾಲದಲ್ಲಿ ಸಹ ಹಲವಾರು ತಪ್ಪುಗಳನ್ನೆಸಗುತ್ತಿದ್ದ ಇಡೀ ವ್ಯವಸ್ಥೆಯ ಜನತೆಗೆ ಸುಮ್ಮನೆ ಕುಳಿತುಕೊಳ್ಳುವ ಶಿಕ್ಷೆಯನ್ನು ಇಡೀ ನಿಸರ್ಗವೇ ವಿಧಿಸಿತ್ತು ಎಂದುಕೊಳ್ಳಬಹುದು. ಇಂತಹ ಸಂದರ್ಭಗಳಿಂದಲೆ ಅಲ್ಲವೇ ನಮಗೆ ನಮ್ಮ ಕಾಯದಿಂದ ಮಾಡುವ ಕಾಯಕದ ಬೆವರಲ್ಲಿರುವ ಕೈಲಾಸವೆಂಬ ಸಂತೃಪ್ತಿಯ ಭಾವದ ಇರುವಿಕೆಯ ಅರಿವಾಗುವುದು? ಈ ಪ್ರಶ್ನೆಯಲ್ಲಿರುವ ಸತ್ಯವನ್ನರಿಯ ಬೇಕಷ್ಟೇ.

□

ಮಾತೃವಾತ್ಸಲ್ಯದ ಪೂಜ್ಯ ನಿರ್ವಾಣ ಶ್ರೀಗಳು

ನಗರ್ಲೆ ಶಿವಕುಮಾರ

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತಲೋಕ
ಶಿವಲೋಕ, ಶಿವಾಚಾರವಯ್ಯಾ
ಶಿವಭಕ್ತನಿದ್ದ ಠಾವೇ ದೇವಲೋಕ
ಭಕ್ತನಂಗಣವೆ ವಾರಣಾಸಿ, ಕಾಯಕವೆ ಕೈಲಾಸ
ಇದು ಸತ್ಯ ಕೂಡಲಸಂಗಮದೇವಾ

ಇರುವುದೊಂದೇ ಲೋಕ, ಅದು ಭೂಮಿ. ನಮ್ಮ ನಡವಳಿಕೆಯಿಂದ ನಾವು ಅನೇಕ ಲೋಕಗಳನ್ನು ಸೃಷ್ಟಿಸಿಕೊಳ್ಳುತ್ತೇವೆ. ಶಿವಾಚಾರಿಗಳಾದರೆ ಈ ಲೋಕ ಶಿವಲೋಕವಾಗುತ್ತದೆ. ನಮ್ಮ ಮನೆಯೇ ದೇವಲೋಕವಾಗುತ್ತದೆ. ಕಾಯವೇ ಕೈಲಾಸವಾಗುತ್ತದೆ ಎಂಬುದನ್ನು ಬಸವೇಶ್ವರರು ಜಗತ್ತಿಗೆ ತಮ್ಮ ವಚನಗಳ ಮೂಲಕ ಸಾರಿದರು. ಬಸವಾದಿ ಶರಣರ ಇಂಥ ಪರಂಪರೆಯನ್ನು ನಾಡಿನ ಮಠಗಳು ಮುಂದುವರಿಸಿಕೊಂಡು ಬರುತ್ತಿವೆ.

ಭಾರತೀಯ ಧರ್ಮ ವಿಶ್ವಧರ್ಮಗಳಲ್ಲಿ ಮಹತ್ವವನ್ನು, ಮನ್ನಣೆಯನ್ನು ಪಡೆದುಕೊಂಡಿದೆ. ವಿಶ್ವದ ಹಲವಾರು ಕಡೆ ಭಾರತೀಯ ಧರ್ಮ ಇಂದಿಗೂ ಜೀವಂತವಾಗಿದೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬುದು ಸನಾತನ ಧರ್ಮದ ಬೀಜಮಂತ್ರವಾಗಿದೆ. ಅಲ್ಲದೆ 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ತತ್ವ ಸಿದ್ಧಾಂತವನ್ನು ಹೊಂದಿದೆ. 'ಅಹಿಂಸಾ ಪರಮೋ ಧರ್ಮಃ' ಹಾಗೂ 'ನ ಹಿ ಜ್ಞಾನೇನ ಸದೃಶಂ' ಎಂಬ ಧ್ಯೇಯವಾಕ್ಯವು ನಮ್ಮ ದೇಶದ್ದಾಗಿದೆ. ನಮ್ಮ ದೇಶದ ಸಂಸ್ಕೃತಿ ಪರಂಪರೆಯನ್ನು ನಾಡಿನ ವಿವಿಧ ಧರ್ಮಗಳ ಹಲವಾರು ಮಠಗಳು ಜಗತ್ತಿಗೆ ಸಾಧಿಸಿ ತೋರಿಸುತ್ತ ಬಂದಿವೆ.

ಗುರುಪರಂಪರೆ : ಕರ್ನಾಟಕದ ಬಹುಮುಖ ಬೆಳವಣಿಗೆಯಲ್ಲಿ ವೀರಶೈವ–ಲಿಂಗಾಯತ ಮಠಗಳ ಪಾತ್ರ ಮಹತ್ವದ್ದಾಗಿದೆ. ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಲೋಕೋತ್ತರ ಕಾರ್ಯಗಳನ್ನು ಶ್ರೀಮಠಗಳು ಮಾಡುತ್ತಾ ಬಂದಿವೆ. ಸುತ್ತೂರು, ಸಿದ್ದಗಂಗೆ, ಚಿತ್ರದುರ್ಗ, ಬಾಳ್ಕಿ, ನಾಗನೂರು, ಗದಗ, ಸಿರಿಗೆರೆ ಸೇರಿದಂತೆ ಹಲವಾರು ಪ್ರಮುಖ ಮಠಗಳ ಬೆಂಗಳೂರು ದಕ್ಷಿಣ ಜಿಲ್ಲೆಯ

ಕನಕಪುರದ ಶ್ರೀ ದೇಗುಲಮಠವೂ ಒಂದು. ಶ್ರೀಮಠಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ.

14ನೇ ಶತಮಾನದ ಶ್ರೀ ಗೋಸಲ ಸಿದ್ಧಲಿಂಗ ಸ್ವಾಮಿಗಳವರ ಅನುಯಾಯಿಗಳಾದ ನೂರೊಂದು ವಿರಕ್ತರಲ್ಲಿ ಪೂಜ್ಯ ಶ್ರೀ ನಿರ್ವಾಣ ಸ್ವಾಮಿಗಳು ಪ್ರಮುಖರು. ಆರು ಶತಮಾನಗಳಿಗೂ ಮಿಗಿಲಾದ ಭವ್ಯ ಇತಿಹಾಸವನ್ನು ಹೊಂದಿರುವ ಶ್ರೀ ದೇಗುಲಮಠಕ್ಕೆ ಆದಿ ಶ್ರೀ ನಿರ್ವಾಣ ಸ್ವಾಮಿಗಳವರೇ ಪ್ರಥಮ ಗುರುಗಳು.

ಕರ್ನಾಟಕಕ್ಕೆ ಹೊಸ ದೃಷ್ಟಯನ್ನು ತಂದುಕೊಟ್ಟ 12ನೇ ಶತಮಾನದ ಬಸವಾದಿ ಶರಣರು ನುಡಿದಂತೆ ನಡೆದು ವಚನ ಸಾಹಿತ್ಯವನ್ನು ನೀಡಿ, ಕಾಯಕವೇ ಕೈಲಾಸ ಎಂಬುದನ್ನು ಕಾಯಕ ಮತ್ತು ದಾಸೋಹಗಳ ಮೂಲಕ ಜಗತ್ತಿಗೆ ತೋರಿಸಿದರು. ಶೂನ್ಯಸಿಂಹಾಸನದ ಪ್ರಥಮ ಅಧ್ಯಕ್ಷರಾದ ಅಲ್ಲಮಪ್ರಭುದೇವರ ಪರಂಪರೆಗೆ ಸೇರಿದ ಶ್ರೀ ನಿರಂಜನ ಸ್ವಾಮಿಗಳ ಗಣಸಮೂಹದ ನೂರೊಂದು ವಿರಕ್ತರಲ್ಲಿ ಆದ್ಯ ಶ್ರೀ ನಿರ್ವಾಣ ಸ್ವಾಮಿಗಳೇ ಮೊದಲಿಗರಾಗಿದ್ದಾರೆ. ಅವರು ತಮ್ಮ ಜೀವಮಾನದಲ್ಲಿ ಅನೇಕ ಪವಾಡಗಳನ್ನು ಮಾಡಿ ಜನಸಾಮಾನ್ಯರ ಮನಸ್ಸನ್ನು ಗೆಲ್ಲುವುದರ ಮೂಲಕ ಹಾಗೂ ಶ್ರೀಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಅಪಾರ ಭಕ್ತರ ಹೃದಯದಲ್ಲಿ ಚಿರಸ್ಥಾಯಿಯಾಗಿದ್ದಾರೆ.

ಅವರ ನಂತರ ಶ್ರೀ ದೇವಲಿಂಗ ಸ್ವಾಮಿಗಳು, ಶ್ರೀ ನಂಜಯ್ಯ ಸ್ವಾಮಿಗಳು, ಶ್ರೀ ನಾಗಲಿಂಗ ಸ್ವಾಮಿಗಳು, ಶ್ರೀ ಮಹಾಲಿಂಗ ಸ್ವಾಮಿಗಳು, ಶ್ರೀ ಹುಚ್ಚಪ್ಪ ಸ್ವಾಮಿಗಳು, ಶ್ರೀ ಮರುಳಸಿದ್ಧ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು, ಇಮ್ಮಡಿ ಶ್ರೀ ಮರುಳಸಿದ್ಧ ಸ್ವಾಮಿಗಳು, ಇಮ್ಮಡಿ ಶ್ರೀ ನಿರ್ವಾಣ ಸ್ವಾಮಿಗಳು, ಇಮ್ಮಡಿ ಶ್ರೀ ಹುಚ್ಚಪ್ಪ ಸ್ವಾಮಿಗಳು, ಇಮ್ಮಡಿ ಶ್ರೀ ಮಹಾಲಿಂಗ ಸ್ವಾಮಿಗಳು, ಮುಮ್ಮಡಿ ಶ್ರೀ ನಿರ್ವಾಣ ಸ್ವಾಮಿಗಳು, ಮುಮ್ಮಡಿ ಶ್ರೀ ಮಹಾಲಿಂಗ ಸ್ವಾಮಿಗಳು, ಪ್ರಸ್ತುತ ಶ್ರೀ ಚನ್ನಬಸವ ಸ್ವಾಮಿಗಳವರು ಶ್ರೀ ದೇಗುಲ ಮಠದ 15ನೇ ಪೀಠಾಧಿಪತಿಗಳಾಗಿದ್ದಾರೆ. ಇಡೀ ಗುರುಪರಂಪರೆಯ ದಿವ್ಯ ಪರಿಶ್ರಮದ ಫಲವಾಗಿ ಶ್ರೀಮಠವು ಇಂದು ನಾಡಿನಾದ್ಯಂತ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದೆ. ಶ್ರೀಮಠವು ಗ್ರಾಮೀಣ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಹಲವಾರು ವಿದ್ಯಾಸಂಸ್ಥೆಗಳನ್ನು ತೆರೆದು ಜಾತಿಮತಪಂಥಗಳ ಭೇದವಿಲ್ಲದೆ ಎಲ್ಲರಿಗೂ ಅಶನ ವಸನ ಜ್ಞಾನ ಇವುಗಳನ್ನು ನೀಡುತ್ತ ಬಂದಿದೆ.

ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು : ಶ್ರೀ ದೇಗುಲ ಮಠದ 13ನೇ ಪೀಠಾಧಿಪತಿಗಳಾಗಿ ಆಯ್ಕೆಯಾದ ವಟು ಶ್ರೀ ಶಿವರುದ್ರ ಸ್ವಾಮಿಗಳವರಿಗೆ ದಿನಾಂಕ 12.2.1977ರಂದು ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳೆಂಬ ನೂತನ ಅಭಿಧಾನದಿಂದ ಆಶ್ರಮ ದೀಕ್ಷೆ ನೀಡಲಾಯಿತು. ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯ ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ

ನಡೆದ ಕಾರ್ಯಕ್ರಮದಲ್ಲಿ ಹಲವಾರು ಜನ ಗಣ್ಯರು, ಮಂತ್ರಿಗಳು, ಭಕ್ತರು ಪಾಲ್ಗೊಂಡಿದ್ದರು.

ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಪೂರ್ವಾಶ್ರಮದ ತಂದೆಯವರಾದ ಶ್ರೀ ವೀರಭದ್ರಪ್ಪ ಮತ್ತು ತಾಯಿ ಶ್ರೀಮತಿ ತಾಯಮ್ಮನವರು ಟಿ. ನರಸೀಪುರ ತಾಲೂಕಿನ ಕುರುಬೂರು ಗ್ರಾಮದವರು. ಶ್ರೀಗಳವರು ದಿನಾಂಕ 20.5.1943ರಂದು ಜನಿಸಿದರು. ಅವರ ಕುಟುಂಬದವರ ಕಸುಬು ವ್ಯವಸಾಯ. ತಂದೆತಾಯಿಯರು ಗುರು–ಲಿಂಗ–ಜಂಗಮ ಪ್ರೇಮಿಗಳು, ಸೇವಾನಿಷ್ಠರು. ಶ್ರೀಗಳವರು ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಚಾಮರಾಜನಗರದಲ್ಲಿ ಪೂರೈಸಿದರು.

ಮೈಸೂರಿನ ಶಾರದಾವಿಲಾಸ ಮತ್ತು ಮಹಾರಾಜ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಶ್ರೀಗಳು ವಿಜ್ಞಾನ ಪದವೀಧರರಾದರು. 1968ರಿಂದ ಎರಡು ವರ್ಷ ಸರ್ಕಾರಿ ನೌಕರಿಯಲ್ಲಿದ್ದು ಧಾರ್ಮಿಕ ಜೀವನಕ್ಕೆ ಮಾರುಹೋಗಿ ಕೆಲಸಕ್ಕೆ ರಾಜೀನಾಮೆ ನೀಡಿದರು. ಕನಕಪುರ ಶ್ರೀ ದೇಗುಲ ಮಠಕ್ಕೆ ಅಧ್ಯಕ್ಷರಾಗುವ ಮೊದಲು ಚಾಮರಾಜನಗರ ತಾಲೂಕು ಮರಿಯಾಲದ ಶ್ರೀ ಮುರುಘಾಮಠದಲ್ಲಿ ಹಾಗೂ ಮಳವಳ್ಳಿ ತಾಲೂಕು ನೆಲ್ಲಿಗೆರೆ ಶ್ರೀಮಠದಲ್ಲಿ ಕೆಲವು ಕಾಲ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸಿದರು.

ಶೈಕ್ಷಣಿಕ, ಸಾಮಾಜಿಕ ಸೇವೆ : ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳವರ ಕರಕಮಲ ಸಂಜಾತರಾದ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ತಮ್ಮ ಗುರುಗಳು ಆರಂಭಿಸಿದ್ದ ಅನ್ನದಾನ, ವಿದ್ಯಾದಾನ, ಧರ್ಮಪ್ರಚಾರ, ಸಾಮಾಜಿಕ ಚಟುವಟಿಕೆಗಳು, ಕೃಷಿ ಕ್ಷೇತ್ರದ ವಿಸ್ತರಣೆಯನ್ನು ಮಾಡಿ ಶ್ರೀಮಠದ ಸಮಾಜಕಾರ್ಯಗಳನ್ನು ಮುಂದುವರೆಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಲಾಕಾಲೇಜುಗಳನ್ನು ತೆರೆದು ಹಳ್ಳಿಗಾಡಿನ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಒದಗಿಸಿದ್ದಾರೆ. ಶ್ರೀ ಸಿದ್ಧಗಂಗೆ ಮತ್ತು ಶ್ರೀ ಸುತ್ತೂರು ಪರಮಪೂಜ್ಯರುಗಳ ಒಡನಾಟ ಮತ್ತು ಮಾರ್ಗದರ್ಶನದಂತೆ ಶ್ರೀ ದೇಗುಲ ಮಠದಲ್ಲೂ ನಿರಂತರ ದಾಸೋಹ, ಸಂಸ್ಕೃತ ಅಧ್ಯಯನಕ್ಕೆ ಅವಕಾಶ, ಶ್ರಮದಾನ, ಅನಾಥ ಹಾಗೂ ವಿಶೇಷಚೇತನ ಮಕ್ಕಳಿಗೆ ಆಶ್ರಯ ಸೇರಿದಂತೆ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದಾರೆ.

ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಬಿ.ಇಡಿ. ಕಾಲೇಜು, ಬಾಲಕಿಯರ ಪ್ರೌಢಶಾಲೆ, ಅನಾಥ ಶಿಶು ಸಂರಕ್ಷಣಾಲಯ, ಕೈಗಾರಿಕಾ ತರಬೇತಿ ಸಂಸ್ಥೆ, ಸಂಸ್ಕೃತ ಪಾಠಶಾಲೆ, ವಸತಿಯುಕ್ತ ಪ್ರೌಢಶಾಲೆ, ನರ್ಸಿಂಗ್ ಕಾಲೇಜು, ಡಿ.ಇಡಿ. ಕಾಲೇಜು ಸೇರಿದಂತೆ ಹಲವಾರು ಶಿಕ್ಷಣಸಂಸ್ಥೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಡೆಸಿಕೊಂಡು ಬರುತ್ತಿರುವುದು ಶ್ರೀಮಠದ ಹೆಗ್ಗಳಿಕೆಯಾಗಿದೆ. ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ

ಮಾಡಿರುವ ಹಿರಿಯ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮತ್ತು ವಿದೇಶಗಳಲ್ಲಿ ಉನ್ನತ ಪದವಿಗಳನ್ನು ಹೊಂದಿರುವುದು ಎಲ್ಲರಿಗೂ ಅಭಿಮಾನದ ಸಂಗತಿ.

ಪೂಜ್ಯರು ಕೃಷಿ ಕ್ಷೇತ್ರದಲ್ಲಿಯೂ ಉತ್ತಮ ಸಾಧನೆಗೈದಿದ್ದಾರೆ. ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ವಿದ್ವಾಂಸರುಗಳಿಂದ ಉಪನ್ಯಾಸ, ಪ್ರವಚನಗಳನ್ನು ಹಾಗೂ ವಿಜಯಪುರದ ಜ್ಞಾನ ಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಅಧ್ಯಾತ್ಮ ಪ್ರವಚನವನ್ನು ಆಗಿಂದಾಗ್ಗೆ ಏರ್ಪಡಿಸುತ್ತಿದ್ದಾರೆ.

ಆಶ್ರಯದಾತರು : 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕನಕಪುರದಲ್ಲಿ ನಡೆದಾಗ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳಿಗೆ ಶ್ರೀಮಠದಲ್ಲಿ ಆಶ್ರಯ ಕೊಟ್ಟರಲ್ಲದೆ, ಅದೇ ಸಂದರ್ಭದಲ್ಲಿ ನಡೆದ ಚಿಣ್ಣರ ಮೇಳಕ್ಕೂ ಸ್ಥಳಾವಕಾಶ ಮಾಡಿಕೊಟ್ಟು ಸಮ್ಮೇಳನಗಳು ಯಶಸ್ವಿಯಾಗಿ ನಡೆಯಲು ಸಹಕಾರ ನೀಡಿದ್ದರು. ಇಂತಹ ಹಲವಾರು ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೆ ಶ್ರೀಮಠದಿಂದ ಸದಾ ನೆರವು ನೀಡುತ್ತಾ ಇದ್ದಾರೆ.

ಶ್ರೀ ದೇಗುಲ ಮಠದ ಪೂಜ್ಯ ನಿ.ಪ್ರ.ಸ್ವ. ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಪಟ್ಟಾಧಿಕಾರ ರಜತ ಮಹೋತ್ಸವ ಸಮಿತಿಯು 2005ರಲ್ಲಿ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳ ಅವರ ಅಧ್ಯಕ್ಷತೆಯಲ್ಲಿ ರೂಪುಗೊಂಡಿತು. 'ನಿರ್ವಾಣಶ್ರೀ' ಸವಿಸಂಚಿಕೆಯ ಸಂಪಾದಕ ಸಮಿತಿಯನ್ನು ರಚಿಸಿ ಪ್ರೊ. ಎನ್. ಬಸವಾರಾಧ್ಯರನ್ನು ಪ್ರಧಾನ ಸಂಪಾದಕರಾಗಿ, ಪ್ರೊ. ಟಿ.ಆರ್. ಮಹಾದೇವಯ್ಯನವರನ್ನು ಸಂಪಾದಕರಾಗಿ ಹಾಗೂ 13 ಜನ ವಿದ್ವಾಂಸರುಳನ್ನೊಳಗೊಂಡ ಸದಸ್ಯರುಗಳು ಅಭಿನಂದನ ಸಂಪುಟವನ್ನು ಸಿದ್ಧಪಡಿಸಿ, ಪೂಜ್ಯ ಶ್ರೀಗಳವರಿಗೆ ಅರ್ಪಿಸಿದರು. ಸುವರ್ಣಾಕ್ಷರಗಳಲ್ಲಿ ದಾಖಲಿಸಬೇಕಾದ ಸಂದರ್ಭ. ಇದಲ್ಲದೆ ಪೂಜ್ಯರನ್ನು ಕುರಿತು ಅನೇಕ ಕವನಗಳು, ಲೇಖನಗಳು ಪ್ರಕಟವಾಗಿವೆ ಎಂಬುದು ಹೆಮ್ಮೆಯ ವಿಷಯವಾಗಿದೆ.

ಮಾತೃಹೃದಯಿಗಳು : ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ವೈರಾಗಮೂರ್ತಿಗಳು, ವಿರಕ್ತರು, ಶಿವಯೋಗ ನಿಷ್ಠೆಯುಳ್ಳವರು, ಸಾಧಕರ ಪಾಲಿಗೆ ದಾರಿದೀಪವಾಗಿದ್ದರು, ಪ್ರಾಣಿಗಳಲ್ಲಿ ದಯೆಯನ್ನು ತೋರಿದವರು, ಮನದ ಸಂಕಲ್ಪ ವಿಕಲ್ಪಗಳನ್ನು ಅಳಿದವರು. ಜ್ಞಾನಕ್ರಿಯಾ ಸಮನ್ವಯ ದೃಷ್ಟಿ, ನಡೆನುಡಿಗಳ ಹೊಂದಾಣಿಕೆ, ವಿಶಾಲದೃಷ್ಟಿ, ಸದ್ಭಕ್ತಿ ಭಾವ ನಿರ್ಮಲ ಚಾರಿತ್ರ್ಯಗಳು ಪೂಜ್ಯರ ವ್ಯಕ್ತಿತ್ವವನ್ನು ರೂಪಿಸಿದ್ದವು. ನಾಡಿನ ಎಲ್ಲ ಮಠಾಧೀಶರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರು. ಸುತ್ತಮುತ್ತಲ ಮಠಗಳ ಬೆಳವಣಿಗೆಗೂ ಸಹಕಾರ ನೀಡುತ್ತಿದ್ದರು. ಅವರ ಧಾರ್ಮಿಕ ಜೀವನದಲ್ಲಿ ಪವಾಡದ ರೀತಿಯಲ್ಲಿ ಅನೇಕ ಘಟನೆಗಳು ನಡೆದು ಭಕ್ತರೇ ಸಾಕ್ಷಿ.

ಹಿರಿಯ ಶ್ರೀಗಳ ಆಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಶ್ರೀಗಳವರು ಹಿಂದಿನ ಎಲ್ಲ ಪೂಜ್ಯರುಗಳ ಪಂಕ್ತಿಯಲ್ಲಿ ನಿಲ್ಲುವಂತಹ ಅದ್ವಿತೀಯ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಶ್ರೀಮಠದ ಕೀರ್ತಿಯನ್ನು ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಐದು ದಶಕಗಳ ಕಾಲ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಮಠವನ್ನು ತ್ರಿವಿಧ ದಾಸೋಹದ ಕೇಂದ್ರವಾಗಿ ಬೆಳೆಸಿದ್ದಾರೆ. ತಮ್ಮ ಸರಳ ಸಜ್ಜನಿಕೆಯ ವ್ಯಕ್ತಿತ್ವದಿಂದ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಶ್ರೀ ಸುತ್ತೂರು ಮಠದೊಂದಿಗೆ, ಅಂದರೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಹಾಗೂ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೊಂದಿಗೆ ಕನಕಪುರದ ಶ್ರೀಗಳವರು ಅವಿನಾಭಾವ ಸಂಬಂಧ ಹೊಂದಿದ್ದರು. ಸುತ್ತೂರು ಶ್ರೀಮಠದ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. 2025ರಲ್ಲಿ ಮಳವಳ್ಳಿಯಲ್ಲಿ ನಡೆದ 1066ನೇ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಮಹೋತ್ಸವವು ಸುತ್ತೂರು ಜಗದ್ಗುರುಗಳವರ ದಿವ್ಯ ಸಾನ್ನಿಧ್ಯ ಹಾಗೂ ಕನಕಪುರ ಪೂಜ್ಯ ಶ್ರೀಗಳವರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು ಎಂಬುದು ಸ್ಮರಣೀಯ.

ಪೂಜ್ಯರ ಅನುಗ್ರಹ : ಕನಕಪುರ ಶ್ರೀ ದೇಗುಲಮಠದಲ್ಲಿ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ 19.10.2017 ರಿಂದ 18.11.2018 ರವರೆಗೆ ಒಂದು ತಿಂಗಳ ಕಾಲ ಕಾರ್ತಿಕ ಮಾಸದ ಪ್ರವಚನ ಕಾರ್ಯಕ್ರಮದ ಅಂಗವಾಗಿ "ದಿನಕ್ಕೊಂದು ಶರಣರ ಸಂದೇಶ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಒಂದು ದಿನ ಉಪನ್ಯಾಸದಲ್ಲಿ ಭಾಗವಹಿಸುವ ಅವಕಾಶವನ್ನು ಪೂಜ್ಯ ಶ್ರೀಗಳವರು ನನಗೂ ನೀಡಿದ್ದರೆಂಬುದು ನನ್ನ ಪಾಲಿನ ಸೌಭಾಗ್ಯ. ಶ್ರೀಮಠಕ್ಕೆ ಕೆಲವಾರು ಬಾರಿ ಭೇಟಿ ನೀಡಿ ಪೂಜ್ಯರ ಆಶೀರ್ವಾದವನ್ನು ಪಡೆದಿರುತ್ತೇವೆ. ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿರುವ ಕನಕಪುರ ಪೂಜ್ಯ ಶ್ರೀಗಳವರು ನಂಜನಗೂಡು ತಾಲೂಕು ನಗರ್ಲೆ ಗ್ರಾಮದಲ್ಲಿ 2015ರಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದ ಸಂದರ್ಭದಲ್ಲಿ ನಾನು ರಚಿಸಿದ್ದ 'ಹೊಂಬಾಳೆ' ಆಗ ಕೃತಿಯನ್ನು ಬಿಡುಗಡೆ ಮಾಡಿ ಆಶೀರ್ವದಿಸಿದ್ದರು. ದಿವ್ಯ ಸಾನ್ನಿಧ್ಯವನ್ನು ಸುತ್ತೂರು ಜಗದ್ಗುರುಗಳವರು ವಹಿಸಿದ್ದರೆಂಬುದನ್ನು ಸ್ಮರಿಸಬಯಸುತ್ತೇನೆ.

ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಶ್ರೀ ದೇಗುಲಮಠವನ್ನು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕವಾಗಿ ಬೆಳೆಸಿದ್ದಾರೆ. ವಿದ್ಯಾರ್ಥಿಗಳ ಬಗ್ಗೆ ಅವರು ತೋರುತ್ತಿದ್ದ ಪ್ರೀತಿ, ಭಕ್ತರ ಮೇಲೆ ಇಟ್ಟಿದ್ದ ವಾತ್ಸಲ್ಯಗಳು ಅವರ ಮಾತೃಹೃದಯದ ದ್ಯೋತಕವಾಗಿತ್ತು.

ಪೂಜ್ಯರು ವಹಿಸುತ್ತಿದ್ದ ಶ್ರಮ, ಕಾರ್ಯಕ್ಷಮತೆ, ಸಾಮಾಜಿಕ ಕಾಳಜಿಗಳು ಹಾಗೂ ಅವರು ನೆರವೇರಿಸಿರುವ ಕಾರ್ಯಕ್ರಮಗಳು ಇಂದು ಸಾಕ್ಷಿಯಾಗಿವೆ ಎಂದರೆ ತಪ್ಪಾಗಲಾರದು.

ಪೂಜ್ಯರು 2018ರಂದು ಶ್ರೀ ದೇಗುಲ ಮಠಕ್ಕೆ ನಿ.ಪ್ರ.ಸ್ವ. ಶ್ರೀ ಚನ್ನಬಸವ ಸ್ವಾಮಿಗಳವರನ್ನು ಕಿರಿಯ ಶ್ರೀಗಳನ್ನಾಗಿ ಆಯ್ಕೆ ಮಾಡಿದ್ದಲ್ಲದೆ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಶ್ರೀಮಠದ ಎಲ್ಲ ಕಾರ್ಯಚಟುವಟಿಕೆಗಳ ಪರಿಚಯ ಮಾಡಿಕೊಟ್ಟದ್ದು ವಿಶೇಷವಾದದ್ದು. ವಿದ್ಯಾವಂತರೂ ಜ್ಞಾನಿಗಳೂ ಆದ ಪೂಜ್ಯ ಶ್ರೀ ಚನ್ನಬಸವ ಸ್ವಾಮಿಗಳವರು ಎಂ.ಎ., ಪಿಹೆಚ್.ಡಿ ಪದವೀಧರರಾಗಿದ್ದು, ಶ್ರೀಮಠವನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಅಪರೂಪದ ವ್ಯಕ್ತಿತ್ವ ಹೊಂದಿದ್ದ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರು ತಮ್ಮ 84ನೇ ವಯಸ್ಸಿನಲ್ಲಿ 22.62026ರಂದು ಸಂಜೆ ಲಿಂಗೈಕ್ಯರಾದುದು ಭಕ್ತರ ಪಾಲಿಗೆ ದುಃಖದ ಸಂಗತಿ. ಪರಮಪೂಜ್ಯರ ಪುಣ್ಯ ಸಂಸ್ಮರಣೋತ್ಸವ 3.7.2026ರಂದು ಕನಕಪುರ ಶ್ರೀ ದೇಗುಲ ಮಠದಲ್ಲಿ, ಶ್ರೀ ಸುತ್ತೂರು, ಶ್ರೀ ಸಿದ್ಧಗಂಗಾ, ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರೂ ಸೇರಿದಂತೆ ನಾಡಿನ ವಿವಿಧ ಮಠದ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ನಡೆಯಿತು. ಪೂಜ್ಯ ಶ್ರೀಗಳವರನ್ನು ಲೇಖನದ ಮೂಲಕ ಸ್ಮರಿಸುತ್ತಿರುವುದು ಕೃತಜ್ಞತೆಯ ಭಾವವನ್ನು ನಮ್ಮಲ್ಲಿ ಮೂಡಿಸುತ್ತದೆ. ಪೂಜ್ಯ ಶ್ರೀಗಳವರ ದಿವ್ಯ ಚೈತನ್ಯಕ್ಕೆ ಶಿರಸಾಷ್ಟಾಂಗ ಪ್ರಣಾಮಗಳು.

□

ಸುಜ್ಞಾನವೆಂಬ ಭಾವವು ಗುರುವಿನಲ್ಲಿ ಸಾಹಿತ್ಯವು
ಜ್ಞಾನವೆಂಬ ಭಾವವು ಶಿಷ್ಯನಲ್ಲಿ ಸಾಹಿತ್ಯವು
ಮನವೆಂಬ ಭಾವವು ಲಿಂಗದಲ್ಲಿ ಸಾಹಿತ್ಯವು
ಲಿಂಗಕ್ಕೆ ಮಜ್ಜನ ಮಾಡಲಾಗದು, ಅದೇನು ಕಾರಣ ?
ಮನವೆಂಬ ಲಿಂಗವು ಭಾವದಲ್ಲಿ ಸಾಹಿತ್ಯವಾದ ಕಾರಣ
ಲಿಂಗಕ್ಕೆ ಗಂಧ ಧೂಪ ನಿವಾಳಿಯ ಕುಡಲಾಗದು, ಅದೇನು ಕಾರಣ ?

ಚನ್ನಬಸವಣ್ಣ

ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್‌ಗೆ ಕೌಂಟಿ ಎಕ್ಸಿಕ್ಯುಟಿವ್ ಭೇಟಿ

ಅಮೆರಿಕದ ಮೆರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್‌ಗೆ ಮಾಂಟ್‌ಗೋಮರಿ ಕೌಂಟಿಯ ಎಕ್ಸಿಕ್ಯುಟಿವ್‌ರವರಾದ ಶ್ರೀ ಮಾರ್ಕ್ ಎಲ್ರಿಚ್‌ರವರು ಜೂನ್ 5ರಂದು ಆಗಮಿಸಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿ ಮಾಡಿದರು. ಮಿಷನ್ನಿನ ಕಾರ್ಯ ಚಟುವಟಿಕೆಗಳನ್ನು ಹಾಗೂ ನಿರ್ಮಾಣವಾಗುತ್ತಿರುವ ದೇವಸ್ಥಾನ, ಸಮುದಾಯ ಭವನ ಮತ್ತು ಶೈಕ್ಷಣಿಕ ವಿಭಾಗಗಳ ಕಟ್ಟಡ ಸಂಕೀರ್ಣದ ಬಗ್ಗೆ ಮಾಹಿತಿ ಪಡೆದರು. ಎಲ್ಲ ಕಾರ್ಯಗಳು ಸುಸೂತ್ರವಾಗಿ, ವೇಗವಾಗಿ ನಡೆಯುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಟ್ರುಸ್ಟಾರ್ ಬ್ಯಾಂಕ್‌ನ (Trustar Bank) ಅಧ್ಯಕ್ಷರಾದ ಶ್ರೀ ಜಾರ್ಜ್ ಕಾನರ್ಸ್‌ರವರು, ಬ್ಯಾಂಕಿನ ಅಧಿಕಾರಿಗಳು, ಟೈಟಲ್ ಕಂಪನಿಯ (Title) ಶ್ರೀ ತನ್ವೀರ್‌ರವರು ಆಗಮಿಸಿದ್ದರು. ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್ ಹಾಗೂ ಬ್ಯಾಂಕ್ ನಡುವಿನ ಒಡಂಬಡಿಕೆಗೆ ಸಹಿ ಮಾಡಲಾಯಿತು. ಪೂಜ್ಯರು ಎಲ್ಲ ಅತಿಥಿಗಳನ್ನು ಗೌರವಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಶ್ರೀ ಸುಭಾಷ್ ಮಲ್ಗನ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀಸೆಲ್ವ ಜಯರಾಮನ್, ಶ್ರೀಮತಿ ಪ್ರತಿಭಾ ಜಯರಾಮನ್, ಶ್ರೀ ಕುಮಾರ್ ರಾಜಶೇಖರ್, ಶ್ರೀ ರಾಜೀವ್ ಮಹಾಜನ್, ಶ್ರೀಮತಿ ಶಾಲಿನಿ ಗುಪ್ತಾ, ಶ್ರೀ ಸುರೇಶ್ ದಾಸರಿ, ಶ್ರೀ ಆರ್. ಮಹೇಶ್, ಶ್ರೀ ಸಾಯಿ, ಸ್ಪಿರಿಚ್ಯುಯಲ್ ಮಿಷನ್ನಿನ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಭಗವಂತನಲ್ಲಿ ಶ್ರದ್ಧೆ ಭಕ್ತಿ ಅಗತ್ಯ

ಭಗವಂತನಲ್ಲಿ ಶ್ರದ್ಧೆ ಮತ್ತು ಭಕ್ತಿ ಅಗತ್ಯ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಜೂನ್ 6ರಂದು ಅಮೆರಿಕದ ಮೆರಿಲ್ಯಾಂಡ್‌ನ ಪೊಟೊಮ್ಯಾಕ್‌ನಲ್ಲಿ ಬಿಸಿನೆಸ್ ಇಂಟೆಗ್ರಾ ಕಂಪನಿಯ ಶ್ರೀ ಸೆಲ್ವ

ಜಯರಾಮನ್ ಹಾಗೂ ಶ್ರೀಮತಿ ಪ್ರತಿಭಾ ಜಯರಾಮನ್‌ರವರ ನಿವಾಸದಲ್ಲಿ ಏರ್ಪಡಿಸಿದ್ದ ವಿಶೇಷ ಪೂಜೆ ಹಾಗೂ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತ ತಿಳಿಸಿದರು. ಭಗವಂತನ ಸೃಷ್ಟಿ ವಿಶಾಲವಾದುದು. ಮನುಷ್ಯ ಜನ್ಮ ಪವಿತ್ರವಾದುದು. ಬದುಕನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಿಕೊಂಡು ಮೋಕ್ಷ ಸಾಧನೆಯ ಪಥದಲ್ಲಿ ಸಾಗಬೇಕು. ಭಗವಂತನಲ್ಲಿ ಭಕ್ತಿ, ಶ್ರದ್ಧೆ ಮತ್ತು ನಂಬಿಕೆಯನ್ನು ಬೆಳೆಸಿಕೊಳ್ಳಬೇಕು. ಹಾಗಾದಾಗ ಜೀವನದಲ್ಲಿ ನೆಮ್ಮದಿ, ಸಂತೋಷ ದೊರಕಲು ಸಾಧ್ಯ. ಶ್ರೀ ಸೆಲ್ವ ಜಯರಾಮನ್ ಹಾಗೂ ಶ್ರೀಮತಿ ಪ್ರತಿಭಾ ಜಯರಾಮನ್‌ರವರುಗಳು ಭಗವಂತನಲ್ಲಿ ಅಂತಹ ಶ್ರದ್ಧೆ ನಂಬಿಕೆಗಳನ್ನು ಉಳ್ಳವರು. ಸಾರ್ವಜನಿಕರೊಂದಿಗೆ ಉತ್ತಮ ಸಂಬಂಧ ಹೊಂದಿರುವವರು. ಎಲ್ಲರೊಂದಿಗೆ ಸರಳವಾಗಿ ಬೆರೆಯುವವರು. ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನ ಎಲ್ಲ ಕಾರ್ಯಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ಶ್ರೀ ಸೆಲ್ವ ಜಯರಾಮನ್‌ರವರು ಸ್ವಾಗತಿಸಿ, ಶ್ರೀಮಠದಿಂದ ನಡೆಯುತ್ತಿರುವ ಶೈಕ್ಷಣಿಕ ಸೇವಾಕಾರ್ಯಗಳು ಹಾಗೂ ಸುತ್ತೂರಿನಲ್ಲಿ ನಡೆಯುವ ಜಾತ್ರಾ ಮಹೋತ್ಸವದ ವಿಶೇಷತೆಗಳನ್ನು ಪರಿಚಯಿಸಿದರು. ಸತ್ಸಂಗಕ್ಕೆ ಮೊದಲು ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಸುತ್ತಮುತ್ತಲಿನ ವಿವಿಧ ಬಡಾವಣೆಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಪ್ರತಿಭಾ ಜಯರಾಮನ್‌ರವರು ವಂದಿಸಿದರು.

ಫಾರ್ಮಸಿ ಪದವೀಧರರಿಗೆ ವಿಪುಲ ಅವಕಾಶಗಳು

ಫಾರ್ಮಸಿ ಪದವೀಧರರಿಗೆ ವಿಪುಲ ಅವಕಾಶಗಳಿದ್ದು ಅದಕ್ಕೆ ಅಗತ್ಯವಾದ ರೀತಿಯಲ್ಲಿ ಜ್ಞಾನ ಹಾಗೂ ಅನುಭವಗಳನ್ನು ಬೆಳೆಸಿಕೊಳ್ಳಬೇಕೆಂದು ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮಕುಲಪತಿಗಳಾದ ಡಾ. ಬಿ. ಸುರೇಶ್‌ರವರು ಜೂನ್ 13ರಂದು ಜಮ್ಮುವಿನ ವಿಜಯಪುರದ ನಜ್ವಾಲ್‌ನಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಮಾತನಾಡುತ್ತಾ ತಿಳಿಸಿದರು. ಕಟ್ಟಡ ಮೊದಲಾದ ಇತರ ಸೌಲಭ್ಯಗಳಿಗಿಂತ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಉತ್ತಮ ಬಾಂಧವ್ಯದಿಂದ ಜ್ಞಾನ ಸಂಪಾದಿಸಲು ಹಾಗೂ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ದೂರದೃಷ್ಟಿಯ ಉತ್ತಮ ಧ್ಯೇಯ ಮತ್ತು ಆಶಯಗಳನ್ನಿಟ್ಟುಕೊಂಡು ಸಕಾರಾತ್ಮಕವಾಗಿ ತೊಡಗಿಸಿಕೊಂಡರೆ ಎಲ್ಲ ರೀತಿಯ ಯಶಸ್ಸು ಪಡೆಯಲು ಸಾಧ್ಯ. ಡಾ. ಅಬ್ದುಲ್ ಕಲಾಂರವರು ಹೇಳುತ್ತಿದ್ದಂತೆ ಉತ್ತಮ ಕನಸುಗಳನ್ನು ಕಂಡು ಅವುಗಳನ್ನು ಆಚರಣೆಗೆ ತರಲು ಪ್ರಯತ್ನಿಸಿದರೆ ಫಲ ಕಾಣಲು ಸಾಧ್ಯವಾಗುತ್ತದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ಹಾಗೂ ಆಶೀರ್ವಾದಗಳೊಂದಿಗೆ ಸಂಸ್ಥೆಯನ್ನು ಜಮ್ಮುವಿನಲ್ಲಿ ಉತ್ತಮ ರೀತಿಯಲ್ಲಿ ಬೆಳೆಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಸದ್ಯದಲ್ಲಿಯೇ ಜಮ್ಮುವಿನಲ್ಲಿ ಸಂಸ್ಥೆಗೆ ನಿವೇಶನವನ್ನು ಪಡೆಯಲಿದ್ದು, ಆದಷ್ಟು ಜಾಗ್ರತೆ ಎಲ್ಲ ರೀತಿಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸರ್ವರನ್ನೂ ಆಶೀರ್ವದಿಸಿದರು. ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಜಯರಾಜೇಂದ್ರರು, ಶ್ರೀ ಶಿವಶಂಕರ್, ಶ್ರೀ ಪಿ. ರಾಜಣ್ಣ, ಮೈಸೂರು ಮತ್ತು ಊಟಿಯ ಫಾರ್ಮಸಿ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ. ದೊರೆಸ್ವಾಮಿಯವರು ಸ್ವಾಗತಿಸಿದರು. ಪ್ರಾಧ್ಯಾಪಕರಾದ ಡಾ. ಶುಮೈಲ್ ಅತಿಥಿಗಳನ್ನು ಪರಿಚಯಿಸಿದರು.

ಶರಣರ ವಚನಗಳು ಪ್ರತಿಯೊಬ್ಬರಿಗೂ ದಾರಿದೀಪ

ಶರಣರ ವಚನಗಳು ಪ್ರತಿಯೊಬ್ಬರಿಗೂ ದಾರಿದೀಪವಾಗಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 23ರಂದು ಕುಶಾಲನಗರದಲ್ಲಿ ಆಯೋಜಿಸಿದ್ದ ಪ್ರಥಮ ಕೊಡಗು ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶರಣರ ತತ್ತ್ವಗಳು ಉತ್ತಮ ಮಾರ್ಗದರ್ಶನ, ಆತ್ಮಪ್ರೇರಣೆ, ಆತ್ಮವಿಶ್ವಾಸ ಮೂಡಿಸುತ್ತವೆ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ವಚನ ಸಾಹಿತ್ಯ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷರಾದ ಅರಮೇರಿ ಶ್ರೀ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಕೊಡಗು ವಿಶ್ವವಿದ್ಯಾಲಯದಲ್ಲಿ ಶರಣ ಚಿಂತನೆಗಳ ಅಧ್ಯಯನಕ್ಕೆ ಬಸವ ಪೀಠ ಸ್ಥಾಪಿಸಬೇಕು. ಶಾಲಾ–ಕಾಲೇಜುಗಳಲ್ಲಿ ಸರಳ ವಚನಗಳ ಕಂಠಪಾಠ ಮಾಡಿಸಬೇಕು. ಹಳ್ಳಿ ಹಳ್ಳಿಗಳಲ್ಲಿ ಪೂಜ್ಯರ ಸತ್ ಸಂಕಲ್ಪದಂತೆ ಬಸವಾದಿ ಶರಣರ ಚಿಂತನೆಗಳನ್ನು ಹರಡಿ ಸಮಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಬೇಕು ಎಂದರು.

ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ಶರಣ ಸ್ಮರಣೆ ಎಲ್ಲಿ ಇರುತ್ತದೊ ಅಲ್ಲಿ ಸಂಸ್ಕಾರ, ಸಾಹಿತ್ಯ, ಸಂಗೀತ, ನಾಡುನುಡಿಯ ಸೇವೆ ಇರುತ್ತದೆ. ಶರಣರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕೆಂದರು.

ಕೊಡ್ಲಿಪೇಟೆ ಶ್ರೀ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಮ್ಮತ್ತಿ, ದಿಂಡಗಾಡು, ಸೋಮವಾರಪೇಟೆ, ಮನೆಹಳ್ಳಿ ಮಠ, ಸಿಡಿಗಳಲೆ ಮಠಗಳ ಶ್ರೀಗಳು ಉಪಸ್ಥಿತರಿದ್ದರು. ಶಾಸಕರಾದ ಡಾ. ಮಂಥರ್ ಗೌಡರವರು ಶರಣ ಸಂಪದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಕುಲಪತಿಗಳಾದ ಪ್ರೊ. ಅಶೋಕ ಸಂಗಪ್ಪ

ಆಲೂರ, ಡಾ. ಸಿ. ಸೋಮಶೇಖರ್, ಶ್ರೀಮತಿ ಸುಶೀಲಾ ಸೋಮಶೇಖರ್‌ರವರುಗಳು ಮಾತನಾಡಿದರು. ಶ್ರೀ ಕೆ.ಎಸ್. ಮೂರ್ತಿ ಸ್ವಾಗತಿಸಿದರು. ಶ್ರೀ ಟಿ.ಜಿ. ಪ್ರೇಮಕುಮಾರ್ ವಂದಿಸಿದರು. ಶ್ರೀಮತಿ ಹೇಮಲತಾ ಹಾಗೂ ಡಾ. ಜಮೀರ್ ಅಹಮದ್ ಕಾರ್ಯಕ್ರಮ ನಿರೂಪಿಸಿದರು.

ಸಮಾಜದಲ್ಲಿ ಶಾಂತಿ ಸಹಬಾಳ್ವೆ ಮುಖ್ಯ

ಸಂಘ–ಸಂಸ್ಥೆಗಳು ಸಮಾಜದ ಉನ್ನತಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದು, ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಹಾಗೂ ನೆಮ್ಮದಿಯ ಜೀವನ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 26ರಂದು ಕರ್ನಾಟಕ ರಾಜ್ಯ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಿದ್ದ ಪದವಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಂಸ್ಥೆಯ ವಿದ್ಯಾರ್ಥಿಗಳಿಗೆ ವಿವಿಧ ಶೈಕ್ಷಣಿಕ ಹಾಗೂ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಶಿಸ್ತು, ತಾಳ್ಮೆ, ಸಂಸ್ಕೃತಿ ಹಾಗೂ ಹಿರಿಯರಿಗೆ ಗೌರವ ನೀಡುವ ಮೌಲ್ಯಗಳನ್ನು ಬೆಳೆಸಲಾಗುತ್ತಿದೆ ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 30 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾದ ಶ್ರೀ ಕೆ.ಎಸ್. ಮಹಾದೇವಪ್ರಸಾದ್‌ರವರನ್ನು ಸನ್ಮಾನಿಸಲಾಯಿತು.

ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ರಾಜ್ಯ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಸೋಮಶೇಖರಯ್ಯ, ಜಿಲ್ಲಾಧ್ಯಕ್ಷರಾದ ಶ್ರೀ ಬಿ.ಆರ್. ಶಿವಕುಮಾರ್, ಗೌರವಾಧ್ಯಕ್ಷರಾದ ಶ್ರೀ ಆಲೂರು ಬಸವರಾಜು ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಹೆಚ್.ವಿ. ಮಹದೇವಪ್ರಸಾದ್ ಸ್ವಾಗತಿಸಿದರು. ಶ್ರೀ ಸಂತೋಷ್ ಬಾಣಹಳ್ಳಿ ಪ್ರಾರ್ಥಿಸಿದರು. ಶ್ರೀ ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಜಿ.ಎಸ್. ಮಹೇಶ್ ವಂದಿಸಿದರು. ಶ್ರೀ ಬಾಗಳಿ ಮಹೇಶ್ ಕಾರ್ಯಕ್ರಮ ನಿರೂಪಿಸಿದರು.

ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರನ್ನು ಕಟ್ಟಿದರು

ಶ್ರೀ ಕೆಂಪೇಗೌಡರು ದೂರದೃಷ್ಟಿ ಇಟ್ಟುಕೊಂಡು ಬೆಂಗಳೂರನ್ನು ಕಟ್ಟಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 27ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತಿನ ಪ್ರಸಿದ್ಧ ನಗರಗಳಲ್ಲಿ ಬೆಂಗಳೂರು ಒಂದಾಗಿದೆ. ರಾಜಪ್ರಭುತ್ವವಿದ್ದ ಸಂದರ್ಭದಲ್ಲಿ ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರು ನಗರಕ್ಕೆ ಅಡಿಗಲ್ಲು ಹಾಕಿದರು. ಇಂದು ಬೆಂಗಳೂರು ಬೃಹದಾಕಾರವಾಗಿ ಬೆಳೆದಿದೆ. ಶ್ರೀ ಡಿ.ಕೆ. ಶಿವಕುಮಾರ್‌ರವರ ನೇತೃತ್ವದ ಸರ್ಕಾರ, ಕೆಂಪೇಗೌಡರ ಆಶಯಕ್ಕೆ ತಕ್ಕಂತೆ ನಗರದ ಬೆಳವಣಿಗೆ ದೃಷ್ಟಿಯಿಂದ ಇನ್ನಷ್ಟು ಒಳ್ಳೆಯ ಕೆಲಸಗಳನ್ನು ಮಾಡಲಿ ಎಂದು ಹಾರೈಸಿದರು.

ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಬೆಂಗಳೂರು ಮೂವರನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಬೆಂಗಳೂರು ಕಟ್ಟಿದ ಶ್ರೀ ಕೆಂಪೇಗೌಡರು, ವಿಧಾನಸೌಧ ಕಟ್ಟಿದ ಶ್ರೀ ಕೆಂಗಲ್ ಹನುಮಂತಯ್ಯನವರು ಹಾಗೂ ಬೆಂಗಳೂರನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಶ್ರೀ ಎಸ್.ಎಂ. ಕೃಷ್ಣರವರುಗಳನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 'ಶಿಪಿಂಗ್ ದ ಗ್ಲೋಬಲ್ ಬೆಂಗಳೂರು' ಕೃತಿ ಬಿಡುಗಡೆ ಮಾಡಲಾಯಿತು. ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು. ಆದಿಚುಂಚನಗಿರಿ ಜಗದ್ಗುರುಗಳು, ಪಟ್ಟನಾಯಕನಹಳ್ಳಿ ಶ್ರೀಗಳು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀಗಳು, ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ, ಸಚಿವರುಗಳಾದ ಶ್ರೀ ಕೃಷ್ಣ ಬೈರೇಗೌಡ, ಶ್ರೀ ಕೆ.ಜೆ. ಜಾರ್ಜ್, ಶ್ರೀ ಕೆ.ಎಚ್. ಮುನಿಯಪ್ಪ, ಶ್ರೀ ಬೈರತಿ ಸುರೇಶ್, ಶಾಸಕರುಗಳಾದ ಶ್ರೀ ಹೆಚ್.ಸಿ. ಬಾಲಕೃಷ್ಣ, ಶ್ರೀ ಎನ್.ಎ. ಹ್ಯಾರಿಸ್, ಶ್ರೀ ಬಿ. ಶಿವಣ್ಣ, ಶ್ರೀ ಟಿ.ಬಿ. ಜಯಚಂದ್ರ, ಶ್ರೀ ಎಸ್.ಟಿ. ಸೋಮಶೇಖರ್ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್.ಎಂ. ರೇವಣ್ಣ, ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್ ಮೊದಲಾದವರುಗಳು ಉಪಸ್ಥಿತರಿದ್ದರು.

ಮಠಗಳು ಮನುಷ್ಯನಲ್ಲಿ ಧಾರ್ಮಿಕ ಪ್ರಜ್ಞೆ ಬಿಂಬಿಸುತ್ತವೆ

ಮನುಷ್ಯನಿಗೆ ಧಾರ್ಮಿಕ ಪ್ರಜ್ಞೆ, ಆಚರಣೆ, ದೇವರಲ್ಲಿ ಶ್ರದ್ಧೆ, ಭಕ್ತಿ ಎಲ್ಲಾ ಬಹಳ ಮುಖ್ಯ. ಅವುಗಳನ್ನು ಮನುಷ್ಯನ ಮನಸ್ಸಿನಲ್ಲಿ ಬಿಂಬಿಸಲು ಮಠಗಳು ಕಾರ್ಯನಿರ್ವಹಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 28ರಂದು ರಾಮನಗರ ತಾಲ್ಲೂಕು ಅವ್ವೇರಹಳ್ಳಿ ಶ್ರೀ ರೇವಣಸಿದ್ಧೇಶ್ವರ ಬೆಟ್ಟದ ದಾಸೋಹ ಮಠದಲ್ಲಿ ನಡೆದ ಶ್ರೀ ಬಸವಲಿಂಗರಾಜ ಸ್ವಾಮಿಗಳ ಸಂಸ್ಮರಣೋತ್ಸವ, ಮಠದ ನವೀಕೃತ ಕಟ್ಟಡ ಉದ್ಘಾಟನೆ ಹಾಗೂ ಉಚಿತ ಸಾಮೂಹಿಕ ವಿವಾಹದ ದಿವ್ಯ ಸಾನ್ನಿಧ್ಯ ವಹಿಸಿ

ಮಾತನಾಡುತ್ತಾ ತಿಳಿಸಿದರು. ಶ್ರೀ ರೇವಣಸಿದ್ಧೇಶ್ವರ ಬೆಟ್ಟ ಕರ್ನಾಟಕದ ಒಂದು ಪ್ರಮುಖ ಶ್ರದ್ಧಾ ಕೇಂದ್ರ. ನಿಷ್ಠಾವಂತ ಭಕ್ತರಿರುವ ಪವಿತ್ರವಾದ ಕ್ಷೇತ್ರ. ಸಾವಿರ ವರ್ಷಗಳ ಇತಿಹಾಸವಿರುವ ಶ್ರೀ ರೇವಣಸಿದ್ಧೇಶ್ವರ ಬೆಟ್ಟವು, ಭಕ್ತಾದಿಗಳ ಆಶಯವನ್ನು ಈಡೇರಿಸುವ, ಅವರ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುವ ಪವಿತ್ರ ಧಾರ್ಮಿಕ ತಾಣವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ದಾಸೋಹ ಮಠವು ಹೆಸರಿಗೆ ತಕ್ಕಂತೆ ನಿರಂತರವಾಗಿ ದಾಸೋಹವನ್ನು ನಡೆಸುತ್ತಾ ಬಂದಿದೆ ಎಂದು ತಿಳಿಸಿದರು.

ಸಿದ್ಧಗಂಗಾ ಶ್ರೀಗಳು ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿ ಮಾಂಗಲ್ಯ ವಿತರಿಸಿ ಆಶೀರ್ವದಿಸಿದರು. ಚಕ್ರಬಾವಿ, ಮಾಗಡಿ, ಮಡೇನಹಳ್ಳಿ, ಮಾದಾಪುರ, ರೇವಣಸಿದ್ದೇಶ್ವರ ಬೆಟ್ಟ, ಕುಂದೂರು ಬೆಟ್ಟ ಮಠಗಳ ಶ್ರೀಗಳು, ಶ್ರೀ ಎಂ. ರುದ್ರೇಶ್, ಶ್ರೀ ಜಿ. ಮರಿಸ್ವಾಮಿ, ಶ್ರೀ ಹೆಚ್.ಎಸ್. ಯೋಗಾನಂದ್, ಶ್ರೀ ಶಿವಲಿಂಗಯ್ಯ, ಶ್ರೀ ರಾಜಶೇಖರ್ ಮೊದಲಾದವರು ಉಪಸ್ಥಿತರಿದ್ದರು.

□

ಗುರುಸಾಹಿತ್ಯ ಚೆನ್ನಬಸವಂಗಾಯಿತ್ತು
ಲಿಂಗಸಾಹಿತ್ಯ ಬಸವಂಗಾಯಿತ್ತು
ಜಂಗಮಸಾಹಿತ್ಯ ಅಲ್ಲಮದೇವಂಗಾಯಿತ್ತು
ಪ್ರಸಾದಸಾಹಿತ್ಯ ಬಿಬ್ಬಿಬಾಚರಸಂಗಾಯಿತ್ತು
ಪಾದೋದಕಸಾಹಿತ್ಯ ಹೊಡೆಹುಲ್ಲ ಬಂಕಯ್ಯಂಗಾಯಿತ್ತು
ಭಸ್ಮಸಾಹಿತ್ಯ ಅಕ್ಕನಾಗಮ್ಮಂಗಾಯಿತ್ತು
ರುದ್ರಾಕ್ಷಿಸಾಹಿತ್ಯ ಸರ್ವಪ್ರಮಥರಿಗಾಯಿತ್ತು
ಮಂತ್ರಸಾಹಿತ್ಯದವರ ಕಂಡಡೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನಿವರೆ ಎಂದು
ಎನ್ನ ಮನ ನಂಬಿತ್ತು ನೋಡಾ, ಮಡಿವಾಳ ಮಾಚಯ್ಯ

ಸಿದ್ಧರಾಮೇಶ್ವರ

ಪ್ರಸಾದ



ಕೃತಿ–ಸ್ವೀಕೃತಿ

ಉರಿಲಿಂಗಪೆದ್ದಿಗಳ ವಿದ್ವತ್ತಿನ ವಚನಗಳು
ಡಾ. ಸಂಗಮೇಶ ಸವದತ್ತಿ ಮಠ
ಪ್ರ: ರೂಪರಶ್ಮಿ ಪ್ರಕಾಶನ
ಕುಮಾರೇಶ್ವರ ನಗರ, ಧಾರವಾಡ
ಪು: 340, ಬೆಲೆ: 350/–

ಮಾನವೀಯತೆಯತ್ತ ತುಡಿಯುವ
ಪ್ರೊ. ಉಮರ ಶರೀಫ ಎನ್. ಕುಂಟೋಜಿ
ಪ್ರ: ಆನಂದಿ ಪ್ರಕಾಶನ
ಉತ್ತರಾದಿ ಮಠದ ರಸ್ತೆ
ಫೋರ್ಟ್ ಮೊಹಲ್ಲಾ, ಮೈಸೂರು
ಪು: 98, ಬೆಲೆ: 120/–

ಶೂನ್ಯ ತತ್ತ್ವಾನುಭವ
ಮುದ್ದೇನಹಳ್ಳಿ ನಂಜಯ್ಯ
ಪ್ರ: ರವಿಚಂದ್ರ ಪ್ರಕಾಶನ
ಮುದ್ದೇನಹಳ್ಳಿ
ತುಮಕೂರು ತಾ. ಮತ್ತು ಜಿ.
ಪು: 216, ಬೆಲೆ: 250/–

Kautilya's Arthasastra
Vinayak Rajat Bhat
Tejusvi Shukla
Garuda Prakashana
Rs.: 349/–

ಕಲ್ಯಾಣ ಕಾರುಣ್ಯ
ಸಂ.: ಡಾ. ಕಲ್ಯಾಣರಾವ ಜಿ. ಪಾಟೀಲ
ಪ್ರ: ಮಹೋತ್ಸವ ಸಮಿತಿ
ಹಿರೇಮಠ ಸಂಸ್ಥಾನ
ಬಾಲ್ಕಿ, ಬೀದರ ಜಿಲ್ಲೆ
ಪು: 612, ಬೆಲೆ: 750/–

ಶರಣರ ಶಿವಯೋಗ
ಡಾ. ದಯಾನಂದ ಈ. ನೂಲಿ
ಪ್ರ: ಸಿರಿಗನ್ನಡ ಬಳಗ
ಕಮಲ ಆಸ್ಪತ್ರೆ, ಚಿಕ್ಕೋಡಿ
ಪು: 1385, ಬೆಲೆ: 1500/–

ಘನ ಸಂಪನ್ನರು
ಪ್ರೊ. ಉಮರ ಶರೀಫ ಎನ್. ಕುಂಟೋಜಿ
ಪ್ರ: ಅನಿರುದ್ಧ ಪ್ರಕಾಶನ
ಉತ್ತರಾದಿ ಮಠದ ರಸ್ತೆ
ಫೋರ್ಟ್ ಮೊಹಲ್ಲಾ, ಮೈಸೂರು
ಪು: 82, ಬೆಲೆ: 100/–

ಶರಣಲೋಕ
ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ
ಭಾಲ್ಕಿ, ಬೀದರ ಜಿಲ್ಲೆ
ಪು: 724, ಬೆಲೆ: 200/–

ನಿಜಪದವನೆಯ್ದಿದ ಮಹಾದೇವಿಯಕ್ಕ
ಮುದ್ದೇನಹಳ್ಳಿ ನಂಜಯ್ಯ
ಪ್ರ: ರವಿಚಂದ್ರ ಪ್ರಕಾಶನ
ಮುದ್ದೇನಹಳ್ಳಿ
ತುಮಕೂರು ತಾ. ಮತ್ತು ಜಿ.
ಪು: 96, ಬೆಲೆ: 140/–

ನಾಥರು ಶರಣರು ಸೂಫಿಗಳು
ಡಾ. ಬಸವರಾಜ ಸಬರದ
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ, ಬೀದರ ಜಿಲ್ಲೆ
ಪು: 164, ಬೆಲೆ: 120/–

ಸಾವಧಾನಿ (ಭಾಲ್ಕಿಯ ಡಾ. ಬಸವಲಿಂಗ ಪಟ್ಟದ್ದೇವರ ಕುರಿತ ಕಾವ್ಯ)
ಡಾ. ಸೋಮನಾಥ ಯಾಳವಾರ
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಭಾಲ್ಕಿ, ಬೀದರ ಜಿಲ್ಲೆ
ಪು: 224, ಬೆಲೆ: 100/–

ಲೇಖಕರ ವಿಳಾಸ

ಡಾ. ಬಿ. ನಂಜುಂಡಸ್ವಾಮಿ
ಪಂಡಿತ ತಾರಾನಾಥ್ ಆಯುರ್ವೇದ
ಚಿಕಿತ್ಸಾಲಯ
ತುಮಕೂರು ಶಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ, ತುಮಕೂರು–572102
ಮೊ : 98809 96196

ಶ್ರೀ ಸಿ.ಎಂ. ಲಿಂಗರಾಜು
ಸಹ ಪ್ರಾಧ್ಯಾಪಕರು
ಜೆಎಸ್ಎಸ್ ನರ್ಸಿಂಗ್ ಕಾಲೇಜು
ರಾಮಾನುಜ ರಸ್ತೆ
ಮೈಸೂರು 570 004
ಮೊ: 99802 66150

ಶ್ರೀ ವೆಂಕಟೇಶ ಕೆ. ಜನಾದ್ರಿ
ಸಹಾಯಕ ಲೆಕ್ಕಾಧಿಕಾರಿ
ಕಲಬುರ್ಗಿ ವಿಭಾಗ–27
ಕಲಬುರ್ಗಿ– 585 102
ಮೊ: 99453 30492

ಶ್ರೀ ನಗರ್ಲೆ ಶಿವಕುಮಾರ
ಬಿನ್ ಲೇ. ಪಟೇಲ್ ರಾಜಶೇಖರ
ನಗರ್ಲೆ ಗ್ರಾಮ & ಅಂಚೆ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 98456 09652

ಹಿಂಬದಿ ಪುಟದ ಚಿತ್ರ

ಅಯೋಧ್ಯೆಯ ಶ್ರೀರಾಮ ಮಂದಿರಕ್ಕೆ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿದ ಸಂದರ್ಭ. ಶ್ರೀ ಪಿ. ರಾಜಣ್ಣ, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್ ಹಾಗೂ ಸೇವಾ ಸಿಬ್ಬಂದಿ ವರ್ಗದವರುಗಳಿದ್ದಾರೆ (15 ಜೂನ್ 2026)



ಅಮೆರಿಕದ ಮೆರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ಗೆ ಜೂನ್ 5ರಂದು ಮಾಂಟ್‌ಗೋಮರಿ ಕೌಂಟಿಯ ಎಕ್ಸಿಕ್ಯುಟಿವ್‌ರವರಾದ ಶ್ರೀ ಮಾರ್ಕ್ ಎಲ್ರಿಚ್‌ರವರು ಆಗಮಿಸಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿ ಸನ್ಮಾನಿಸಿದರು. ಟೈಟಲ್ ಕಂಪನಿಯ ಶ್ರೀ ತನ್ವೀರ್, ಮಿಷನ್ನಿನ ಪದಾಧಿಕಾರಿಗಳು ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು (5 ಜೂನ್ 2026)



ಅಮೆರಿಕದ ಮೆರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ಗೆ ಜೂನ್ 5ರಂದು ಟ್ರುಸ್ಟಾರ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಾರ್ಜ್ ಕಾನರ್ಸ್‌ರವರು ಬ್ಯಾಂಕಿನ ಅಧಿಕಾರಿಗಳೊಂದಿಗೆ ಆಗಮಿಸಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಆಶೀರ್ವದಿಸಿದರು. ಮಿಷನ್ನಿನ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು (5 ಜೂನ್ 2026)



ಕುಶಾಲನಗರದಲ್ಲಿ ಪ್ರಥಮ ಕೊಡಗು ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಸಿ. ಸೋಮಶೇಖರ, ಶ್ರೀ ಹೆಚ್.ಎಸ್. ಚಂದ್ರಮೌಳಿ, ಅರಮೇರಿ ಶ್ರೀಗಳು, ಶ್ರೀ ಬಸವರಾಜ ಎಸ್. ಹೊರಟ್ಟಿ, ಡಾ. ಮಂಥರ್ ಗೌಡ, ಪ್ರೊ. ಅಶೋಕ್ ಎಸ್. ಆಲೂರ್, ಶ್ರೀ ಕೆ.ಎಸ್. ಮೂರ್ತಿ ಮೊದಲಾದವರಿದ್ದಾರೆ (23 ಜೂನ್ 2026)




ರಾಮನಗರ ತಾಲ್ಲೂಕು ಅವ್ವೇರಹಳ್ಳಿ ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಮಠದಲ್ಲಿ ನಡೆದ ಶ್ರೀ ಬಸವಲಿಂಗರಾಜ ಶಿವಾಚಾರ್ಯ ಸ್ವಾಮಿಗಳ ಸಂಸ್ಮರಣೋತ್ಸವ, ಮಠದ ನವೀಕೃತ ಕಟ್ಟಡ ಉದ್ಘಾಟನೆ ಹಾಗೂ ಉಚಿತ ಸಾಮೂಹಿಕ ವಿವಾಹದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿದರು. ಶ್ರೀ ಎಂ. ರುದ್ರೇಶ್, ಶ್ರೀ ಜಿ. ಮರಿಸ್ವಾಮಿ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೆಚ್. ಎಸ್. ಯೋಗಾನಂದ್ ಮೊದಲಾದವರಿದ್ದಾರೆ (28 ಜೂನ್ 2026)



ಅಮೆರಿಕದ ಮೆರಿಲ್ಯಾಂಡ್‌ನ ಪೊಟೊಮ್ಯಾಕ್‌ನಲ್ಲಿ ಬಿಸಿನೆಸ್ ಇಂಟೆಗ್ರಾ ಕಂಪನಿಯ ಶ್ರೀ ಸೆಲ್ವ ಜಯರಾಮನ್ ಹಾಗೂ ಶ್ರೀಮತಿ ಪ್ರತಿಭಾ ಜಯರಾಮನ್‌ರವರ ನಿವಾಸದಲ್ಲಿ ಏರ್ಪಡಿಸಿದ್ದ ವಿಶೇಷ ಪೂಜೆ ಹಾಗೂ ಸತ್ಸಂಗದ ಸಂದರ್ಭದಲ್ಲಿ ಪರಮಪೂಜ್ಯರೊಂದಿಗೆ ಕುಟುಂಬದ ಸದಸ್ಯರು ಹಾಗೂ ಭಕ್ತಾದಿಗಳ ಸಮೂಹ ಚಿತ್ರ (6 ಜೂನ್ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 6, June 2026



ISSN 2583-7648

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org